ಗೌರಿ ಲಂಕೇಶರ

ಲಂಕೇಶ್

ಆಗಸ್ಟ್ 16, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋಧನೆ



ಮತ್ತೊಂದು ಸ್ಕೂಪ್!

ಗಣಿ ಧಂದೆಯಲ್ಲಿ

ಯಡ್ಡಿ-ಶೋಭ



ಗೋಲ್‌ಮಾಲ್ ಗೌಡ-2



ಆಸ್ತಿ ಖರೀದಿ - ಕೋರ್ಟ್ ಆದೇಶ ಉಲ್ಲಂಘನೆ

- ಪೊಲೀಸ್ ಶಾಮೀಲು, ಮಾಲೀಕನಿಗೆ ವಂಚನೆ
- 'ಇಷ್ಟೂ ಯೋಗ್ಯತೆ ಇಲ್ವಾ ಸಾ' ಎಂದ ಡಾ.ರಮೇಶ್


ಕುರುಬ ಮಠದ ದುಡ್ಡು ಬ್ರಾಹ್ಮಣನ ಪಾಲು!

ಕಳ್ಳತನಕ್ಕೆ ಮುಂಚೆ ಕುಲದೇವತೆಯ ಪೂಜೆಯೇ...!

ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಇತ್ತೀಚೆಗೆ ತಾವು ಎದುರಿಸುತ್ತಿರುವ ಕಷ್ಟಗಳಿಗೆಲ್ಲಾ ತಾವು ಕುಲದೇವತೆಯನ್ನು ಮರೆತಿದ್ದೇ ಕಾರಣವೆಂದು ತಮ್ಮ ಕುಲದೇವತೆಗೆ ಮಾತ್ರವಲ್ಲದೇ ಕಂಡಕಂಡ ದೇವಾನುದೇವತೆಗಳಿಲ್ಲಕ್ಕೂ ಪೂಜೆ ಸಲ್ಲಿಸುತ್ತಾ ಬರುತ್ತಿದ್ದಾರೆ. ಆದರೆ ಸಮಸ್ಯೆ ಏನೆಂದರೆ ಈ ನಾಡಿನ ರಾಜಕಾರಣಿಗಳ ಮುಸುಕಿನಲ್ಲಿರುವ ಕಳ್ಳಕಾಕರು, ದರೋಡೆಕೋರರಲ್ಲರೂ ಇದೇ ದೇವರುಗಳ ಒಕ್ಕಲೇ ಆಗಿದ್ದಾರೆ. ಹೀಗಾಗಿ ಆ ದೇವರು ತಾನೆ ಏನು ಮಾಡಬೇಕು? ಆದ್ದರಿಂದ ಆ ದೇವರು ಸಹಾ ಪ್ರಾಯಶಃ ಮೊದಲು ಬಂದವರಿಗೆ ಆದ್ಯತೆಯೆಂಬ ಆಧಾರದ ಮೇಲೆ ಆಶೀರ್ವಾದಗಳನ್ನು ಬಿಕರಿ ಮಾಡುತ್ತಿರಬೇಕು! ಹೀಗಾಗಿ ಈ ರೇಸ್‌ನಲ್ಲಿ ಕುಮಾರಸ್ವಾಮಿಯವರು ಹಿಂದೆ ಬಿದ್ದಿರಬಹುದು.. ಆದರೆ ಡಿ.ಕೆ.ಶಿ.ಯ ದರೋಡೆಯನ್ನು ಕುಮಾರಸ್ವಾಮಿ ಬಯಲುಗೊಳಿಸಿದರೆ ಗೋಲ್‌ಮಾಲ್ ಗೌಡರ ಹೂರಣಗಳೆನ್ನಲ್ಲಾ ಡಿ.ಕೆ.ಶಿ. ಬಯಲು ಗೊಳಿಸಿದ್ದಾರೆ. ಇದರ ಒಟ್ಟು ತಾತ್ಪರ್ಯವೇನು? ಇಬ್ಬರೂ ಹಗಲು ದರೋಡೆಕೋರರೆಂಬುದೇ ಅಲ್ಲವೇ..!

ಇದನ್ನೆಲ್ಲಾ ಗಮನಿಸಿದ ಹಿರಿಯ ಸ್ನೇಹಿತರೊಬ್ಬರು ಮೊನ್ನೆ ಕುಮಾರಸ್ವಾಮಿಯವರು ಕುಲದೇವತೆಯ ಪೂಜೆ ಮಾಡುತ್ತಾ ತೆಗೆಸಿಕೊಂಡ ಫೋಟೋವನ್ನು ದಿನಪತ್ರಿಕೆಯಲ್ಲಿ ನೋಡಿ ತಮ್ಮ ಹಳ್ಳಿಕಡೆ ಚಾಲ್ತಿಯಲ್ಲಿರುವ ಕಥೆಯನ್ನು ನೆನೆಪಿಸಿಕೊಂಡರು. ಅವರ ಕಡೆ ವೃತ್ತಿನಿರತ ಕಳ್ಳರು ತಮ್ಮ ವೃತ್ತಿ ಪ್ರಾರಂಭಿಸುವ ಮುನ್ನ .ಹೀಗೆ ಕುಲದೇವತೆಯ ಪೂಜೆ ಮಾಡುತ್ತಾರಂತೆ.

ತಾಯಿ ಚೌಡಮ್ಮ, ಅಮ್ಮ ಮಾರಮ್ಮ
ಕಳ್ಳತನಕ್ಕೆ ಹೊರಟಿದ್ದೇವೆ,
ಸಿಕ್ಕಿಹಾಕಿಕೊಳ್ಳದಂತೆ ನೋಡಿಕೊಳ್ಳವ್ವ..
ಮರಳಿಬಂದ ಮೇಲೆ ನಿನಗೆ
ಕುರಿಕೋಳಿ ಬಲಿಕೊಡುವೆವಮ್ಮ
ಜಾತ್ರೆಯಲ್ಲಿ ಆರತಿ ಬೆಳಗುವೆವಮ್ಮ



ಕಳ್ಳರ ಈ ಪೂಜೆಯ ಹಾಡು ಸಹಾ ಅವರ ಗ್ರಾಮದಲ್ಲಿ ಜಾನಪದವೇ ಆಗಿಬಿಟ್ಟಿದೆಯಂತೆ. ಆದರೆ ಈ ನಮ್ಮ ಹಿರಿಯ ಸ್ನೇಹಿತರಿಗೆ ಕುಮಾರಸ್ವಾಮಿಯವರ ಕುಲದೇವತೆಯ ಪೂಜೆ ನೋಡಿ ಕಳ್ಳರ ಕುಲದೇವತೆಯ ಪೂಜೆಯ ವಿಷಯ ಜ್ಞಾಪಕಕ್ಕೆ ಬಂದಿದ್ದು ಮಾತ್ರ ಕಾಕತಾಳೀಯವೆಂದುಕೊಳ್ಳಲೂ ಕರ್ನಾಟಕದ ಪ್ರಸಕ್ತ ರಾಜಕಾರಣ ಅವಕಾಶ ಮಾಡಿಕೊಡುವುದಿಲ್ಲ ಬಿಡಿ..

ಅಂದಹಾಗೆ ಕುಮಾರಸ್ವಾಮಿ ಅಧಿಕಾರಕ್ಕೇರುವ ಮುನ್ನ ಅವರಿಗಿರುವ ಸಾಮರ್ಥ್ಯದ ಬಗ್ಗೆ ಸುಮಾರಷ್ಟು ಚರ್ಚೆ ನಡೆದಿತ್ತು, ಮುಖ್ಯಮಂತ್ರಿಯಾಗಲು ಕೇವಲ ಗೌಡರ ಮಗನಾಗಿದ್ದರೆ ಸಾಲದು 64 ಕಲೆಗಳಲ್ಲೂ ಪಾಂಡಿತ್ಯ ಪಡೆದಿರಬೇಕು ಎಂದು ಕಾಂಗ್ರೆಸ್ಸಿನವರು ಗುಟುರು ಹಾಕಿದ್ದರು.. (ತಮಗೆ ಆ ಕಲೆಗಳೆಲ್ಲಾ ಕರಗತ ಎಂಬಂತೆ). ಆದರೆ ವಿಷಯವೇನೆಂದರೆ ಆ 64 ಕಲೆಗಳಲ್ಲಿ ಚೋರವಿದ್ಯೆಯೂ ಒಂದು ಕಲೆಯಂತೆ..!!

No Comments

"CBI ಇಂದ ನ್ಯಾಯ ಸಿಗದು"
-ಹೆಚ್.ಡಿ. ಕುಮಾರಸ್ವಾಮಿ



"ಸಚಿನ್ ಪತ್ನಿಗೆ ಅಜ್ಜಿ ವಿಯೋಗ"
-ಪತ್ರಿಕೆಯೊಂದರಲ್ಲಿ ಪ್ರಧಾನ ಸುದ್ದಿ

"ವಿನಿವಿಂಕ್ ಶಾಸ್ತ್ರಿಯಿಂದ ಗೌಡ್ರು ಹಣ ಪಡೆದರೆ ಅದರಲ್ಲಿ ತಪ್ಪೇನೂ ಇಲ್ಲ"
-ಯಡಿಯೂರಪ್ಪ




"ನನ್ನ ಬಳಿ ಪ್ರಧಾನಿ ಕಾರ್ಯಾಲಯದಲ್ಲಿ ಗೂಡಾಚಾರರಿದ್ದರೆಂಬ ಬಗ್ಗೆ ಅನುಮಾನವಿದೆಯೇ ವಿನಃ ಖಚಿತ ಮಾಹಿತಿಯಿಲ್ಲ"
-ಜಸ್ವಂತ್‌ಸಿಂಗ್

"ಹಿಂದೂಗಳು ಆತ್ಮರಕ್ಷಣೆಗೆ ಶಸ್ತ್ರಾಸ್ತ್ರ ಹಿಡಿಯಬೇಕು. ಮತ್ತು ಅದು ಕೋಮುವಾದವೂ ಅಲ್ಲ, ತಪ್ಪೂ ಅಲ್ಲ"
-ಬಾಂಬ್ ಮಟ್ಟಣ್ಣನವರ್

"ಪ. ಬಂಗಾಳದ ಕಮ್ಯುನಿಸ್ಟ್ ಸರ್ಕಾರದೊಂದಿಗೆ ಕೆಲಸ ಮಾಡಬಹುದೆಂಬ ಭರವಸೆ ಬಂದಿದೆ"
-ಅಮೆರಿಕ ರಾಯಭಾರಿ ಬೌಕ್ಷರ್

"ಡಿ.ಕೆ.ಶಿ. ಗಾಜಿನ ಮನೆಯಲ್ಲಿ ಕೂತು ಕಲ್ಲು ಹೊಡೆಯುತ್ತಿದ್ದಾರೆ"
-ಹೆಚ್.ಡಿ.ಕೆ.

ಪೆಪ್ಸಿಕೋಲ-ಕೊಕೊಕೋಲ ಮತ್ತು ಪೆಸ್ಟಿಕೋಲಾ..!



ಪೆಪ್ಸಿ ಮತ್ತು ಕೊಕೊಕೋಲಾಗಳ ವಿನಾಶಕಾರಿ ಸಾಮರ್ಥ್ಯದ ಬಗ್ಗೆ ಮತ್ತೊಮ್ಮೆ ವೈಜ್ಞಾನಿಕ ಸಂಶೋಧನೆಗಳು ಬೆಳಕು ಚೆಲ್ಲಿವೆ. ವಾಸ್ತವವಾಗಿ ಈ ಕೋಲಾಗಳ ಕೊಲ್ಲುವ ಸಾಮರ್ಥ್ಯದ ಬಗ್ಗೆ ಯಾವ ವೈಜ್ಞಾನಿಕ ಸಂಶೋಧನೆಗಳ ಅಗತ್ಯವೇ ಇಲ್ಲವೆಂಬಂತೆ ಕರ್ನಾಟಕದ ರೈತರು ಈಗಾಗಲೇ ಸಾಬೀತು ಮಾಡಿದ್ದಾರೆ. ಉದಾಹರಣೆಗೆ ರಾಯಚೂರಿನ ರೈತರು ತುಂಬಾ ದಿನಗಳಿಂದ ಈ ಕೋಲಾಗಳನ್ನು ಕ್ರಿಮಿನಾಶಕಗಳಂತೆ ಬಳಸುತ್ತಿದ್ದಾರೆ ಮತ್ತು ಅದರಲ್ಲಿ ಯಶಸ್ವಿಯೂ ಆಗಿದ್ದಾರೆ. ಇದೇ ರೈತರೇ ಆತ್ಮಹತ್ಯೆ ಮಾಡಿಕೊಳ್ಳಲು ಕ್ರಿಮಿನಾಶಕಗಳನ್ನು ಬಳಸುತ್ತಿದ್ದರು..! ಅದೃಷ್ಟವಶಾತ್ ಹಳ್ಳಿಯ ರೈತರು ಕೋಲಾಗಳನ್ನು ಕುಡಿಯುವ ಅಭ್ಯಾಸ ಮಾಡಿಕೊಂಡಿಲ್ಲ, ಇಲ್ಲಾ ಅಂದರೆ ರೈತರು ಸಾಲಸೋಲಗಳಿಂದ ಜಿಗುಪ್ಸೆಗೊಳ್ಳುವ ತನಕ ಕಾಯುವ ಅಗತ್ಯವೇ ಇಲ್ಲದಂತೆ ಕೋಲಾಗಳು ಕೈಲಾಸ ಮಾರ್ಗ ತೋರಿಸುತ್ತಿದ್ದವೇನೋ..

ಚಾರ್ವಾಕ

- ಶಿವಸುಂದರ್-


ಇದೂ ಸೇರಿ ಈ ಕೋಲಾಗಳ ಹಾನಿಕಾರಕ ಪರಿಣಾಮಗಳ ಬಗ್ಗೆ ಮೂರನೆ ಬಾರಿ ಕುರುಡರಿಗೂ ಕಾಣುವಂತೆ, ಕಿವುಡರಿಗೂ ಕೇಳುವಂತೆ ವರದಿಗಳು ಬಂದಿವೆ. ಸರ್ಕಾರ ಮಾತ್ರ ಅವೆಲ್ಲವನ್ನೂ ತಳ್ಳಿ ಹಾಕುತ್ತಾ ಬಂದಿವೆ. ಈ ವರದಿಗಳನ್ನು ಮಾಡಿದವರ ಮೇಲೆ ಈ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಕೈಗೂಡಿಸಿ ದಾಳಿ ಮಾಡುತ್ತಿವೆ. ಈಗ ವಿಷಯ ಕೋರ್ಟಿನ ಮೆಟ್ಟಲು ಹತ್ತಿದೆ. ಮುಂದೆ ನಡೆಯುವುದನ್ನು ಸುಲಭವಾಗಿ ಊಹಿಸಬಹುದು.... ಮತ್ತೊಮ್ಮೆ ವೈಜ್ಞಾನಿಕ ವರದಿಯನ್ನೂ, ಕೋಲಾಗಳ ಸಮಜಾಯಿಷಿಯನ್ನೂ ಕೇಳಲಾಗುತ್ತದೆ. ಕಣ್ಣೆದುರಿಗೆ ಕಾಣುತ್ತಿರುವ ಸತ್ಯಗಳನ್ನು ಪಕ್ಕಕ್ಕೆ ತಳ್ಳಿ ಅರ್ಥವಾಗದ "ವೈಜ್ಞಾನಿಕ" ಪುರಾವೆಗಳನ್ನು ಕೇಳಲಾಗುತ್ತದೆ. ಬೇರೆದೇಶಗಳಲ್ಲಿ ನಿಗದಿ ಪಡಿಸುವ ಪ್ರಮಾಣಗಳಿಗಿಂತ ಹಾನಿಕಾರಕ ಪ್ರಮಾಣ ಭಾರತದ ಇದೇ ಕಂಪನಿಯ ಕೋಲಾಗಳಲ್ಲಿ 50 ಪಟ್ಟು ಏಕೆ ಜಾಸ್ತಿ? ಈ ಪ್ರಶ್ನೆಯನ್ನು ಇಂತಹ ತರ್ಕಗಳನ್ನು ವಿದೇಶಿ ಬಂಡವಾಳದ ಹರಿವಿಗೆ ಧಕ್ಕೆ ಉಂಟುಮಾಡುತ್ತದೆ ಎಂದು ಸದನದ ಕಡತಗಳಿಂದಲೂ, ಜನತೆಯ ನೆನಪಿನ ಕಡತಗಳಿಂದಲೂ ಸರ್ಕಾರಿ ಆದೇಶದ ಮೂಲಕ ತೆಗೆಸಲಾಗುತ್ತದೆ.. ನಂತರ ಕೋಲಾಗಳು ತಮ್ಮ ದರಗಳನ್ನು ಮತ್ತಷ್ಟು ತಗ್ಗಿಸಿ ಜನಪ್ರಿಯ ಹಿಂದಿ ಹಾಡುಗಳ ಧಾಟಿಯಲ್ಲಿ ಕೋಲಾ ಮೇನಿಯ ಬಿತ್ತುತ್ತವೆ.. ಏಕೆಂದರೆ ನಥಿಂಗ್ ಅಫಿಷಿಯಲ್ ಅಬೌಟ್ ಇಟ್!

ಹೀಗಾಗಿ ಈ ವಿಷಯವನ್ನು ಅಫಿಷಿಯಲ್‌ಗಳ ವ್ಯಾಪ್ತಿಗೆ ಬಿಡದೆ ಜನರೇ ಕೈಗೆತ್ತಿಕೊಳ್ಳಬೇಕಾಗಿದೆ.

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನಾನು ಶಾಂತಿಯ ರಾಯಭಾರಿ. ನಾನು ಬಂದಿರುವುದು ಪ್ಯಾಚಪ್ ಮಿಷನಿಗೆ"
-ಸುಷ್ಮಾ ಸ್ವರಾಜ್



ಲೋಕಾಯುಕ್ತರಿಗೆ ತಕ್ಷಣ ಹೆಚ್ಚಿನ ಅಧಿಕಾರ ನೀಡಲು ಸಿದ್ಧ
-ಹೆಚ್.ಡಿ.ಕೆ.

"ಮುಂದಿನ ವರ್ಷದಿಂದ ಸಾರಾಯಿ ಮಾರಾಟ ನಿಷೇಧ ಮಾಡುತ್ತೇವೆ"
-ಹೆಚ್.ಡಿ.ರೇವಣ್ಣ

"ಲೋಕಾಯುಕ್ತ ವ್ಯಾಪ್ತಿಗೆ ನನ್ನನ್ನೂ ಮತ್ತು ಶಾಸಕರನ್ನೂ ಒಳಪಡಿಸುತ್ತೇನೆ"
-ಹೆಚ್.ಡಿ.ಕೆ.

ಗೋಧಿ ಆಮದಲ್ಲ... ಸಾಲ ಮತ್ತು ರೋಗದ ಆಮದು..!

ಇದು ಈ ದೇಶದ ಆಳುವ ವರ್ಗಗಳು ತಮ್ಮ ಲಾಭಕ್ಕೆ ಈ ದೇಶವನ್ನು, ದೇಶದ ಜನರ ಹಿತಾಸಕ್ತಿಯನ್ನು ಹೇಗೆ ಹಾದು ಹಗಲೇ ಬಿಕರಿ ಮಾಡಬಲ್ಲಷ್ಟು ದೇಶ ದ್ರೋಹಿಗಳಾಗಿದ್ದಾರೆ ಎಂದು ವಿವರಿಸುವ ಮತ್ತೊಂದು ಉದಾಹರಣೆ. ಈ ಬಾರಿ ಈ ದೇಶದಲ್ಲಿ ಪ್ರಪ್ರಥಮ ಬಾರಿಗೆ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆ ಆಗಿದೆ. ಅದರಲ್ಲೂ ಮುಖ್ಯವಾಗಿ ಗೋಧಿ ಉತ್ಪಾದನೆ. ಕಾರಣ: ಇದೇ ಸರ್ಕಾರಗಳೇ ಅಮೆರಿಕ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೆ ಮಣಿದು ಗೋಧಿ ಬೆಳೆಯುವ ಜಾಗದಲ್ಲಿ ವಿದೇಶಿ ಮಾರುಕಟ್ಟೆಗಾಗಿ ಅಗತ್ಯವಿರುವ ಆಹಾರಧಾನ್ಯೇತರ ಸರಕುಗಳ ಉತ್ಪಾದನೆ ಮಾಡಲು ಪ್ರತ್ಯಕ್ಷ ಮತ್ತು ಪರೋಕ್ಷ ಒತ್ತಡ ಹಾಕುತ್ತಿರುವುದು. ಹೀಗಾಗಿ ಗೋಧಿ ಉತ್ಪಾದನೆ ಕಮ್ಮಿ ಆಯಿತು. ಸರಿ ಅದರ ತಾರ್ಕಿಕ ಬೆಳವಣಿಗೆಯ ಭಾಗವಾಗಿ ಅಗತ್ಯವಿರುವ ಆಹಾರವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ ಯಾವ ದರದಲ್ಲಿ? ಅದಕ್ಕಾಗಿ ಏನು ಬಲಿ ಕೊಡಲಾಗುತ್ತಿದೆ?

ಈಗಾಗಲೇ ಇದೇ ಅಂಕಣದಲ್ಲಿ ಓದುಗರು ಗಮನಿಸಿರುವಂತೆ ಭಾರತದ ರೈತರಿಗೆ ಕೇವಲ ಕ್ವಿಂಟಾಲಿಗೆ 600ರೂ ಕೊಡಲೂ ಸಿದ್ಧವಿಲ್ಲದ ಸರ್ಕಾರ ಆಸ್ಟ್ರೇಲಿಯಾದಿಂದ ಕ್ವಿಂಟಾಲಿಗೆ 900ರೂ ಕೊಟ್ಟು ಆಮದು ಮಾಡಿಕೊಳ್ಳಲು ಸಿದ್ಧವಾಗಿದೆ. ಅದೂ ಎಂಥಹ ಗೋಧಿಯನ್ನು? ಸರ್ಕಾರವೇ ಮುಂದೆ ನಿಂತು ಕಳಪೆ ಗೋಧಿಯನ್ನು ಅಂದರೆ ವಿದೇಶಗಳಲ್ಲಿ ಪರವಾನಗಿಯಿರುವ ಪ್ರಮಾಣಕ್ಕಿಂತ 25 ಪಟ್ಟು ಜಾಸ್ತಿ ಕ್ರಿಮಿನಾಶಕ ಅಂಶಗಳನ್ನು ಹೊಂದಿರುವ ಗೋಧಿಯನ್ನು. ಈ ಹಿಂದೆಯೂ 1950ರ ದಶಕದಲ್ಲಿ ಅಮೆರಿಕದಿಂದ ಕಳಪೆ ಹಾಗೂ ಕಳೆ ಅಂಶಗಳುಳ್ಳ ಗೋಧಿಯನ್ನು ಆಮದು ಮಾಡಿಕೊಂಡಿದ್ದರಿಂದಲೇ ಭಾರತದಲ್ಲಿ ಪಾರ್ಥೇನಿಯಂ ಮತ್ತು ಲಂಟಾನ ಕಳೆಗಳು ದೇಶದಾದ್ಯಂತ ಹಬ್ಬಿತು. ಅದೇರೀತಿ 1996ರಲ್ಲಿ ನಿಯಮಗಳನ್ನು ಸಡಿಲಿಸಿ ಆಸ್ಟ್ರೇಲಿಯಾದಿಂದ ಗೋಧಿ ಆಮದು ಮಾಡಿಕೊಂಡಿದ್ದರಿಂದ ಅದರ ಜೊತೆಗೆ 44 ಕಳೆಗಳು, 8 ಫಂಗೈಗಳು ಮತ್ತು 3 ವೈರಸ್‌ಗಳೂ ಭಾರತಕ್ಕೆ ಬಂದವು.



ಈಗ ಯಾವ ದೇಶಗಳೂ ಸಡಿಲಿಸದಷ್ಟು ಮಟ್ಟಿಗೆ ಆಮದು ಮಾಡಿಕೊಳ್ಳುವ ಗೋಧಿಯ ಗುಣಮಟ್ಟವನ್ನು ಸಡಿಲಿಸಿರುವುದರಿಂದ ಬರಲಿರುವ ಗೋಧಿ ಅಪಾರ ಪ್ರಮಾಣದ ವೈರಸ್‌ಗಳನ್ನೂ ತರುತ್ತಿದೆ. ಇದರ ಜೊತೆಗೆ ಈ ಗುಣಮಟ್ಟವನ್ನು ಸಡಿಲಿಸುತ್ತಿರುವುದರ ಹಿಂದೆ ಅಮೆರಿಕ ನಡೆಸುತ್ತಿರುವ ಹುನ್ನಾರವೂ ಇದೆ. ಈ ವರೆಗೆ ಭಾರತದ ಗೋಧಿ ಆಮದು ವ್ಯವಹಾರದಲ್ಲಿ ಅಮೇರಿಕ ಭಾಗವಹಿಸಿರಲಿಲ್ಲ, ಏಕೆಂದರೆ ಭಾರತ ನಿಗದಿಪಡಿಸಿದ ಗುಣಮಟ್ಟವನ್ನು ಅಮೆರಿಕ ಕಾಯ್ದುಕೊಳ್ಳುವಂತಿರಲಿಲ್ಲ, ಈಗ ಈ ಗುಣಮಟ್ಟವನ್ನು ಸರ್ಕಾರವೇ ಅಧಿಕೃತವಾಗಿ ಸಡಿಲಿಸಿರುವುದರಿಂದ ಅಮೆರಿಕವೂ ದೊಡ್ಡಮಟ್ಟದಲ್ಲಿ ಆಮದಿನ ಲಾಭವನ್ನು ಪಡೆಯಲಿದೆ..

ಈ ದೇಶದ ರಾಜಕಾರಣಿಗಳ ದಲ್ಲಾಳಿತನಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ..?



ಬೋಗಸ್ ಬಡತನ..?

ಆಹಾರ ಹಾಗೂ ನಾಗರಿಕ ಸರಬರಾಜು ಮಂತ್ರಿ ಗೋವಿಂದ ಕಾರಜೋಳ ಅವರು ಬೋಗಸ್ ರೇಷನ್ ಕಾರ್ಡ್‌ಗಳಿಂದಾಗಿ ಸರ್ಕಾರಕ್ಕೆ ವರ್ಷಕ್ಕೆ 92 ಕೋಟಿ ನಷ್ಟವಾಗುತ್ತಿದೆಯೆಂದೂ, ಇದನ್ನು ಕೂಡಲೇ ಸರಿಪಡಿಸಲಾಗುವುದೆಂದೂ ಹೇಳಿದ್ದಾರೆ. ಈ ರೀತಿಯಲ್ಲಿ ರಾಜ್ಯದಲ್ಲಿ ಒಟ್ಟು 11 ಲಕ್ಷ ಬೋಗಸ್ ಕಾರ್ಡ್‌ಗಳಿದ್ದಾವೆಂದೂ ಎಚ್ಚರಿಸಿದ್ದಾರೆ.


ಗುಟ್ಟು

ರಾಜ್ಯದಲ್ಲಿ ಬೊಕ್ಕಸಕ್ಕೆ ಲಾಸ್ ತರುತ್ತಿರುವ ಹಲವಾರು ಬಾಬತ್ತುಗಳನ್ನು ಆಡಳಿತ ಪಕ್ಷದ ಸದಸ್ಯರುಗಳೇ ಬಯಲು ಮಾಡುತ್ತಿರುವುದನ್ನು ದಿನನಿತ್ಯ ನೋಡುತ್ತಲೇ ಇದ್ದೇವೆ. ಗಣಿ ಬಾಬತ್ತು ಒಂದರಲ್ಲೇ ಅದೆಷ್ಟು ಸಾವಿರ ಕೋಟಿಗಳು ಸರ್ಕಾರಕ್ಕೆ ಬಾಕಿ ಇತ್ತು ಮತ್ತು ಕೆಲವು ನೂರು ಕೋಟಿಗಳು ಮುಖ್ಯಮಂತ್ರಿಗಳ ಖಾಸಗಿ ಬೊಕ್ಕಸಕ್ಕೆ ಸೇರಿದ ತಕ್ಷಣ ಅದರ ಪ್ರಸ್ತಾಪವೇ ಹೇಗೆ ಮಾಯವಾಗಿತ್ತು ಎಂಬುದನ್ನು ನಾವೆಲ್ಲಾ ದಿನ ಬೆಳಗಾದರೆ ನೋಡುತ್ತಲೇ ಇದ್ದೇವೆ. ಹಾಗಿದ್ದಲ್ಲಿ ಎಲ್ಲಾ ಬಿಟ್ಟು ಬಡವರಿಗೆ ದಕ್ಕಬೇಕಾದ ರೇಷನ್ ಕಾರ್ಡಿನಲ್ಲಿ 92 ಕೋಟಿ ನಷ್ಟ ಮಾತ್ರ ಏಕೆ ಸರ್ಕಾರದ ಕಣ್ಣು ಚುಚ್ಚುತ್ತಿದೆ? ಏನಿದರ ಗುಟ್ಟು?

ಬೋಗಸ್ ಬಡತನವಲ್ಲ..ಬೋಗಸ್ ಭರವಸೆ:

ಅಸಲು ವಿಷಯವೆಂದರೆ ಬೋಗಸ್ ನಡೆದಿರುವುದು ಬಡತನದಲ್ಲಲ್ಲ, ಚುನಾವಣೆಗೆ ಮುಂಚೆ ಬಡತನ ನಿವಾರಣೆಯ ಬಗ್ಗೆ ಕೊಡುತ್ತಿದ್ದ ಭರವಸೆಗಳು ಬೋಗಸ್ ಅಷ್ಟೆ. ಕರ್ನಾಟಕ ಸರ್ಕಾರ ವಿಶ್ವಬ್ಯಾಂಕಿಂದ ಸಾಲ ತೆಗೆದುಕೊಂಡ ನಂತರ ವಿಶ್ವಬ್ಯಾಂಕು ಸರ್ಕಾರಕ್ಕೆ ಹಲವಾರು ಷರತ್ತುಗಳನ್ನು ಹಾಕಿದೆ. ಅದನ್ನು ನಮ್ಮ ಸರ್ಕಾರಗಳು ಜನರ ಗಮನಕ್ಕೆ ತರದಂತೆ ಸಂಪೂರ್ಣವಾಗಿ ಒಪ್ಪಿಕೊಂಡು ನಾಡನ್ನು ಮತ್ತು ಬಡಜನರ ಹಿತಾಸಕ್ತಿಗಳನ್ನು ಹರಾಜು ಹಾಕಿವೆ. ಅದರಲ್ಲಿ ಒಂದು ಬಡಜನತೆಗೆ ಕೊಡುತ್ತಿದ್ದ ರೇಷನ್ ಕಾರ್ಡ್ ಕಡಿತದ ವಿಷಯ. ವಿಶ್ವಬ್ಯಾಂಕಿನೊಂದಿಗೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಈಗಿರುವ ರೇಷನ್ ಕಾರ್ಡ್‌ಗಳ ಸಂಖ್ಯೆಯನ್ನು ಶೇ. 30ರಷ್ಟು ಕಡಿತ ಮಾಡಲೇಬೇಕು. ಆದರೆ ಈಗ 67ಲಕ್ಷ ರೇಷನ್ ಕಾರ್ಡ್‌ಗಳೇನಿವೆ ಅವೆಲ್ಲಾ ನಿಜವಾದ ಹಾಗೂ ಅರ್ಹ ಕೆಳ ಹಾಗೂ ಬಡವರ್ಗದವರದ್ದೇ ಆಗಿವೆ. ಸರ್ಕಾರ ಹಾಗೂ ವಿರೋಧ ಪಕ್ಷಗಳೆಲ್ಲವೂ ಚುನಾವಣೆ ಸಮಯದಲ್ಲಿ ಕರ್ನಾಟಕದಲ್ಲಿ ಬಡವರ ಸಂಖ್ಯೆ ಇನ್ನೂ ಹೆಚ್ಚಿದೆಯೆಂದೂ ರೇಷನ್ ಕಾರ್ಡ್‌ಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕೆಂದೂ ಪೈಪೋಟಿಯಲ್ಲಿ ಭಾಷಣ ಮಾಡಿದ್ದವು. ಆದರೆ ಅಧಿಕಾರಕ್ಕೆ ಬಂದ ತಕ್ಷಣ ಪಕ್ಷಗಳೆಲ್ಲಾ ವಿಶ್ವಬ್ಯಾಂಕಿನ ಒಕ್ಕಲಾದವು. ಆದ್ದರಿಂದಲೇ ಕಾರಜೋಳ ಹೇಳಿಕೆ ಹೇಗೆ ಮುಂದುವರೆಯುತ್ತದೆ ಎಂದರೆ "ವಾಸ್ತವದಲ್ಲಿ ಕರ್ನಾಟಕದಲ್ಲಿ ಕೇವಲ 32ಲಕ್ಷ ಕುಟುಂಬಗಳು ಮಾತ್ರ ಬಡತನದ ರೇಖೆಗಿಂತ ಕೆಳಗಿದ್ದರೂ 67 ಲಕ್ಷ ಕಾರ್ಡ್‌ಗಳನ್ನು ಹಂಚಲಾಗಿದೆ. ಇದನ್ನು ಸರಿಪಡಿಸಬೇಕು ಎಂದು ಮುಂದುವರೆಯುತ್ತದೆ..!! ಇದೇ ಅಸಲೀ ರಹಸ್ಯ, 92 ಕೋಟಿ ಲಾಸ್ ಎಲ್ಲಾ ಬರೀ ಬುರುಡೆ ಪುರಾಣ. ವಿಶ್ವಬ್ಯಾಂಕು 67 ಲಕ್ಷ ಕಾರ್ಡ್‌ಗಳನ್ನು 40 ಲಕ್ಷಕ್ಕಿಳಿಸಿ ಎಂದರೆ ಈ ಸರ್ಕಾರ ಅದನ್ನು 32 ಲಕ್ಷಕ್ಕೇ ಇಳಿಸುವ ಸಿದ್ಧತೆ ಮಾಡಿಕೊಂಡಿದೆ. ಅದಕ್ಕೇ 92 ಕೋಟಿ ಲಾಸಾಗುತ್ತಿದೆ ಎಂದೆಲ್ಲಾ ಬುರುಡೆ ಪುರಾಣ ಬಿಡುತ್ತಿದೆ..!

ರಟ್ಟು



'ಬುದ್ಧಿ'

ಬುದ್ಧಿ ಎಂಬುದನ್ನು ಆಧುನಿಕ ತಿಳುವಳಿಕಸ್ತ ಮಾನವರು ತಪ್ಪಾಗಿ ತಿಳಿದಿದ್ದಾರೆ. ಇವರ ಬುದ್ಧಿವಂತಿಕೆ ಯಾವುದನ್ನು, ಹೇಗೆ, ಎಷ್ಟು ಬಳಸಿಕೊಳ್ಳಬೇಕು ಎಂಬ ಉಪಭೋಗಿ ಸಂಸ್ಕೃತಿಯ ಬಳುವಳಿಯಾಗಿದೆ. ಬುದ್ಧಿವಂತಿಕೆ ಮತ್ತು ದಡ್ಡತನ ಎಂಬ ವರ್ಗೀಕರಣವೇ ಸರಿಯಲ್ಲ. ಅವು ಒಂದರೊಳಗೊಂದು ಕೂತು ಮಾನವ ಪ್ರಜ್ಞೆಯ ಭಾಗವಾಗಿರುತ್ತವೆ. ಈ ಸಲದ ಬುದ್ಧಿ ಕುರಿತ ಸೂಕ್ತಿಗಳನ್ನು ಬಸವನ ಬಾಗೇವಾಡಿಯ ಪಾಂಡುರಂಗ ಸಾಲವಾಡಗಿ ಸಂಗ್ರಹಿಸಿ ಕಳಿಸಿದ್ದಾರೆ.

- ಮೂರ್ತಿ

ಎಲ್ಲಿ ಒಬ್ಬರು ಬುದ್ಧಿವಂತರಿರುತ್ತಾರೋ ಅಲ್ಲಿ ಇಬ್ಬರು ಸುಖವಾಗಿರುತ್ತಾರೆ -ಎಮರ್ಸನ್

ಪೆಪ್ಸಿ ಕೋಲಾಗಳ ವೃತ್ತಾಂತ...

ಪೆಪ್ಸಿ ಕೋಲಾಗಳು ಮತ್ತೆ ಸುದ್ದಿಯಲ್ಲಿವೆ. ಮೂರು ವರ್ಷಗಳ ಹಿಂದೆಯೇ ಬಹುರಾಷ್ಟ್ರೀಯ ಕಂಪನಿಗಳಾದ ಕೋಕೊಕೋಲಾ ಮತ್ತು ಪೆಪ್ಸಿ ಕೋಲಾಗಳಲ್ಲಿ ಜನರ ಆರೋಗ್ಯಕ್ಕೆ ಹಾನಿಕರವಾದ ಕ್ರಿಮಿನಾಶಕಗಳು ಇವೆ ಎಂಬ ಸಂಶೋಧನೆ ಬಹಿರಂಗಗೊಂಡಿದ್ದರೂ ಯಾಕೆ ಈಗಲೂ ಏನೂ ಬದಲಾವಣೆಗಳಾಗಿಲ್ಲ ಎಂಬುದೇ ಒಂದು ರೋಚಕ ಕತೆ ಆಗುತ್ತದೆ.

ಅಂದಹಾಗೆ, ಈ ಕತೆ ನಮ್ಮ ಪ್ರಚಂಡ ಪ್ರಜಾಪ್ರಭುತ್ವ ಹೇಗೆ ಪ್ರಜೆಗಳ ವಿರುದ್ಧವೇ ಕೆಲಸ ಮಾಡುತ್ತದೆ ಎಂಬುದಕ್ಕೂ ಒಂದು ಉದಾಹರಣೆ ಆಗುತ್ತದೆ.

ನಮಗೆಲ್ಲ ಈಗಾಗಲೇ ಗೊತ್ತಿರುವಂತೆ ಸೈನ್ಯದಲ್ಲಿನ ಮತ್ತು ರಾಜಕೀಯ ಪಕ್ಷಗಳಲ್ಲಿನ ಭ್ರಷ್ಟಾಚಾರವನ್ನು ಬಯಲಿಗೆಳೆದ 'ತೆಹೆಲ್ಕಾ' ಸಿಬ್ಬಂದಿಯನ್ನು ನಮ್ಮ ಘನ ಪ್ರಜಾಪ್ರಭುತ್ವದ ನಾಯಕರು ಅಭಿನಂದಿಸುವ ಬದಲು ಅವರ ವಿರುದ್ಧವೇ ಕ್ರಮ ಜರುಗಿಸಿದರು. ತೆಹೆಲ್ಕಾದವರೇ ಕ್ರಿಮಿನಲ್‌ಗಳೆಂಬಂತೆ ಅವರ ವಿಚಾರಣೆ ನಡೆಸಿದರು, ಪೊಲೀಸರನ್ನು ಛೂ ಬಿಟ್ಟರು, ಆರ್ಥಿಕವಾಗಿ ಹಣ್ಣುಗಾಯಿ ಮಾಡಿದರು. ವ್ಯವಸ್ಥೆಯ ಈ ಬಲಪ್ರಯೋಗದೆದಿರು ತೆಹೆಲ್ಕಾಗೆ ಬದುಕುಳಿಯುವುದೇ ದುಸ್ತರವಾಯಿತು.

ಹಾಗೆಯೇ, ಕೋಲಾಗಳಲ್ಲಿ ಕ್ರಿಮಿನಾಶಕಗಳಿವೆ ಎಂದು ಸಾಬೀತುಪಡಿಸಿದ CIS ಎಂಬ ಸಂಸ್ಥೆಗೂ ಆಯಿತು. ದೈತ್ಯ ಕಂಪನಿಗಳಾದ ಕೋಕೊ ಕೋಲಾ ಮತ್ತು ಪೆಪ್ಸಿ ಕೋಲಾದಿಂದ ಅಮೇಧ್ಯ ತಿಂದ ನಮ್ಮ ಸರ್ಕಾರ CIS ವಿರುದ್ಧವೇ ಪೊಲೀಸರನ್ನು ಛೂ ಬಿಟ್ಟಿತು. ಈ ದುಷ್ಟ ಕೋಲಾ ಕಂಪನಿಗಳ ವಕಾಲತ್ತು ವಹಿಸಿ ಅಮೆರಿಕಾದ ಅಂದಿನ ಮುಖ್ಯ ಕಾರ್ಯದರ್ಶಿ ಕಾಲಿನ್ ಪೊವೆಲ್ ಭಾರತದ ಆಗಿನ ಪ್ರಧಾನಿ ವಾಜಪೇಯಿಗೆ ಫೋನ್ ಮಾಡುತ್ತಿದ್ದಂತೆ, ಇಂಟಲಿಜೆನ್ಸ್ ಬ್ಯೂರೋದವರು CIS ಸಂಸ್ಥೆಯ ಕಚೇರಿಯಲ್ಲಿ ಹಾಜರಾದರು. ಕೋಲಾ ಕಂಪನಿಗಳು "ಯಾವುದೇ ಪರೀಕ್ಷೆಯನ್ನು ನಮ್ಮ ಪಾನೀಯಗಳ ಮೇಲೆ ವಿಧಿಸಿದರೆ ನಾವು ದೇಶವನ್ನೇ ಬಿಟ್ಟು ಹೋಗುತ್ತೇವೆ" ಎಂದು ಬೆದರಿಸುತ್ತಿದ್ದಂತೆ CIS ಸಂಸ್ಥೆಯ 20 ವರ್ಷಗಳ ಹಣಕಾಸು ವಹಿವಾಟಿನ ಬಗ್ಗೆ ಪೊಲೀಸರು ಪ್ರಶ್ನಿಸಿದರು. ಎರಡು ದಶಕಗಳಿಂದ ಎಲ್ಲೆಲ್ಲಿಂದ ಹಣ ಬಂತು, ಯಾವುದಕ್ಕೆ ಹಣ ವೆಚ್ಚ ಮಾಡಲಾಯ್ತು, ಅಲ್ಲಿನ ಸಿಬ್ಬಂದಿಯ ಇಪ್ಪತ್ತು ವರ್ಷದ ಇತಿಹಾಸ, ಅವರ ಇಪ್ಪತ್ತು ವರ್ಷದ ವಿಳಾಸ, ಇಂತಹದ್ದೇ ವಿವರಗಳು ಬೇಕು ಎಂದು ದಬಾಯಿಸಿದರು.

ವಿಪರ್ಯಾಸ ನೋಡಿ, ನಮ್ಮ ದೇಶದ ಜನರಿಗೆ, ಅದರಲ್ಲೂ ಯುವ ಜನರಿಗೆ ಕ್ರಿಮಿನಾಶಕಗಳನ್ನು ಕುಡಿಸಿ ಅವರ ಆರೋಗ್ಯವನ್ನು ನಾಶ ಮಾಡಲಾಗುತ್ತಿದೆ ಎಂಬ ಸಾರ್ವಜನಿಕ ಕಾಳಜಿ CIS ಎಂಬ ಖಾಸಗಿ ಸಂಸ್ಥೆಯದ್ದಾಗಿತ್ತು, ಆದರೆ ನಮ್ಮ ದೇಶದ ಜನರಿಂದ ಚುನಾಯಿತರಾದ ನಮ್ಮದೇ ಸರ್ಕಾರಕ್ಕೆ ಕೋಲಾ ಕಂಪನಿಗಳ ಲಾಭವಷ್ಟೇ ಮುಖ್ಯವಾಗಿತ್ತು.


ಇದು ಇಲ್ಲಿಗೆ ನಿಲ್ಲಲಿಲ್ಲ, ರಾಮಭಕ್ತರ ಪಕ್ಷವಾದ ಬಿಜೆಪಿಯ 'ಸ್ವ-ದೇಶಿ' ಮಗಳಾದ ಸುಷ್ಮಾ ಸ್ವರಾಜ್ ಕೋಲಾಗಳಲ್ಲಿನ ಕ್ರಿಮಿನಾಶಕಗಳನ್ನು ಕುರಿತು ವಿಚಾರಣೆ ನಡೆಸಲು ಒಂದು ಜಂಟಿ ಸಂಸದೀಯ ಸಮಿತಿಯನ್ನು ಘೋಷಿಸಿದರು. ಆ ಸಮಿತಿಗೆ ಮಾರ್ಗಸೂಚಿಯನ್ನು ಅವರೇ ನೀಡಿದರು. ಆದರೆ ಈ ಮಾರ್ಗಸೂಚಿಗಳು ಎಷ್ಟು ಹಾಸ್ಯಾಸ್ಪದವಾಗಿದ್ದವು ಅಂದರೆ ಕೋಲಾ ಕಂಪನಿಗಳನ್ನು ವಿಚಾರಣೆಗೆ ಒಳಪಡಿಸುವ ಬದಲಾಗಿ CIS ನವರ ವೈಜ್ಞಾನಿಕ ಸಂಶೋಧನೆ ಎಷ್ಟು ಸರಿ ಎಂಬುದನ್ನು ವಿಚಾರಣೆಗೆ ಒಳಪಡಿಸಿ ಸತ್ಯ ಹೇಳಿದ್ದವರನ್ನೇ ಆರೋಪಿಗಳ ಸ್ಥಾನದಲ್ಲಿ ನಿಲ್ಲಿಸಿದರು!

ಕೊನೆಗೆ ಈ ಜಂಟಿ ಸಂಸದೀಯ ಸಮಿತಿ CIS ನವರು ನೀಡಿದ ಸಾಕ್ಷ್ಯಗಳನ್ನು ಒಪ್ಪಿಕೊಂಡು ಕೋಲಾ ಕಂಪನಿಗಳು ಕ್ರಿಮಿನಾಶಕಗಳನ್ನು ಭಾರತೀಯರಿಗೆ ಕುಡಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿತು.

ಕಂಡಹಾಗೆ



ಆದಾಗಿ ಎರಡು ವರ್ಷಗಳಾಗಿವೆ. ಆದರೆ ಇಲ್ಲಿಯವರೆಗೂ ಕೋಲಾಗಳನ್ನು ಯಾವುದೇ ರೀತಿಯ ಪರೀಕ್ಷೆಗಾಗಲಿ, ಅದರ ತಯಾರಿಕೆಗೆ ಒಂದು



ಗುಣಮಟ್ಟವನ್ನು ನಿಗಧಿ ಪಡಿಸುವುದಾಗಲಿ ನಡೆದಿಲ್ಲ, ಯಾಕೆಂದರೆ ಹಾಗೆ ಯಾವುದೂ ನಡೆಯದಂತೆ ಸರ್ಕಾರ ಮತ್ತು ಆಡಳಿತ ವರ್ಗ ನೋಡಿಕೊಂಡಿದೆ. ಕೋಲಾಗಳನ್ನು ಕುಡಿದು ಭಾರತೀಯರು ಆಸ್ಪತ್ರೆ ಸೇರುತ್ತಿದ್ದರೂ, ಅದರ ಕಂಪನಿಗಳಿಗೆ ಕಿಂಚಿತ್ತೂ ಕಷ್ಟವಾಗದಂತೆ ಸರ್ಕಾರ-ಆಡಳಿತಶಾಹಿ ಎಚ್ಚರ ವಹಿಸಿದೆ. ಈ ಮಧ್ಯೆ ಅದೇ ಕೋಲಾ ಕಂಪನಿಗಳು ತಾವು ತಯಾರಿಸಿದ ಪಾನೀಯಗಳು ಆರೋಗ್ಯಕ್ಕೆ ಹಾನಿಕರವಲ್ಲ ಎಂದು ಕುಣಿದು, ಕುಪ್ಪಳಿಸಿ ಜನರನ್ನು ನಂಬಿಸಲು ಜನಪ್ರಿಯ ನಟರಾದ ಅಮೀರ್ ಖಾನ್ ಮತ್ತು ಶಾರೂಖ್ ಖಾನ್‌ಗೆ ಕೋಟ್ಯಂತರ ರೂಪಾಯಿ ನೀಡಿವೆ, ಭರ್ಜರಿ ಜಾಹೀರಾತುಗಳನ್ನು ಬಿತ್ತರಿಸಿವೆ.

ಇದೆಲ್ಲ ಸಾಧ್ಯವಾಗಿದ್ದು ಹೇಗೆ ಎಂಬುದೂ ರೋಚಕವಾಗಿದೆ. ಪಾನೀಯಗಳಲ್ಲಿ ಎಷ್ಟು ಪ್ರಮಾಣದಲ್ಲಿ ಕ್ರಿಮಿನಾಶಕಗಳು ಇರಬಹುದೆಂದು ನಿರ್ಧರಿಸಲು ಒಂದು ಸಮಿತಿಯನ್ನು ರಚಿಸಿದ ಸರ್ಕಾರ, ಅದೇ ಪಾನೀಯವನ್ನು ತಯಾರಿಸಲು ಉಪಯೋಗಿಸುವ ನೀರಿನಲ್ಲೇ ಕ್ರಿಮಿನಾಶಕಗಳಿವೆಯೇ ಎಂದು ಕಂಡುಹಿಡಿಯಲು ಇನ್ನೊಂದು ಸಮಿತಿಯನ್ನು ನೇಮಿಸಿದೆ. ಈ ಮಧ್ಯೆ ತಾವು ಪಾನೀಯಗಳಲ್ಲಿ ಉಪಯೋಗಿಸುವ ಸಕ್ಕರೆಯಲ್ಲೇ ಕ್ರಿಮಿನಾಶಕಗಳಿವೆ, ಆದ್ದರಿಂದ ಅದು ಸಕ್ಕರೆ ಬೆಳೆಯುವವರ ತಪ್ಪೇ ಹೊರತು ತಮ್ಮದಲ್ಲ ಎಂದು ಕೋಲಾ ಕಂಪನಿಗಳು ವಾದಿಸಿದರೆ, ಸಕ್ಕರೆಯಲ್ಲಿನ ಕ್ರಿಮಿನಾಶಕಗಳನ್ನು ಪರಿಶೀಲಿಸಲು ಸರ್ಕಾರ ಮತ್ತೊಂದು ಸಮಿತಿಯನ್ನು ನೇಮಿಸುತ್ತದೆ. ಹೀಗೆ ಸಮಿತಿ, ಮರಿ ಸಮಿತಿಗಳನ್ನು ನೇಮಿಸುವುದರ ಮೂಲಕ ಸರ್ಕಾರವೇ ನೇಮಿಸಿದ್ದ ಜಂಟಿ ಸಂಸದೀಯ ಸಮಿತಿಯ ಶಿಫಾರಸ್ಸನ್ನು ಸ್ವತಃ ಸರ್ಕಾರವೇ ಉಲ್ಲಂಘಿಸುತ್ತದೆ. ಎಲ್ಲಾ ಕೋಲಾ ಕಂಪನಿಗಳ ಪರವಾಗಿ!

ಈ ಮಧ್ಯೆ ಕೋಲಾ ಕಂಪನಿಗಳು ಭಾರತದಲ್ಲಿ ಬೆಳೆದ ಸಕ್ಕರೆಯನ್ನು ಖರೀದಿಸದೆ ಅದನ್ನು ರಫ್ತು ಮಾಡಿಕೊಳ್ಳುತ್ತೇವೆ ಅಂತ ಧಮಕಿ ಹಾಕಿದರೆ ಸರ್ಕಾರ ಅವರ ಮುಂದೆ ಮಂಡಿಯೂರಿ ಕೂರುತ್ತದೆ. ಇದು ಬರಿ ಬಿಜೆಪಿ ನೇತೃತ್ವದ NDA ಸರ್ಕಾರದ ವರಸೆಯಲ್ಲ, ವಾಸ್ತವವಾಗಿ ಕಾಂಗ್ರೆಸ್ ನೇತೃತ್ವದ UPA ಸರ್ಕಾರದ ಮನೋಧರ್ಮವೂ ಹೌದು. ಇಲ್ಲವೆಂದರೆ ಮನಮೋಹನ್ ಸಿಂಗ್‌ರವರ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ತಂಪು ಪಾನಿಯಗಳ ಮೇಲಿನ ಎಕ್ಸೈಜ್ ತೆರಿಗೆಯನ್ನು ಯಾಕೆ ಕಡಿತಗೊಳಿಸುತ್ತಿದ್ದರು? ಕೋಲಾ ಕಂಪನಿಗಳ ಲಾಭ ಹೆಚ್ಚಾಗುವಂತೆ ಯಾಕೆ ಕಾನೂನು ಮಾಡುತ್ತಿದ್ದರು?

UPA ಸರ್ಕಾರದ ಐಲುತನಗಳು ಎಂತಹದ್ದೆಂದರೆ, ಸಿನಿಮಾಗಳಲ್ಲಿ ಸಿಗರೇಟ್ ಸೇದುವ ದೃಶ್ಯವನ್ನು ತೋರಿಸಬಾರದೆಂದು ಬೊಬ್ಬೆ ಹೊಡೆಯುವ ಅಂಬುಮಣಿ ಎಂಬ ಸಚಿವ ಈ ಕೋಲಾಗಳ ಗುಣಮಟ್ಟವನ್ನು ನಿಯಂತ್ರಿಸಲು ಯಾವುದೇ ಮಾನದಂಡವನ್ನು ನಿಗಧಿ ಮಾಡಬಾರದೆಂದು ಆದೇಶಿಸುತ್ತಾನೆ. ಸಕ್ಕರೆ, ನೀರು ಇತ್ಯಾದಿಗಳಲ್ಲಿನ ಕ್ರಿಮಿನಾಶಕಗಳನ್ನು ಅಳೆಯುಲು ನೇಮಿಸಿದ ಸಮಿತಿ, ಮರಿ ಸಮಿತಿಗಳಿಗೆ ತಮ್ಮ ವರದಿ ಸಲ್ಲಿಸಲು ನಿರ್ದಿಷ್ಟ ಸಮಯವನ್ನು ಘೋಷಿಸದೇ ಕೋಲಾ ಕಂಪನಿಗಳಿಗೆ ಸಹಕರಿಸುತ್ತಾನೆ.

ಪ್ಲಾನಿಂಗ್ ಕಮಿಷನ್ ಎಂಬ ದಂಡಪಿಂಡಗಳ ಗುಂಪು ಅದೇ ಕ್ರಿಮಿನಾಶಕಗಳನ್ನು ಹೊಂದಿರುವ ಪಾನೀಯ ತಯಾರಿಸುತ್ತಿರುವ ಪೆಪ್ಸಿ ಕಂಪನಿಯ ಮುಖ್ಯಸ್ಥನೊಂದಿಗೆ ಸೇರಿ ಅಮೆರಿಕಾ-ಇಂಡಿಯಾ CEO ಗಳ ವೇದಿಕೆಯನ್ನು ಸೃಷ್ಟಿಸುತ್ತದೆ.....

ಭಾರತೀಯರನ್ನು ಕ್ಯಾನ್ಸರ್‌ಗೆ ತುತ್ತಾಗಿಸುವ, ಅಸ್ತಮಾಗೆ ಬಲಿಯಾಗಿಸುವ ಕ್ರಿಮಿನಾಶಗಳ ಪಾನೀಯವನ್ನು ಸರಬರಾಜು ಮಾಡುತ್ತಿರುವ ಕೋಲಾ ಕಂಪನಿಗಳು 'ಎ ದಿಲ್ ಮಾಂಗೆ ಮೋರ್' ಎಂದು ಅರಚುತ್ತಾ ಈ ಘನ ಪ್ರಜಾಪ್ರಭುತ್ವದಲ್ಲಿ ಹಣ ದೋಚುತ್ತಿದ್ದಾವೆ... ಇದ್ಯಾವುದಕ್ಕಾದರೂ ಅರ್ಥ, ತರ್ಕ, ಇದೆಯಾ....

-ಗೌರಿ ಲಂಕೇಶ್



ಕಳೆದ ಸಂಚಿಕೆಯಲ್ಲಿ ಸಾರಾ ಜೋಸೆಫ್ ಎಂಬ ಮಲೆಯಾಳಿ ಲೇಖಕಿ ಬರೆದ 'ಮಳಾ' (ಮಳೆ) ಎಂಬ ಕತೆಯ ಕನ್ನಡ ಅನುವಾದವನ್ನು ಪ್ರಕಟಿಸಿದ್ದೆವು. ಈ ವಾರ ಉರ್ದು ಭಾಷೆಯ ಪ್ರಖ್ಯಾತ ಲೇಖಕಿ ಇಸ್ಮತ್ ಚುಗ್ತಾಯಿಯವರ 'ಲಿಹಾಫ್' (ಕೌದಿ) ಎಂಬ ಕತೆಯ ಅನುವಾದವನ್ನು ಪ್ರಕಟಿಸುತ್ತಿದ್ದೇವೆ.

ಭಾರತದ, ಏಷಿಯಾದ ಖ್ಯಾತ ಬರಹಗಾರ್ತಿಯರ ಕತೆಗಳನ್ನು 'ಮಹಿಳಾ ಕಥಾ ಮಾಲಿಕೆ' ಎಂಬ ಶೀರ್ಷಿಕೆಯಡಿ ಕನ್ನಡಕ್ಕೆ ಅನುವಾದಿಸಿ 'ಲಂಕೇಶ್' ಓದುಗರಿಗೆ ನೀಡುತ್ತಿರುವವರು ಈಗ ಅಮೆರಿಕೆಯಲ್ಲಿ ವಾಸಿಸುತ್ತಿರುವ ಸುಕನ್ಯಾ ಕನಾರಳ್ಳಿ. ನಮ್ಮ ಸಾಹಿತ್ಯಾಸಕ್ತ ವಾಚಕರಿಗೆ ಈ 'ಕಥಾಮಾಲಿಕೆ' ಸಂತೋಷ ನೀಡುತ್ತದೆ ಎಂದು ನಂಬಿದ್ದೇವೆ.

-ಜೆ.ಎಲ್.

ತಿರುಪತಿಯಲ್ಲಿ ಸಿಕ್ಕಿಬಿದ್ದ ಚೆಡ್ಡಿಗಳು

ತಿರುಪತಿಯಲ್ಲಿ ಕ್ರೈಸ್ತ ಧರ್ಮ ಪ್ರಚಾರ ಹಾಗೂ ಮತಾಂತರ ನಡೆಯುತ್ತಿದೆ ಎಂದು ಹುಯಿಲೆಬ್ಬಿಸಿದ್ದ ಚೆಡ್ಡಿ ಪಡೆ ಈಗ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದೆ.

ಮೊನ್ನೆ ಜುಲೈ 30 ನೇ ತಾರೀಖು ತಿರುಪತಿ ಪೊಲೀಸರು ಬೆಂಗಳೂರಿನ ಓಂ ಪ್ರಕಾಶ್ ಅಗರವಾಲ್ ಹಾಗೂ ಆಂಧ್ರದ ವಾರಂಗಲ್ ಜಿಲ್ಲೆಯ ಭೀಮಾವರದ ಕೆ. ವಿಶ್ವನಾಥ್ ದಾಮೋದರರಾವ್ ಎಂಬ ಹಿಂದೂ ವೀರರನ್ನು ಅರೆಸ್ಟ್ ಮಾಡಿದ್ದಾರೆ. ಇವರ ಮೇಲಿರುವ ಆರೋಪ ಏನು ಗೊತ್ತೆ?

ಇವರಿಬ್ಬರೂ ತಿರುಪತಿಯ ಬಾಲಾಜಿನಗರ ಬಡಾವಣೆಯ ಮನೆ ಗೋಡೆಗಳ ಮೇಲೆಲ್ಲಾ ಶಿಲುಬೆ ಗುರುತು, ಜೀಸಸ್ ಎಂಬ ಬರಹಗಳನ್ನು ಪೈಂಟ್ ಮಾಡುತ್ತಿದ್ದರು ಎಂಬುದು!

ಅಂದಹಾಗೆ ಈ ಇಬ್ಬರೂ ದೆಹಲಿ ಮೂಲದ ಸುದರ್ಶನ ಟಿವಿ ಎಂಬ ಹಿಂದೂ ಧಾರ್ಮಿಕ ಪಡಪೋಶಿ ಚಾನಲ್ಲಿನ ದಕ್ಷಿಣ ಭಾರತ ವರದಿಗಾರರಾಗಿದ್ದು ಜೊತೆಗೆ ಆರ್‌ಎಸ್‌ಎಸ್‌ನ 'ಸೇವಾಭಾರತಿ' ಎಂಬ ಕೋಮುವಾದಿ ಸಂಸ್ಥೆಯ ಚಟುವಟಿಕೆಗಳನ್ನು ಮಾಡುತ್ತಿದ್ದ ಕಾರ್ಯಕರ್ತರು.

ವಾಸ್ತವವಾಗಿ ನಡೆದಿರುವುದೇನೆಂದರೆ ಜುಲೈ 30 ರ ರಾತ್ರಿ, ಈ ಚೆಡ್ಡಿ ಚತುರರ ಪೈಕಿ ಒಬ್ಬ ಚೆಡ್ಡಿ ಬಾಲಾಜಿ ನಗರದ ಮನೆಗಳ ಗೋಡೆ ಮೇಲೆಲ್ಲಾ ಶಿಲುಬೆ ಗುರುತು, ಜೀಸಸ್ ಎಂದೆಲ್ಲಾ ಬರೆಯುತ್ತಿದ್ದ, ಇನ್ನೊಬ್ಬ ಚೆಡ್ಡಿ ಅದನ್ನೇ ವಿಡಿಯೋ ರೆಕಾರ್ಡ್ ಮಾಡಿಕೊಳ್ಳುತ್ತಿದ್ದ. ಇವರಿಬ್ಬರು ಹಿಂದೂಗಳ ಪವಿತ್ರ ಸ್ಥಳ ತಿರುಪತಿಯಲ್ಲಿ ಕ್ರೈಸ್ತ ಧರ್ಮದ ಪ್ರಚಾರ ನಡೆಯುತ್ತಿರುವುದನ್ನು ತಾವು ಸಾಕ್ಷ ಸಮೇತ ಪತ್ತೆ ಹಚ್ಚಿರುವುದಾಗಿ ಡಂಗೂರ ಬಾರಿಸಲು ಬಯಸಿದ್ದರು. ಆದರೆ ಇವರ ಚಲನವಲನಗಳ ಬಗ್ಗೆ ಅನುಮಾನ ಪಟ್ಟ ಸ್ಥಳೀಯರು ಅಟ್ಟಿಸಿಕೊಂಡು ಹೋಗಿ ಮುಕುಳಿ ಮೇಲೊದ್ದು ಬಾಯಿ ಬಡಿಸಿದಾಗ ಇವರ ಹೀನ ಉದ್ದೇಶ ರಟ್ಟಾಗಿದೆ. ನಂತರ ಜನರೇ ಇವರನ್ನು ಪೊಲೀಸರ ವಶಕ್ಕೆ ನೀಡಿದ್ದಾರೆ.

ಕಳೆದ ತಿಂಗಳು ದಿಢೀರನೆ 'ತಿರುಪತಿಯಲ್ಲಿ ಕ್ರೈಸ್ತ ಧರ್ಮ ಪ್ರಚಾರ, ಮತಾಂತರ' ಎಂದೆಲ್ಲಾ ಚೀರಾಡುತ್ತಾ ಚೆಡ್ಡಿಗಳು ದೊಡ್ಡ ದಾಂಧಲೆ ಶುರು ಮಾಡಿದ್ದರು. ಇದಕ್ಕೆ ನಾಯಕತ್ವ ನೀಡಿದ್ದು ಉಡುಪಿಯ ಬ್ರಾಹ್ಮಣ ಮಠಾಧೀಶ ಕೆಲಸಗೇಡಿ ಪೇಜಾವರ ವಿಶ್ವೇಶ್ವರತೀರ್ಥ. ಕ್ರೈಸ್ತ ಧರ್ಮ ಪ್ರಚಾರ ಹಾಗೂ ಮತಾಂತರಕ್ಕೆ ಭಾರತದಲ್ಲಿ ನಿಷೇಧವೇನಿಲ್ಲವಾದರೂ ಈ ಚೆಡ್ಡಿಪಡೆ ಸೋನಿಯಾ ಹಾಗೂ ಆಂಧ್ರ ಮುಖ್ಯಮಂತ್ರಿ ರಾಜಶೇಖರರೆಡ್ಡಿಯೇ ಇದಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆಂದು ಆರೋಪಿಸಿದ್ದರು. ಈಗ ನೋಡಿದರೆ ಈ ದಗಲಬಾಜಿ ಗುಂಪೇ ಈ ಗದ್ದಲವೆಬ್ಬಿಸಲು ಷಡ್ಯಂತ್ರ ರೂಪಿಸಿತ್ತೆಂದು ಬಯಲಾಗಿದೆ. ಪೇಜಾವರ ಇಂಗು ತಿಂದ ಮಂಗನಾಗಿದ್ದಾನೆ.





ಕೋಮು ದ್ವೇಷ ಹಾಗೂ ಗಲಭೆಗಳು ಹುಟ್ಟಿಕೊಳ್ಳುವುದು ಹೇಗೆಂಬುದರ ಗುಟ್ಟು ಈ ಘಟನೆಯಿಂದಾಗಿ ಇನ್ನಷ್ಟು ಖಚಿತವಾಗಿದೆ.

ಈ ಚೆಡ್ಡಿಪಡೆ ತಾವೇ ಹಿಂದೂ ದೇವಸ್ಥಾನದೊಳಗೆ ದನದ ಮಾಂಸ ಹಾಕಿ, ತಾವೇ ದೇವರ ಮೂರ್ತಿ ಒಡೆದು ಹಾಕಿ, ಅದಕ್ಕೆ ಮುಸ್ಲಿಮರೇ ಕಾರಣ ಎಂಬ ಸುಳ್ಳು ಸುದ್ದಿ ಹಬ್ಬಿಸಿ ಗಲಭೆಗೆ ಪ್ರಚೋದನೆ ನೀಡುವ ದುಷ್ಟ ಕೆಲಸದಲ್ಲಿ ತೊಡಗಿದ್ದಾರೆ. ಮಹಾರಾಷ್ಟ್ರದ ನಾಮ್‌ದೇಡ್‌ನಲ್ಲಿ ಬಾಂಬ್ ತಯಾರಿಸಲು ಹೋಗಿ ಅದು ಸ್ಫೋಟಿಸಿ ಏಟು ತಿಂದಿದ್ದಾರೆ. ಗೋರಕ್ಷಣೆಯ ಹೆಸರಿನಲ್ಲಿ ದನಗಳನ್ನು ಕದ್ದು ಮಾರಿರುವ ಘಟನೆಗಳು ಕರಾವಳಿ ಜಿಲ್ಲೆಗಳಲ್ಲಿ ನಡೆದಿವೆ.

ಮುಗ್ಧ ಜನ ಈ ಹಿಂದೂ ಘಟಿಂಗರ ಬಗ್ಗೆ ಎಚ್ಚರದಿಂದರಬೇಕಿದೆ. ಕೊನೆಯದಾಗಿ ತಿರುಪತಿ ಮತಾಂತರದ ಬಗ್ಗೆ ಪ್ರತಿದಿನ ಮುಖಪುಟದಲ್ಲಿ ವರದಿ ಪ್ರಕಟಿಸುತ್ತಾ ಚೆಡ್ಡಿಗಳ ಕುತ್ತೂರಿಯಂತೆ ವರ್ತಿಸಿದ ಕನ್ನಡ ದಿನಪತ್ರಿಕೆಗಳು ಓಂಪ್ರಕಾಶ್ ಹಾಗೂ ವಿಶ್ವನಾಥನ ಅರೆಸ್ಟ್ ವಿಚಾರವನ್ನು ಮಾತ್ರ ಪ್ರಕಟಿಸಲಿಲ್ಲ, 'ಪ್ರಜಾವಾಣಿ' ಹೊರತುಪಡಿಸಿ....! ಇದೂ ನಿಮ್ಮ ಗಮನದಲ್ಲಿರಲಿ.

ಬುದ್ಧಿಯ ಕಣ್ಣು ಹೃದಯಕ್ಕಿದೆ -ಜೆ.ಎಲ್.ಫಾರ್ನೆ...

ಕುರುಬ ಮಠದ ದುಡ್ಡು ಬ್ರಾಹ್ಮಣನ ಪಾಲು


ಕುರುಬ ಜನಾಂಗದವರ ಕಾಗಿನೆಲೆ ಮಠದ ಬಾಬ್ತು 1 ಕೋಟಿ ರೂಪಾಯಿಯಷ್ಟು ಹಣ ನಾಪತ್ತೆಯಾಗಿದೆ. ಮೊತ್ತವನ್ನು ಜೋಶಿ ಎಂಬ ಬ್ರಾಹ್ಮಣ ನುಂಗಿ ಪರಾರಿಯಾಗಿದ್ದಾನೆಂಬ ಪುಕಾರುಗಳು ಎದ್ದಿವೆ.


1991 ರಲ್ಲಿ ಸ್ಥಾಪನೆಯಾದ ಕಾಗಿನೆಲೆ ಕನಕ ಗುರುಪೀಠಕ್ಕೆ ಪೀಠಾಧಿಕಾರಿಯಾಗಿ ಬಂದವರು ಬೀರೇಂದ್ರ ಕೇಶವ ತಾರಕಾನಂದ ಪುರಿ ಸ್ವಾಮಿಗಳು. ನಾಡಿನ ಕುರುಬ ಜನಾಂಗದವರ, ರಾಜಕಾರಣಿ, ಅಧಿಕಾರಿ, ವ್ಯಾಪಾರಿಗಳ ಬೆಂಬಲದಿಂದ ಮಠ ಭದ್ರವಾಗಿ ನೆಲೆಯೂರಿತ್ತಲ್ಲದೆ ಹಲವಾರು ಶಾಲಾ-ಕಾಲೇಜುಗಳು, ಹಾಸ್ಟೆಲ್‌ಗಳೂ ಶುರುವಾಗಿದ್ದವು-ಟಿಸಿಎಚ್, ಬಿಎಡ್ ಕಾಲೇಜುಗಳ ಮೂಲಕ ಅಲ್ಪಸ್ವಲ್ಪ ಹಣವೂ ಮಠಕ್ಕೆ ಹರಿದು ಬರತೊಡಗಿತ್ತು. ಆದರೆ ಈಗ ಬೀರೇಂದ್ರ ಸ್ವಾಮಿಗಳ ನಿಧನಾನಂತರ ಏಕಾಏಕಿ 1 ಕೋಟಿ ರೂ.ನಷ್ಟು ಮಠದ ಹಣ ನಾಪತ್ತೆ ಯಾಗಿದೆ ಎಂಬ ಪುಕಾರುಗಳೆದ್ದಿವೆ. ಜೋಶಿ ಎಂಬುವನ ಕೈವಾಡವೇ ಇದಕ್ಕೆ ಕಾರಣ ಎನ್ನಲಾಗುತ್ತಿದೆ.


ಯಾರೀ ಜೋಶಿ

ಜೋಶಿ ಯಾನೆ ಸಂಜಯ ಜೋಶಿ ಚೆನ್ನೈ ಮೂಲದ ವಜ್ರದ ವ್ಯಾಪಾರಿ. ಇವನಿಗೆ ಚೆನ್ನೈ, ಹೈದರಾಬಾದ್ ಹಾಗೂ ಬೆಂಗಳೂರಿನಲ್ಲಿ ಚಿನ್ನ-ವಜ್ರಗಳ ಬ್ಯುಸಿನೆಸ್ ಇದೆ. ಈಗ್ಗೆ ನಾಲ್ಕೈದು ವರ್ಷಗಳ ಹಿಂದೆ ಅದ್ಹೇಗೋ ಬೀರೇಂದ್ರ ಕೇಶವರ ಸಂಪರ್ಕಕ್ಕೆ ಬಂದ ಈ ಜೋಶಿ ಮಠದ ದುಡ್ಡನ್ನು ಸುರಕ್ಷಿತವಾಗಿ ಇಟ್ಟಿರುತ್ತೇನೆಂದೋ ಇಲ್ಲಾ ಲಾಭದ ಸಮೇತ ವಾಪಸ್ ಕೊಡುತ್ತೇನೆಂದೋ ಹೇಳಿ ಅಂದಾಜು 1 ಕೋಟಿ ರೂಪಾಯಿಯಷ್ಟು ಮೊತ್ತವನ್ನು ತೆಗೆದುಕೊಂಡಿದ್ದನಂತೆ. ಮಠದ ಕೆಲವರಿಗೆ ಮಾತ್ರ ಇದು ಗೊತ್ತಿತ್ತು. ಬೀರೇಂದ್ರರ ನಿಧನಾನಂತರ ಈ ಹಣ ವಾಪಸ್ ಕೊಡುವಂತೆ ಜೋಶಿಗೆ ಹೇಳಿಕಳಿಸಲಾಗಿದೆ. ಆದರೆ ಈ ಜೋಶಿ ತಪ್ಪಿಸಿಕೊಂಡು ತಿರುಗಾಡಿದ್ದಾನೆಯೇ ವಿನಃ ಹಣ ವಾಪಸ್ ಮಾಡುವ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಇದರಿಂದ ಕಂಗಾಲಾದ ಕುರುಬ ಸಮಾಜದ ಮುಖಂಡರು ಕೊನೆಗೆ ಕಳೆದವಾರ ಜೋಶಿಯನ್ನು ಎಳೆ ತರಿಸಿದ್ದಾರೆ. ಬೆಂಗಳೂರಿನ ವಿದ್ಯಾಪೀಠದಲ್ಲಿರುವ ಮಠದ ಕಚೇರಿಯಲ್ಲಿ ಎಚ್.ಎಂ. ರೇವಣ್ಣ ಖುದ್ದು ಬಂದು ಜೋಶಿಗೆ ಧಮಕಿ ಹಾಕಿ ಹಣ ವಸೂಲಿ ಮಾಡಿ ಕೊಟ್ಟಿದ್ದಾರೆಂಬ ಮಾತುಗಳು ಕೇಳಿಬರುತ್ತಿವೆ. ಆದರೆ ಜೋಶಿ ಇನ್ನೂ ಪೂರ್ತಿ ದುಡ್ಡು ಕೊಟ್ಟಿಲ್ಲ ಎಂಬುದು ನಿಜ. ಇದಕ್ಕಿಂತಾ ಮುಖ್ಯವಾಗಿ ಬೀರೇಂದ್ರ ಕೇಶವ ಸ್ವಾಮಿಗಳು ಈ ಜೋಶಿಗೇಕೆ ಅಷ್ಟು ಹಣ ಕೊಟ್ಟರು ಎಂಬುದಕ್ಕೆ ಸದ್ಯಕ್ಕೆ ಉತ್ತರ ಸಿಗುತ್ತಿಲ್ಲ.

ಯಾರನ್ನೋ ನಂಬಿ ಹಣ ಕಳೆದುಕೊಳ್ಳುವ ಪರಿಪಾಠ ಕಾಗಿನೆಲೆ ಮಠಕ್ಕೆ ಹೊಸದೇನಲ್ಲ. ಈ ಹಿಂದೆ ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ಕುರುಬ ಸಮಾಜಕ್ಕೆ ಒಂದು ಮೆಡಿಕಲ್ ಕಾಲೇಜ್ ಮಂಜೂರು ಮಾಡಿದ್ದರು. ಶ್ರೀ ರೇವಣ ಸಿದ್ಧೇಶ್ವರ ಹೆಸರಿನಲ್ಲಿ ಮೆಡಿಕಲ್ ಕಾಲೇಜ್ ಸ್ಥಾಪನೆಗೆ ಕೆಲ ತಯಾರಿಗಳು ಆಗ ನಡೆದಿದ್ದವು. ಅದೇ ವೇಳೆಯಲ್ಲಿ ಅಮೆರಿಕಾದಲ್ಲಿ ನೆಲೆಸಿರುವ ಡಾ. ನಾಗರಾಜ್ ಕಾಲೇಜು ಸ್ಥಾಪನೆಗೆಂದೇ ಹತ್ತಿರತ್ತಿರ ಒಂದು ಕೋಟಿ ರೂ. ನೀಡಿದ್ದರು. ಆ ಹಣವನ್ನು ಗಾಂಧಿನಗರದ ಕಾಳಿದಾಸ ಕೋ- ಆಪರೇಟಿವ್ ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಲಾಗಿತ್ತು. ಈ ಹಣವನ್ನು ಯಾರೇನೂ ದುರುಪಯೋಗ ಮಾಡಿಕೊಂಡಿರಲಿಲ್ಲ. ಆದರೆ ಕಾಳಿದಾಸ ಬ್ಯಾಂಕೇ ದಿವಾಳಿಯೆದ್ದು ಮುಳುಗಿ ಹೋಯಿತು. ಸಂಘಕ್ಕೆ 1 ಕೋಟಿ ರೂ. ನಷ್ಟವಾಯಿತು. ಈಗ ಜೋಶಿ ಎಂಬುವನ ರೂಪದಲ್ಲಿ ಕುರುಬ ಸಮಾಜ ಎರಡನೇ ಪೆಟ್ಟು ತಿಂದಿದೆ.


ಸಿದ್ದಪ್ಪ ಬೆಳವಂದ


ಕಾಳೇಶ್


ಅರವಿಂದ ದಳವಾಯಿ

ಕುರುಬರ ಮಠದ ವೈಶಿಷ್ಟತೆ ಏನೆಂದರೆ ಅಲ್ಲಿ ಬ್ರಾಹ್ಮಣ-ಲಿಂಗಾಯತ ಮಠಗಳಲ್ಲಿರುವಂತೆ ಸ್ವಾರ್ಥ-ಭ್ರಷ್ಟಾಚಾರ ಹಣ ಗುಳುಂ ಮಾಡುವ ರಾದ್ಧಾಂತಗಳು ಇದುವರೆಗೂ ಕೇಳಿಬಂದಿರಲಿಲ್ಲ. ಆದರೆ ಯಾರನ್ನೋ ನಂಬಿ ಮೋಸ ಹೋಗಿರುವ ಘಟನೆಗಳಂತೂ ಪದೇಪದೇ ನಡೆಯುತ್ತಿವೆ. ವಜ್ರದ ವ್ಯಾಪಾರಿ ಜೋಶಿಯ ರೂಪದಲ್ಲಿ ಈಗ ಕುರುಬ ಸಮಾಜ ಮತ್ತೊಮ್ಮೆ ಮೋಸ ಹೋಗಿದೆ.

ಬಸವರಾಜದೇವರ ಪರ್ಯಾಯಪೀಠ

ನಿಜಕ್ಕೂ ಇದೊಂದು ದುರದೃಷ್ಟಕರ ಬೆಳವಣಿಗೆ ಹಾಲಿ ಇರುವ ಕುರುಬರ ಮಠವು ವೈಷ್ಣವ ಪರಂಪರೆಗೆ ಮಾತ್ರ ಆದ್ಯತೆ ನೀಡುತ್ತಿದೆ. ಉತ್ತರ ಕರ್ನಾಟಕದವರಿಗೆ ಮಠದಲ್ಲಾಗಲೀ, ಸಂಘದಲ್ಲಾಗಲಿ ಸೂಕ್ತ ಪ್ರಾಧಾನ್ಯತೆ ನೀಡಿಲ್ಲ ಎಂದು ಆರೋಪಿಸಿ ಧಾರವಾಡದ ಬಸವರಾಜ ದೇವರು ಸ್ವಾಮೀಜಿ, ಅರವಿಂದ ದಳವಾಯಿ, ಕಾಳೇಶ, ಸಿದ್ದಪ್ಪ ಬೆಳವಂದ ಮುಂತಾದವರು ಪರ್ಯಾಯ ಪೀಠ ಸ್ಥಾಪನೆಯ ಬೆದರಿಕೆ ಒಡ್ಡಿದ್ದಾರೆ.

ಇದೊಂದು ಅಹಿತಕರ ಬೆಳವಣಿಗೆಯೇ ಆಗಿದ್ದರೂ ಈ ಗುಂಪಿನವರ ಮಾತಿನಲ್ಲಿ ಅರ್ಥವಿದೆ. ಏಕೆಂದರೆ ಕುರುಬರ ಕುಲದೇವರಾದ ಶ್ರೀ ಬೀರೇಶ್ವರ ಸ್ವಾಮಿ ಹಾಗೂ ಕುಲಗುರುಗಳಾದ ಶ್ರೀ ರೇವಣಸಿದ್ದೇಶ್ವರರು ಶೈವ ಪಂಥಕ್ಕೆ ಸೇರಿದವರೇ ವಿನಃ ವಿಷ್ಣುವಿನ ಆರಾಧಕರಲ್ಲ ಹಾಗೂ ವೈಷ್ಣವ ಪಂಥದವರಲ್ಲ. ಕನಕದಾಸರೊಬ್ಬರು ಮಾತ್ರ ದಾಸ ಸಾಹಿತ್ಯ ಪರಂಪರೆಯಲ್ಲಿ ಸಾಗಿ ವೈಷ್ಣವ ಮತಾನುಯಾಯಿಯಾಗಿದ್ದರು. ಆದರೆ ಕನಕದಾಸರು ಭೋಜನಪ್ರಿಯ ಬ್ರಾಹ್ಮಣರಿಗಿಂತಾ ಎಷ್ಟೋ ಪ್ರತಿಭಾವಂತರಾಗಿದ್ದು, ಸಮಾಜಮುಖಿ ಚಿಂತನೆ ನಡೆಸಿದವರಾಗಿದ್ದರೂ ಪುರೋಹಿತಶಾಹಿಗಳು ಅವರನ್ನು ಗೌರವಿಸದೆ ದೂರವಿಟ್ಟಿದ್ದರು. ಕೊನೆಗೆ ಉಡುಪಿಯಲ್ಲಿದ್ದ ಕನಕಗೋಪುರವನ್ನೇ ಕೆಡವಿ ತಮ್ಮ ಪುರೋಹಿತಶಾಹಿ ದೌರ್ಜನ್ಯ ನಡೆಸಿದ್ದರು. ಇಷ್ಟಾದರೂ ಕುರುಬರ ಗುರುಪೀಠದ ವ್ಯವಹಾರಗಳಲ್ಲಿ ಬ್ರಾಹ್ಮಣ ಜಾತಿಯ ಪೇಜಾವರ ಸ್ವಾಮಿಯು ಮೊದಲಿಂದಲೂ ಮೂಗು ತೂರಿಸುತ್ತಾ ಬಂದಿದ್ದಾರೆ. ಬೀರೇಂದ್ರ ಕೇಶವರ ಪಟ್ಟಾಭಿಷೇಕ ಸಂದರ್ಭದಲ್ಲಿ ಮಠಾಧೀಶರ ಹೆಸರಿನ ಆಯ್ಕೆಯಲ್ಲೂ ಪೇಜಾವರರದ್ದೇ ಅಂತಿಮ ತೀರ್ಮಾನವಾಗಿತ್ತು. ಕೊನೆಗೆ ಇದು ಎಷ[...] ಅತಿರೇಕಕ್ಕೆ ಹೋಗಿದೆ ಎಂದರೆ ಕಾಗಿನೆಲೆಯ ಕನ[...] ಗುರುಪೀಠದಲ್ಲಿ ಬೀರೇಶ್ವರ, ರೇವಣಸಿದ್ಧೇಶ್ವರರ ನೆನಪ[...] ಸ್ಮಾರಕಗಳೂ ಅಸ್ತಿತ್ವಕ್ಕೆ ಬರದಂತಾಗಿವೆ.

ಈಗ ಭಿನ್ನಮತೀಯರ ಗುಂಪು ಈ ಅಪಚಾರಗಳನ[...] ಸರಿಪಡಿಸಬೇಕೆಂದು ಒತ್ತಾಯಿಸಿದೆ. ಸಿದ್ಧರಾಮಯ್ಯ[...] ವಿಶ್ವನಾಥ್, ರೇವಣ್ಣನವರು ಇದನ್ನು ನಿರ್ಲಕ್ಷಿಸದೆ ಎಲ[...] ವನ್ನೂ ಸರಿಪಡಿಸಿದರೆ ಕುರುಬರ ಒಗ್ಗಟ್ಟ[...] ಉಳಿಯುತ್ತದೆ.

ದೇವೇಗೌಡರ ಕಳ್ಳಾಟ

ಸಿದ್ಧರಾಮಯ್ಯನವರನ್ನು ದುರ್ಬಲಗೊಳಿ[...] ಸಲು ಸ್ಕೆಚ್ ಹಾಕುತ್ತಿರುವ ದೇವೇಗೌಡರಿಗ[...] ಈಗಿನ ಕುರುಬ ಸಮಾಜದ ಭಿನ್ನಭಿಪ್ರಾಯ[...] ವರಪ್ರಸಾದದಂತೆ ಸಿಕ್ಕಿದೆ. ಗೌಡರು ಇದನ್ನ[...] ಉಪಯೋಗಿಸಿಕೊಳ್ಳದೇ ಬಿಡುವಷ್ಟು[...] ದಡ್ಡರೇನಲ್ಲ, ಹಾಗಾಗಿ ಗೌಡರು ತೆರೆಮರ[...] ಯಲ್ಲೇ ನಿಂತು ಉತ್ತರ ಕರ್ನಾಟಕದ ಕೆಲವ[...] ಜಾತ್ಯತೀತ ದಳದ ಕುರುಬ ಮುಖಂಡರನ್ನು ಸಿದ್ಧರಾಮಯ[...] ವಿರುದ್ಧ ಎತ್ತಿಕಟ್ಟಿದ್ದಾರೆ. ಇವರಲ್ಲಿ ಗದಗ ಜಿಲ್ಲೆಯ ರ[...] ದಂಡಿನ ಎಂಬಾತ ಗೌಡರ ಕೈಗೆ ದಾಳವಾಗಿ ಸಿಕ್ಕಿದ್ದಾರೆ[...] ಕುರುಬರ ಸಂಘದಲ್ಲಿ ಉತ್ತರ ಕರ್ನಾಟಕದವರಿಗೆ ಜಾಗ[...] ಸಿಕ್ಕಿಲ್ಲವೆಂಬ ಜಗಳ ತೆಗೆಯಲಾಗಿದೆ. ಆದರೆ ಮಠ[...] ಅಥವಾ ಸಂಘದಲ್ಲಿ ಉತ್ತರ ಕರ್ನಾಟಕದವರೇ ಆದ[...] ಕೊಪ್ಪಳದ ಹನುಮಂತಪ್ಪ ಅಂಗಡಿ ಧರ್ಮದರ್ಶಿಯಾಗ[...] ದ್ದಾರೆ. ಮುಂಡರಗಿಯ ವೈ.ಎಸ್. ಗೌಡರ್ ಸಂಘದ[...] ರಾಜ್ಯ ಉಪಾಧ್ಯಕ್ಷರಾಗಿದ್ದರೆ, ಸಿಂಧನೂರಿನ ವಿರೂಪಾಕ್ಷಪ್ಪ[...] ನಿಪ್ಪಾಣಿಯ ಲಕ್ಷ್ಮಣರಾವ್ ಚಿಂಗಳೆ, ರಘುನಾಥ ಮಲಕಾ[...] ಮುಂತಾದವರು ಸಂಘದ ಪ್ರಮುಖ ಹುದ್ದೆಗಳಲ್ಲಿರುವವರೆ[...] ಹಾಗಾಗಿ ಉತ್ತರ-ದಕ್ಷಿಣ ಕರ್ನಾಟಕವೆಂಬ ತಾರತಮ್ಯ[...] ನಡೆದಿಲ್ಲ ಎಂಬುದು ಮುಖಂಡರ ಅಭಿಪ್ರಾಯ[...] ಹೀಗಿದ್ದಾಗಲೂ ಕುರುಬ ಮುಖಂಡರ ಈ ಒಳಜಗಳ[...] ದೇವೇಗೌಡರಿಗೆ ಸಮಾಧಾನ ಕೊಟ್ಟಿರುವುದಂತೂ ನಿಜ.

-ವರದಿಗಾರ[...]

ಒಡನಾಡಿಯ ಪರುಶುರಾಂ ಮೇಲೆ ಸುಳ್ಳುಸುಳ್ಳೇ ಕೇಸು...!

ಮೈಸೂರಿನ ಅಷ್ಟೂ ತಲೆಹಿಡುಕರೂ, ಪೊಲೀಸರೂ ಒಡನಾಡಿ ಸಂಸ್ಥೆಯ ಮೇಲೆ ಮುರಕೊಂಡು ಬಿದ್ದಿದ್ದಾರೆ. ಬೀದಿ ಮಹಿಳೆಯರ, ಲೈಂಗಿಕ ಕಾರ್ಯಕರ್ತರ ಪುನರ್ವಸತಿಗಾಗಿ ಕಳೆದ ಹತ್ತು ವರ್ಷಗಳಿಂದಲೂ ಪ್ರಾಮಾಣಿಕವಾಗಿ ದುಡಿಯುತ್ತಾ ಬಂದಿದ್ದ ಒಡನಾಡಿಯ ಪರುಶುರಾಂ ಪೊಲೀಸ್ ಮತ್ತು ಪಿಂಪ್‌ಗಳ ಕುತಂತ್ರದಿಂದ ಜೈಲು ಸೇರಿದ್ದಾರೆ. ಬೀದಿ ಮಹಿಳೆಯರ ಪುನರ್ವಸತಿಗಾಗಿ ದುಡಿಯುತ್ತಿರುವ ಒಡನಾಡಿಯ ಪರುಶು-ಸ್ಟ್ಯಾನ್ಲಿ ಜೋಡಿಯ ಮೇಲೆ, ಮೈಸೂರಿನ ಪೊಲೀಸರಿಗಷ್ಟೇ ಅಲ್ಲ; ಅಂತರ ರಾಜ್ಯ ತಲೆಹಿಡುಕ ಸ್ಯಾಂಟ್ರೋ ರವಿಯಿಂದ ಹಿಡಿದು, ಸಿದ್ಧಾರ್ಥ ಲೇಔಟಿನ ಹೈಟೆಕ್ ಘರ್‌ವಾಲಿ ಪದ್ಮಳಂತಹ ಮಾಂಸದ ದಂಧೆಯವರಿಗೆಲ್ಲಾ ಸಿಕ್ಕಾಪಟ್ಟೆ ಸಿಟ್ಟು. ಕಾರಣ: ಸ್ಯಾಂಟ್ರೋ ರವಿಯ ಅಂತರರಾಜ್ಯ ಸೆಕ್ಸ್ ನೆಟ್‌ವರ್ಕ್‌ನ್ನು ಬಯಲಿಗೆಳೆದು ಆತ ಜೈಲಿಗೆ ಸೇರುವಂತೆ ಮಾಡಿದ್ದು ಇವರೇ. ಪದ್ಮಳ ದಂಧೆ ಮುಚ್ಚಿಸಿದ್ದು ಇದೇ ತಂಡ. ಆದ್ದರಿಂದಲೇ ಒಡನಾಡಿ ಸಂಸ್ಥೆಯ ಮೇಲೆ ತಲೆಹಿಡುಕರು, ಅವರಿಗೆ ಆಶ್ರಯ ನೀಡಿರುವ ಪುಡಿ ರಾಜಕಾರಣಿಗಳು, ಚಿಲ್ಲರೆ ರೌಡಿಗಳು ಮತ್ತು ಪೊಲೀಸರು ಒಮ್ಮೆಲೇ ಮುಗಿಬಿದ್ದು, ಕ್ಷುಲ್ಲಕ ವಿಷಯವನ್ನೇ ದೊಡ್ಡದು ಮಾಡಿ, ಒಡನಾಡಿಯ ಪರಶುರಾಂರನ್ನು ಸುಳ್ಳು ಕೇಸಿಗೆ ಫಿಕ್ಸ್ ಮಾಡಿ ಜೈಲಿಗೆ ಕಳಿಸಿದ್ದಾರೆ.

ಘಟನೆ ವಿವರ


ಆಗಸ್ಟ್ 8 ರಂದು ಮೈಸೂರಿನಲ್ಲಿ ನಡೆದದ್ದೇನು ಎಂಬುದನ್ನು 'ಲಂಕೇಶ್' ಕೆದುಕುತ್ತಾ ಹೋದಂತೆ, ಅಲ್ಲಿನ ಪೊಲೀಸರು ಮತ್ತು ತಲೆಹಿಡುಕರ ನಡುವಿನ ಅನೈತಿಕ ಸಂಬಂಧ ನಿಧಾನವಾಗಿ ಬಿಚ್ಚಲಾಗುತ್ತದೆ.

ಅಂದು ನಡೆದ ಘಟನೆಯ ಕೇಂದ್ರಬಿಂದು ವಂದನಾ ಎಂಬಾಕೆ. ಮಂಗಳೂರಿನ ಹುಡುಗಿ. ಮಾನಸಿಕವಾಗಿ ಹತಾಶೆಗೊಳಗಾಗಿದ್ದ ಈಕೆಯನ್ನು ಈಕೆಯ ತಂದೆ ದಾಮೋದರ ರಾವ್ ಜುಲೈ 18 ರಂದು ಒಡನಾಡಿಗೆ ಕರೆತಂದಿದ್ದಾರೆ. ಲೈಂಗಿಕ ಕಾರ್ಯಕರ್ತರ ಪುನರ್‌ವಸತಿಗೆಂದೇ ಆರಂಭವಾಗಿರುವ ಒಡನಾಡಿಯಲ್ಲಿ, ಅಪ್ರಾಪ್ತ ವಯಸ್ಸಿನ ಹುಡುಗಿಗೆ ಆಶ್ರಯ ನೀಡುವುದು ಸಾಧ್ಯವಿಲ್ಲ ಎಂದು ಪರಶು-ಸ್ಟ್ಯಾನ್ಲಿ ಈಕೆಯ ತಂದೆಗೆ ಹೇಳಿ, ಪ್ರವೇಶ ನಿರಾಕರಿಸಿದ್ದಾರೆ.

ಆದರೆ ಎರಡು ತಿಂಗಳ ಹಿಂದೆ ಒಡನಾಡಿಯಲ್ಲಿ ಪ್ಲೇಸ್‌ಮೆಂಟ್‌ಗಾಗಿ ಬಂದಿದ್ದ ಮಂಗಳೂರಿನ ಆಳ್ವಾಸ್ ಕಾಲೇಜಿನ ಎಂ.ಎಸ್.ಡಬ್ಲ್ಯೂ ವಿದ್ಯಾರ್ಥಿನಿ ಗಾಯತ್ರಿ ಆ ಸಮಯದಲ್ಲಿ ವಂದನಾಳ ಹಿಂದಿನ ಜೀವನದ ಘಟನೆಗಳನ್ನು ವಿವರಿಸಿ, ಇಲ್ಲಾದರೂ ಈಕೆ ಬದಲಾಗಬಹುದು, ನಿಮ್ಮಲ್ಲಿ ಈಕೆ ಉಳಿಯಲು ಅವಕಾಶ ನೀಡಿ ಎಂದಿದ್ದಾರೆ. ಪರಿಚಯದ ಗಾಯತ್ರಿ ಹೇಳಿದ ನಂತರ ವಂದನಾಳಿಗೆ ಪರುಶುರಾಂ-ಸ್ಟ್ಯಾನ್ಲಿ ಒಡನಾಡಿಯಲ್ಲಿ ಉಳಿಯಲು ಅವಕಾಶ ನೀಡಿದ್ದಾರೆ. ಹಾಗೆ ಉಳಿಯಲಿಕ್ಕೆ ಅವಕಾಶ ನೀಡಿದ್ದೆ, ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗಿದೆ.

ಮನೆಯಿಂದ ಓಡಿ ಹೋಗಿದ್ದಳು

ಮಂಗಳೂರಿನ ತೊಕ್ಕಟ್ಟು ಬಡಾವಣೆಯಲ್ಲಿ ಕೂಲಿ ಮಾಡಿಕೊಂಡು ಬದುಕುತ್ತಿರುವ ದಾಮೋದರ ರಾವ್ ದಂಪತಿಗೆ ಇಬ್ಬರು ಹೆಣ್ಣುಮಕ್ಕಳು. ಈ ಪೈಕಿ ದೊಡ್ಡ



ಮಗಳು ವಂದನಾ ತಂದೆ-ತಾಯಿಯರಿಗೆ ತಲೆ ಬಿಸಿಯಾಗಿದ್ದಳು. ಕಾರಣ ಬಾಲ್ಯದಿಂದಲೇ ಈಕೆ ಮಾನಸಿಕ ಕಾಯಿಲೆಗೆ ತುತ್ತಾಗಿದ್ದುದ್ದು. ಇದರಿಂದಾಗಿಯೇ ಈಕೆ ಐದನೇ ತರಗತಿಯಲ್ಲಿದ್ದಾಗಲೇ ಮನೆಬಿಟ್ಟು ಓಡಿಹೋಗಿದ್ದಳು. ಆಗೇನೋ ತಂದೆ-ತಾಯಿ ಈಕೆಯನ್ನು ಹುಡುಕಿ ವಾಪಸ್ಸು ಕರೆತಂದಿದ್ದರು. ಆದರೆ ವಂದನಾ ಪದೇಪದೇ ಮನೆಬಿಟ್ಟು ಹುಡುಗರೊಂದಿಗೆ ಬೇರೆ ಊರಿಗೆ ಹೋಗಲು ಶುರು ಮಾಡಿದ್ದಾಳೆ. ಈ ಸಂಬಂಧ ತಂದೆ-ತಾಯಿ ಉಳ್ಳಾಲದ ಪೊಲೀಸರಿಗೆ ಮಗಳು ತಪ್ಪಿಸಿಕೊಂಡಿರುವ ಬಗ್ಗೆ ದೂರನ್ನು ನೀಡಿದ್ದಾರೆ. ಅಲ್ಲಿನ ಪೊಲೀಸರಿಗೆ ಈಕೆಯ ಪರಾರಿ ಪ್ರಕರಣವು ತಲೆಬೇನೆಯಾಗಿ, ಮತ್ತೆ ಈ ಕಡೆ ತಲೆ ಹಾಕದಂತೆ ವಂದನಾ ತಂದೆ-ತಾಯಿಗೆ ಪೊಲೀಸರು ಗದರಿದ್ದಾರೆ.

ಮೆಡಿಕಲ್ ರಿಪೋರ್ಟ್ ಏನೇಳುತ್ತೇ?

ಇಷ್ಟೆಲ್ಲಾ ರಂಪ-ರಾದ್ಧಾಂತಗಳಾದ ನಂತರ, ವಂದನಾಳನ್ನು ತಂದೆ-ತಾಯಿ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯ ಮಾನಸಿಕ ವೈದ್ಯರ ಬಳಿ ಕರೆತಂದಿದ್ದಾರೆ. ಈಕೆಯನ್ನು ಪರೀಕ್ಷಿಸಿದ ವೈದ್ಯರು ನಂತರ ತಮ್ಮ ರಿಪೋರ್ಟಿನಲ್ಲಿ ಈಕೆಯಲ್ಲಿರುವ ಮಾನಸಿಕ ಸಮಸ್ಯೆಗಳನ್ನು ತಿಳಿಸಿ ಈಕೆಯನ್ನು ದೂರದ ಪರಿಸರದಲ್ಲಿ ಸ್ವಲ್ಪ ದಿನ ಬಿಡುವಂತೆ ಹೇಳಿದ್ದಾರೆ. ಈ ಹೊತ್ತಿಗಾಗಲೇ ವಂದನಾಳ ಕಾಟಗಳಿಂದ ಸಾಮಾಜಿಕವಾಗಿ ಜರ್ಝರಿತರಾಗಿದ್ದ ದಾಮೋದರ್ ರಾವ್ ದಂಪತಿ ಗಾಯತ್ರಿಯ ಸಲಹೆಯಂತೆ ಮೈಸೂರಿನ ಒಡನಾಡಿಗೆ ತಂದುಬಿಟ್ಟಿದ್ದಾರೆ.


ವಂದನಾ

ಮತ್ತೆ ಓಡಿ ಹೋದಳು!

ಜುಲೈ 18 ರಂದು ಒಡನಾಡಿಯಲ್ಲಿ ಆಶ್ರಯ ಪಡೆದ ವಂದನಾ, ಅಲ್ಲಿ ಇದ್ದದ್ದು ಕೇವಲ 20 ದಿವಸ ಮಾತ್ರ. ಅಷ್ಟೊತ್ತಿಗಾಲೇ ತನ್ನ ಹಿಂದಿನ ಚಾಳಿ ಮತ್ತೆ ಆರಂಭಿಸಿದ ವಂದನಾ ಆಗಸ್ಟ್ 8 ರಂದು ಅಲ್ಲಿಂದ ತಪ್ಪಿಸಿಕೊಂಡಿದ್ದಾಳೆ. ವಿಚಾರವನ್ನು ಪರಶು-ಸ್ಟ್ಯಾನ್ಲಿ ಆಕೆಯ ತಂದೆ-ತಾಯಿಗೆ ದೂರವಾಣಿ ಮುಖಾಂತರ ತಿಳಿಸಿದ್ದಾರೆ. ವಿಷಯ ತಿಳಿದ ದಾಮೋದರರಾವ್ ದಂಪತಿ ಈಕೆಯ ಇತ್ತೀಚಿನ ಪ್ರೇಮಿ ದಿವೇಶ್‌ನನ್ನು ರೌಂಡ್ ಅಪ್ ಮಾಡಿದ್ದಾರೆ. ರಾತ್ರಿ 8 ರ ವೇಳೆಗೆ ವಂದನಾ ದಿವೇಶ್‌ಗೆ ಫೋನ್ ಮಾಡಿ, ತಾನು ಮೈಸೂರಿನ ಬಸ್‌ಸ್ಟ್ಯಾಂಡಿನಲ್ಲಿರುವುದಾಗಿ ಹೇಳಿದ್ದಾಳೆ. ದಿವೇಶ್‌ನ ಮೊಬೈಲ್‌ನಿಂದ ಕರೆಬಂದ ನಂಬರು ಪಡೆದ ಈಕೆಯ ತಂದೆ-ತಾಯಿ ಆ ನಂಬರನ್ನು ಮತ್ತೆ ಪರುಶು-ಸ್ಟ್ಯಾನ್ಲಿಗೆ ನೀಡಿದ್ದಾರೆ.

ವಂದನಾ ತಂದೆ-ತಾಯಿಯಿಂದ ನಂಬರು ಪಡೆದ ಒಡನಾಡಿ ಸಂಸ್ಥೆಯವರು ಎಕ್ಸ್‌ಚೇಂಜ್‌ನಲ್ಲಿ ವಿಚರಿಸಿದಾಗ[...] ಆ ನಂಬರಿನ ಮಾಲೀಕರು ವಿಜಯಶ್ರೀಪುರದ ಅನಿತಾ[...] ಎಂದು ಗೊತ್ತಾಗಿದೆ. ಮತ್ತೆ ಆ ನಂಬರಿಗೆ ಡಯಲ್[...] ಮಾಡಿ ವಂದನಾ ಬಗ್ಗೆ ವಿಚಾರಿಸಿದಾಗ, ರಾತ್ರೋರಾತ್ರಿ[...] ಅವರು ಈಕೆಯನ್ನು ಕಾರಿನಲ್ಲಿ ತಂದು ಒಡನಾಡಿ ಸಂಸ್ಥೆಯ[...] ಮುಂದೆ ಇಳಿಸಿ ಹೋಗಿದ್ದಾರೆ. ಅದೇ ಸಮಯಕ್ಕೆ ಅ[...] ಮಾರ್ಗವಾಗಿ ಬರುತ್ತಿದ್ದ ಸಂಸ್ಥೆಯ ಮಂಗಳಾ ಮತ್ತು[...] ಗೀತಾ ಈಕೆಯನ್ನು ನೋಡಿ, ಸಂಸ್ಥೆಗೆ ವಾಪಸ್ಸು[...] ಬರುವಂತೆ ಒತ್ತಾಯಿಸಿದ್ದಾರೆ. ಮಂಗಳ, ಗೀತಾರು[...] ಒತ್ತಡ ಜಾಸ್ತಿಯಾದಾಗ ಈ ಹುಡುಗಿ ಜೋರಾಗಿ[...] ಕಿರುಚಿದ್ದಾಳೆ. ಆನಂತರ ನಡೆದದ್ದೆಲ್ಲವೂ[...] ಪೊಲೀಸ್- ಪಿಂಪ್‌ಗಳ ಮೇಲಾಟವೇ.

ರಸ್ತೆತಡೆ

ವಂದನಾ ರಂಪ ಮಾಡಿದ್ದರಿಂದ ದಾರಿ[...] ಯಲ್ಲಿ ಹೋಗುವವರೆಲ್ಲರೂ ಗುಂಪು[...] ಗೂಡಿದ್ದಾರೆ. ಈ ಜನರ ಜೊತೆಗೆ[...] ಒಡನಾಡಿ ಸಂಸ್ಥೆಯ ವಿರುದ್ಧ ಹಿಂದಿ[...] ನಿಂದಲೂ ಕುದಿಯುತ್ತಿದ್ದ ಹೂಟಗಳ್ಳಿಯ[...] ಪಲಾವ್ ಮಾದೇವ ತನ್ನ ಹುಡುಗ[...] ರೊಂದಿಗೆ ಸೇರಿಕೊಂಡಿದ್ದಾನೆ. ಈಗಷ್ಟೇ[...] ಜೈಲಿನಿಂದ ಜಾಮೀನಿನ ಮೇಲೆ ಹೊರಬಂದಿರುವ[...] ಸ್ಯಾಂಟ್ರೋ ರವಿ, ಸಿದ್ಧಾರ್ಥ ಲೇಔಟಿನ ಪದ್ಮ ಸಹ[...] ಕೈಜೋಡಿಸಿದ್ದಾರೆ. ಹೀಗೆ ಸೇರಿದವರು ಒಡನಾಡಿ ವಿರುದ್ಧ[...] ಕ್ರಮಕ್ಕೆ ಒತ್ತಾಯಿಸಿ ರಸ್ತೆ ತಡೆ ಆರಂಭಿಸಿದ್ದಾರೆ.

ಪೊಲೀಸರು ಸಾಥ್ ನೀಡಿದರು....!


ಒಡನಾಡಿಯ ವಿರುದ್ಧ ಪ್ರತಿಭಟನೆ ನಡೆಯುತ್ತಿದೆ[...] ಎಂಬ ಸುದ್ದಿ ಕಿವಿಗೆ ಬಿದ್ದೊಡನೆ ಮೈಸೂರಿನ ಕಮಿಷನರ್[...] ಪ್ರವೀಣ್ ಸೂದ್ ಅಂಡಿಗೆ ಪಟಾಕಿ ಕಟ್ಟಿಕೊಂಡವರಂತೆ[...] ಚುರುಕಾಗಿದ್ದಾರೆ. ತಕ್ಷಣ ವಿಜಯನಗರ ಪೊಲೀಸರಿಗೆ[...] ಕರೆ ಮಾಡಿ ಒಡನಾಡಿ ಸಂಸ್ಥೆಯ ವಿರುದ್ಧ ಕೇಸು[...] ದಾಖಲಿಸುವಂತೆ ಆದೇಶಿಸಿದ್ದಾರೆ. ಕಮಿಷನರೇ ಹೇಳಿದ[...] ಮೇಲೆ ವಿಜಯನಗರದ ಸೋಮಾರಿ ಇನ್ಸ್‌ಪೆಕ್ಟರ್[...] ಮೋಹನ್, ಒಡನಾಡಿಯ ಪರುಶುರಾಂ, ಮಂಗಳಾರ[...] ಮೇಲೆ ಐಪಿಸಿ 324, 506 ರೀತ್ಯಾ ಕೇಸು ಜಡಿದು[...] ಜೈಲಿಗೆ ಬಿಟ್ಟು ಬಂದಿದ್ದಾರೆ.

ಪೊಲೀಸರ ಈ ವರ್ತನೆ ಕಂಡು ಮೈಸೂರಿನ[...] ಪ್ರಜ್ಞಾವಂತ ಜನ, ಇವರು ಪೊಲೀಸರೋ, ಇಲ್ಲಾ ತಲೆ[...] ಹಿಡುಕರೋ ಎಂದು ಛೀ... ಥೂ ಅನ್ನುತ್ತಿದ್ದಾರೆ. ●

ತೀಕ್ಷ್ಣ ಬು[...] ಆಧುನಿಕ ಜಗತ್ತಿನಲ್ಲಿ 'ಅಮೂಲ್ಯ ವರದಾನ' -ಶೇಕ್ಸ್‌ಪಿಯರ್


ಗೌಡ್ರು ರಾಜಕೀಯಕ್ಕೆ ಬರದೆಯಿದ್ರೆ ನೀವದೇ ಕೆಲ್ಸ ಮಾಡಬೇಕಾಗಿತ್ತು!

ದೇವೇಗೌಡರ ಮಕ್ಕಳ ಮೇಲೆ ಅವ್ಯಾಹತವಾಗಿ ಹರಿದುಬರುತ್ತಿರುವ ಆಪಾದನೆಗಳಿಂದ ಅವರ್‍ಯಾರೂ ಕಿಂಚಿತ್ತೂ ವಿಚಲಿತರಾದಂತೆ ಕಂಡುಬಂದಿಲ್ಲವಂತಲ್ಲಾ. ಈ ಆಪಾದನೆಗಳ ಬಗ್ಗೆ ರೇವಣ್ಣನನ್ನು ಪ್ರಶ್ನೆ ಕೇಳಲಾಗಿ, "ಅಲ್ಲಾ ಸ್ವಾಮೀ, ಹೋಟ್ಳಲ್ಲಿ ಟೀ ಸಪ್ಲೈ ಮಾಡೋರು, ಬಾರಲ್ಲಿ ಡ್ರಿಂಕ್ಸ್ ತಂದುಕೊಡೊ ಕೂಲಿ ಜನಕ್ಕೆಲ್ಲಾ ನಾವು ಉತ್ತರ ಕೊಡಕ್ಕಾದತಾ?" ಎಂದರಂತಲ್ಲಾ. ಆಗ ಎದುರುಗಿದ್ದ ಪತ್ರಕರ್ತರು "ಹೋಟೆಲಿನಲ್ಲಿ ಟೀ ಕಾಫಿ ಕೊಡುವುದು, ಬಾರ್, ರೆಸ್ಟೋರೆಂಟಿನಲ್ಲಿ ಸಪ್ಲೈ ಮಾಡುವುದು ಅಷ್ಟೊಂದು ಕೀಳಾದ ಕೆಲಸವೆ? ಅವರೂ ಮತದಾರರಲ್ಲವೆ? ದೇವೇಗೌಡರು ರಾಜಕಾರಣಕ್ಕೆ ಬರದಿದ್ದರೆ ಆರು ಮಕ್ಕಳನ್ನು ಸಾಕಲು ನಿಮ್ಮಿಂದ ಅದೇ ಕೆಲಸ ಮಾಡಿಸಬೇಕಿತ್ತಲ್ಲವೆ" ಎಂಬ ಮರುಪ್ರಶ್ನೆಯನ್ನೇ ಎಸೆಯಲಿಲ್ಲವಂತಲ್ಲಾ. ಆದರೂ ಪತ್ರಕರ್ತರು ನೂರೈವತ್ತು ಕೋಟಿ ಹಣ ಅಕ್ರಮ ಆಸ್ತಿ ವಿಷಯ ಕೆದಕಲಾಗಿ, ರೇವಣ್ಣ ತುಂಬ ತಮಾಷೆಯಾಗಿ ಕಂಕುಳು ಕೆರೆದುಕೊಂಡು, ಮೂಸುತ್ತಾ "ನಾವು ತಪ್ಪು ಮಾಡಿದ್ರೆ ಯಾವ ಶಿಕ್ಷೆ ಬೇಕಾದ್ರು ಅನುಭವಿಸಕ್ಕೆ ತಯಾರಾಗಿದ್ದಿವಿ ಸ್ವಾಮಿ. ಆದ್ರೆ, ಈ ನರಮನುಸ್ರು ಕೊಡೋ ಶಿಕ್ಷೆಯ ನಾವಂತೂ ಒಪ್ಪಕುಲ್ಲ, ಏನಿದ್ರು ದೇವ್ರುರು ಶಿಕ್ಷೆ ಕೊಡಬೇಕು" ಎಂದು ಹೊಸ ಲೋಕದ ಕಾನೂನಿನ ವ್ಯವಸ್ಥೆಯೊಂದನ್ನು ಹೇಳಿ ಎದುರಿದ್ದ ಪತ್ರಕರ್ತರನ್ನು ದಂಗುಬಡಿಸಿದರಂತಲ್ಲಾ, ಥೂತ್ತೇರಿ!



* * * * * *

ಕುಮಾರಸ್ವಾಮಿ ಎಷ್ಟೇ ಪ್ರಯತ್ನಪಟ್ಟರೂ ನೂರೈವತ್ತು ಕೋಟಿ ಲಂಚದ ಹಣ, ಲಂಚ್ ಮಾಡುವ ಸಮಯದಿಂದ ಹಿಡಿದು ಮಂಚಕ್ಕೆ ಹೋಗುವವರೆಗೆ ಕಾಡತೊಡಗಿತಂತಲ್ಲಾ. ಮಂಕಾದ ಗಂಡನ ಮುಖ ನೋಡಲಾರದ ಅನಿತ "ಸತ್ಯನಾರಾಯಣ ಪೂಜೆ ಮಾಡಿಸಿದರೆ ಹೇಗೆ?" ಎಂದಳಂತಲ್ಲಾ. "ಸತ್ಯನಾರಾಯಣನ ಪೂಜೆಗಿಂತ ರಾಮಚಂದ್ರಾಪುರದ ಮಠದ ರಾಘವೇಶ್ವರನ ಹತ್ತಿರ ಹೋದರೆ ಹೇಗೆ?" ಎಂದು ಕುಮಾರಣ್ಣ ಮರುಪ್ರಶ್ನೆ ಹಾಕಿದರಂತಲ್ಲಾ. ಇದು ತೀರ್ಥಹಳ್ಳಿ ಕಡೆಯ ಮಣಿ ಎಂಬ ಕುಳ್ಳನಿಗೆ ಗೊತ್ತಾಗಿ "ಸಾರ್, ಎಲ್ಲಿಗೂ ಹೋಗೋದು ಬೇಡಿ. ನಮ್ಮ ತೀರ್ಥಹಳ್ಳಿ ಹತ್ತಿರ ಹಾದಿಗಲ್ಲು ಅಂತ ಇದೆ. ಅಲ್ಲಿನ ಅಭಯ ಲಕ್ಷ್ಮಿನರಸಿಂಹ ದೇವಾಲಯಕ್ಕೋಗಿ. ಸಪ್ತಶತಿ, ಶತಚಂಡಿಕಾ ಯಾಗ ಮಾಡಿಸಿ ಪೂರ್ಣಾಹುತಿ ಸಲ್ಲಿಸಿದರೆ ಅಕ್ರಮ ಹಣ, ಅಕ್ರಮ ಕಟ್ಟಡ, ಅಕ್ರಮ ನೊಂದಣಿ ಜೊತೆಗೆ ನೂರೈವತ್ತು ಕೋಟಿ ಹಣದಿಂದಲೂ ಪಾರಾಗಬಹುದು" ಎಂದು ಕಿವಿಯಲ್ಲಿ ಜೋರಾಗಿ ಹೇಳಿದನಂತಲ್ಲಾ. ಕೂಡಲೇ ಕುಮಾರಣ್ಣ "ಹಾಗಾದರೆ ಹೆಲಿಕಾಪ್ಟರ್ ರೆಡಿ ಮಾಡು" ಎಂದರಂತಲ್ಲಾ. ಆಗ ಸರ್ಕಾರದ ಮುಖ್ಯ ಕಾರ್ಯದರ್ಶಿ ಬಂದು, "ಸಾರ್, ಬೆಳಗಾವಿ ಪ್ರವಾಹದ ವಿಷಯ ಮಾತನಾಡಬೇಕು" ಎನ್ನಲಾಗಿ, "ರೀ ಪ್ರವಾಹ ತಡಿಯಕ್ಕಾದತೇನ್ರಿ? ಸ್ವಲ್ಪ ಹಾದಿಗಲ್ಲಿಗೋಗಿ ಬತ್ತಿನಿರಿ. ಪ್ರವಾಹನೆ ಬರದಂಗೆ ಏನಾರ ಪ್ಲಾನ್ ಮಾಡನ" ಎಂದು ಹೆಲಿಕಾಪ್ಟರ್ ಕಡೆಗೆ ಓಡಿದರಂತಲ್ಲಾ, ಥೂತ್ತೇರಿ!!



* * * * * *

ಕರ್ನಾಟಕ ರಾಜಕಾರಣವೇ ರಾಡಿ ಎದ್ದಿರುವ ಈ ಸಮಯದಲ್ಲಿ ದೇವೇಗೌಡರನ್ನು ಮಾತನಾಡಿಸುವುದು ನಮ್ಮ ಧರ್ಮ ಅನ್ನಿಸಿತು. ಫೋನ್ ಮಾಡಿದಾಗ ಬಹಳವೊತ್ತು ರಿಂಗಾಯ್ತು. ಫೋನ್ ಒಳಗಿಂದ ಬಹಳ ಸುಸಂಸ್ಕೃತ ಸೋಗಿನ ದನಿಯೊಂದು ಕೇಳಿಸಿದಂತಾಯ್ತು!

"ಹಲೋ ನಮಸ್ಕಾರ ಸಾರ್, ಗೌಡ್ರು ಬೇಕಿತ್ತಾ?" ಎಂದಿತು.

"ಹೌದು ಸಾರ್, ಒಂದೆರಡು ಮಾತಾಡಬೇಕಿದೆ. ನಾನು ಯಾಹೂ."

"ಯಾಹೂ ಅವರೆ, ನಾನು ದತ್ತ, ಗೌಡ್ರಿಗೆ ನೋವಾಗೋ ತರ ಏನನ್ನೂ ಕೇಳಬೇಡಿ."

"ಖಂಡಿತ ಇಲ್ಲ ಸಾರ್. ನಾನೆಂದೂ ಅವ್ರುರ ಮನಸು ನೋಯೋತರ ಪ್ರಶ್ನೆ ಕೇಳಿಲ್ಲ."

"ಹಾಗಂತ ನೀವಂದು ಕೊಂಡಿದ್ದೀರಿ. ಆದ್ರು ತಮಾಷೆ ಲೇವಡಿ ಮಾಡಿರತಿರಿ. ಅಂಗೆಲ್ಲಾ ಮಾಡಬೇಡಿ, ತಗೊಳಿ" ಎಂದು ಫೋನ್ ಕೊಡುತ್ತಲೇ ದತ್ತ "ಗೌರಿ ಲಂಕೇಶ್ ಪತ್ರಿಕೆಯ ಯಾಹೂ ಸಾರ್, ಏನೊ ಒಂದೆರಡು ಮಾತಾಡ್ತರಂತೆ" ಎಂದದ್ದೂ ಕೇಳಿಸಿತು.

"ಹಲೋ, ನಮಸ್ಕಾರ ಯಾಹೂ ಅವರೆ."

"ನಮಸ್ಕಾರ, ಚೆನ್ನಾಗಿದ್ದೀರ ಸಾರ್?"

"ಏನು ಚೆನ್ನಾಗಿರೋದು? ಇದನ್ನೆಲ್ಲಾ ಕಣ್ಣಿಂದ ನೋಡಬೇಕಾಗಿದೆಯಲ್ಲಾ, ಹೇಳಿ."

"ಅಂತದ್ದೇನೂ ಆಗಿಲವಲ್ಲ ಸಾರ್. ಯಲ್ಲಾ ನಿಮ್ಮ ಅಪೇಕ್ಷೆ ತರನೇ ನಡೆದಿದೆ. ಆದ್ರೆ ಆ ಶಿವಕುಮಾರ ಒಂದಿಷ್ಟು ಕಿರಿಕ್ ಮಾಡ್ತ ಅವ್ರುನೆ ಅಷ್ಟೆ."

"ಆತನ ವಿಷಯ ನಾನು ಚರ್ಚೆ ಮಾಡಕ್ಕೋಗೋದಿಲ್ಲ, ಆತನಷ್ಟೇ ಅಲ್ಲ ಯಾರಿಗೂ ನಾನೀ ಸಂದರ್ಭದಲ್ಲಿ ಉತ್ತರ ಕೊಡಲ್ಲ."

"ಉತ್ತರ ಕೊಡಲಿಲ್ಲ ಅಂದ್ರೆ, ಅವರ ಹೇಳಿಕೆನೆ ನಿಜಾ ಆಯ್ತದಲ್ಲ ಸಾ?"

"ನಮ್ಮ ಕರ್ನಾಟಕದ ಜನ ಇಂತವರ ಮಾತನ್ನ ನಂಬೋವಷ್ಟು ದಡ್ಡರಲ್ಲ, ನಾನು ರಾಜಕಾರಣಕ್ಕೆ ಬಂದ ಆರಂಭದಿಂದಲೂ ಇಂತಹ ಆಪಾದನೆಗಳನ್ನು ಕೇಳಿದ್ದೀನಿ. ನಾನು ಉತ್ತರ ಕೊಡೋದಿಕ್ಕೆ ಬದ್ಲು ಜನತೆಗೆ ಉತ್ತರ ಕೊಟ್ಟದೆ."

"ಈಗ ರೆಡ್ಡಿ, ಶಿವಕುಮಾರನ ಆಪಾದನೆಗೂ ಜನತೆ ಉತ್ತರ ಕೊಡುತ್ತ ಸಾರ್?"

"ಹತ್ತೊಂಬತ್ತುನೂರ ಎಂಬತ್ತೈದನೇ ಇಸವಿ, ಅಕ್ಟೋಬರ್ ತಿಂಗಳಲ್ಲಿ, ಯಾವ ಜನತಾದಳದ ಸರ್ಕಾರದಲ್ಲಿ ನಾನು ಲೋಕೋಪಯೋಗಿ ಸಚಿವನಾಗಿದ್ದಂತಹ ಕಾಲದಲ್ಲಿ, ನಾನು ನನ್ನ ನಾದಿನಿಗೆ ಸೈಟು ಕೊಟ್ಟೆನಿ ಎಂಬತಕ್ಕಂತಹ ಆಪಾದನೆಯನ್ನು ಸದನದಲ್ಲೇ ಮಾಡಿದ್ರೊ, ಅದೇ ತರಹ ಈಗ ನನ್ನ ಕುಟುಂಬದ ವಿರುದ್ಧವೂ ಸದನದಲ್ಲೇ ಆಪಾದನೆ ಮಾಡಿದಾರೆ. ನನ್ನ ಮೇಲಿನ ಆಪಾದನೆಗೂ ಜನತೆ ಉತ್ತರ ಕೊಟ್ಟರು, ಈಗಲೂ ಜನತೆನೆ ಉತ್ತರ ಕೊಡುತ್ತೆ."

"ಈ ಹಗರಣದಲ್ಲಿ ನಿಮ್ಮ ಕುಟುಂಬದ ಹೆಣ್ಣುಮಕ್ಕಳನ್ನೂ ಎಳೆದವರಲ್ಲಾ ಸಾರ್?"

"ನನ್ನ ಕುಟುಂಬದ ಗಂಡು ಸಂತಾನದ ಬಗ್ಗೆ ಆಪಾದನೆ ಮಾಡಿ ಏನನ್ನು ಸಾಧಿಸೋದಕ್ಕೆ ಆಗಲ್ಲ ಅನ್ನೋ ಹತಾಶೆ ಮನೋಭಾವನೆಯ ಕೆಲವು ವ್ಯಕ್ತಿಗಳು ಮಾಡಿರತಕ್ಕಂತಹ ಇಂತಹ ಕ್ಷುಲ್ಲಕ ಆಪಾದನೆಗಳನ್ನು ಎದುರಿಸತಕ್ಕಂತಹ ಶಕ್ತಿಯನ್ನು ನನ್ನ ಮನೆಯ ಹೆಣ್ಣುಮಕ್ಕಳಾಗಲೇ ಗಳಿಸಿಕೊಂಡು ಬಹಳ ದಿನಗಳಾಗಿವೆ."

"ಹೌದು ಸಾರ್, ಇವತ್ತು ಹೆಣ್ಣು ಮಕ್ಕಳನ್ನು ಗಂಡು ಮಕ್ಕಳ ತರನೇ ಬೆಳೆಸಬೇಕು. ಯಾರು ಏನಂದ್ರೂ ಅವರು ಕೇರ್ ಮಾಡಬಾರ್ದು, ಅಂಗಿರಬೇಕು. ಅದ್ಕೆ ನೋಡಿ ಇವತ್ತು ನಿಮ್ಮ ಕುಟುಂಬದ ಎಲ್ಲಾ ಹೆಂಗಸರೂ ಸರ್ಕಾರದ ಹೊರೆ ಹೊತ್ತು ನಿಂತವರೆ. ಅದರಲ್ಲೆಲ್ಲಾ ಚೆನ್ನಮ್ಮಾರೆ ಎಲ್ಲೂ ಕಾಣ್ತಾಯಿಲ್ಲ ಸಾರ್."

"ಅದೇ ನನಗೊಂದು ಸಣ್ಣ ಕೊರಗು. ಅದ್ಯಾವ ಕೆಟ್ಟ ಗಳಿಗೆಲಿ ಆಕೆ ನಮ್ಮ ಊರಿಗೋದ್ಲೋ ಏನೊ. ಆ ನನ್ನ ತಮ್ಮನ ಹುಡುಗ ಆಕೆ ಮೇಲೆ ಬೆಂದು ಹೋಗ ತಕ್ಕಂತಹ ಪದಾರ್ಥವನ್ನು ಎರಚಿಬಿಟ್ಟ. ಆ ದಿನದಿಂದ ಆಕೆ ಮಾನಸಿಕವಾಗಿ ಬಹಳ ಕುಗ್ಗಿ ಹೋದಳು. ನಮ್ಮ ಅದೃಷ್ಟಕ್ಕೆ ಒಳ್ಳೆ ಡಾಕ್ಟರು ಸಿಕ್ಕಿ ಬಹಳ ಚೆನ್ನಾಗಿ ಉಷಾರು ಮಾಡಿದಾನೆ. ಆದ್ರು ಆಕೆ ಮೊದಲಿನ ತರಹ ಸಾರ್ವಜನಿಕವಾಗಿ ಸಭೆ ಸಮಾರಂಭದಲ್ಲಿ ಕಾಣಲ್ಲ. ಆ ಕಾರಣಕ್ಕೆ ನಮ್ಮ ಶೈಲಜ, ಅನಿತ, ಭವಾನಿ, ಅನುಸೂಯ ಹಣಕಾಸಿನ ವ್ಯವಹಾರಕ್ಕೆ ಕಾಲಿಡಬೇಕಾಯ್ತು."

"ನಿಮ್ಮ ಕುಟುಂಬ ಈಗ ಮಾಡ್ತಾಯಿರೊ ಭಾರಿ ದೊಡ್ಡ ಗಣಿ ವ್ಯವಹಾರಕ್ಕೆ ಬಿ.ಎಸ್.ಕೆ. ಅಂತ ಹೆಸರಿಡೊದರ ಬದ್ಲು ಚೆನ್ನಾಂಬಿಕಾ ಗಣಿಗಾರಿಕೆ ಅಂತ ಇಡಬಹುದಿತ್ತಲ್ಲ ಸಾರ್?"

"ಆ ಹೆಸರಲ್ಲಿ ಈಗಾಗ್ಲೆ ಚಿತ್ರ ನಿರ್ಮಾಣ ವಿತರಣೆ ಸಂಸ್ಥೆ ಇದೆಯಲ್ಲಾ, ಅದಕ್ಕೆ ಆ ಹೆಸರಿಡಲಿಲ್ಲ."

"ಈ ಗಣಿಗಾರಿಕೆ, ಚಿತ್ರಸಂಸ್ಥೆ, ಅಪಾರ್ಟ್‌ಮೆಂಟ್, ಅದರ ಹಣದ ವಹಿವಾಟನ್ನೆಲ್ಲಾ ನೋಡಿದ್ರೆ ಸೊಪ್ಪು ಸಾರು, ಮುದ್ದೆ ಜನಕ್ಕೆ ಇಷ್ಟೊಂದು ದುಡ್ಡಿನ ಅಗತ್ಯ ಇದಿಯಾ ಅಂತ ನನಿಗೊಂದು ಅನುಮಾನ ಕಾಡ್ತಾ ಇದೆ ಸಾರ್."

"ನನ್ನ ಕಾಲದ ರಾಜಕಾರಣಕ್ಕೆ ಹಣದ ಅಗತ್ಯ ಇರಲಿಲ್ಲ. ಬರೀ ಸಭೆ, ಸಮಾರಂಭ, ಭಾಷಣ ಸಾಕಾಗಿತ್ತು. ಆದ್ರೆ ಈಗಿನ ರಾಜಕಾರಣ ಬದಲಾಗಿದೆ. ಬದಲಾದ ಕಾಲಕ್ಕೆ ತಕ್ಕಂತೆ ರಾಜಕಾರಣ ಮಾಡಬೇಕಾಗಿದೆ. ದೇವೇಗೌಡನ ಮಕ್ಕಳು ಯಾರನ್ನೂ ಕೊಳ್ಳೆ ಹೊಡೆದಿಲ್ಲ, ದರೋಡೆ ಮಾಡಿಲ್ಲ, ನ್ಯಾಯಬದ್ಧವಾಗಿ ಗಣಿಗಾರಿಕೆ ಮಾಡಿದಾರೆ. ಸರ್ಕಾರಕ್ಕೆ ಶುಲ್ಕ ಕೊಟ್ಟಿದ್ದಾರೆ. ಎಲ್ಲವೂ ನಿಯಮ ಬದ್ಧವಾಗಿಯೇ ನಡಕೊಂಡು ಹೋಗ್ತಾಯಿದೆ. ಅವರೇ ನಾದ್ರೂ ಯಾರದ್ದಾದರೂ ರೈತನ ಜಮೀನನ್ನು ಬಗೆದು ಗಣಿ ಸಾಗಿಸಿದ್ರೆ ಅಥವಾ ಅಕ್ರಮವಾಗಿ ಗಣಿ ದಂಧೆ ಮಾಡಿದ್ರೆ ನಾನು ಆ ಕೂಡಲೇ ಕತ್ತು ಕುಯ್ದುಕೊಳ್ಳತ್ತಕ್ಕಂತಹ ತೀರ್ಮಾನ ತಗೊಳ್ತೀನಿ. ಇದನ್ನ ಹಿಂದೂ ಹೇಳಿದಿನಿ, ಈಗ್ಲೂ ಹೇಳ್ತಿನಿ."

"ಬೇಡಿ ಸಾರ್, ಈ ಹಾಳು ಕಬ್ಬಿಣದ ಅದಿರಿಗಾಗಿ ಚಿನ್ನದಂತ ಕತ್ತು ಕುಯ್ಕೋಬೇಡಿ. ನೀವಂಗಂದ್ರೆ ನನಗೆ ರಕ್ತಸಿಕ್ತ ಭಯವಾಗುತ್ತೆ."

"ನಮ್ಮ ತಾಳ್ಮೆಗೂ ಒಂದು ಮಿತಿ ಇದೆ ಅಲ್ಲವೆ?"

"ಖಂಡಿತ ಇದೆ ಸಾರ್. ನಿಮ್ಮ ತಾಳ್ಮೆಯ ಮಿತಿನೆ ಅಸಾಧಾರಣವಾದದ್ದು, ಇಲ್ಲ ಅಂದಿದ್ರೆ ನಿಮ್ಮ ಕತ್ತು ನಿಮ್ಮೆದುರಿನ ಟೇಬಲ್ ಮೇಲಕ್ಕೆ ಬಂದು ಕನಿಷ್ಠ ಐದು ತಿಂಗಳಾದರೂ ಆಗ್ತಿತ್ತು!!"

"ಕತ್ತು ಕುಯ್ದುಕೊಳ್ಳೋದು ದೊಡ್ಡ ವಿಷಯ ಅಲ್ಲ, ಐದು ನಿಮಿಷಕ್ಕೆ ಕುಯ್ದು ಮಡಗಬಹುದು. ಆದ್ರೆ ಅದರಿಂದ ಆಗೋ ಪ್ರಯೋಜನ ಏನೂ? ಸತ್ಯ ಸಂಗತಿ ಗೊತ್ತಾದ ನಂತರ ಪುನಃ ಜೋಡಿಸೋದಕ್ಕೆ ಬರುತ್ತಾ? ನಾನು ನನಗೇ ಕೊಟ್ಟುಕೊಳ್ಳುವ ಒಂದು ರೀತಿಯ ಮಾನಸಿಕ ಶಿಕ್ಷೆಯನ್ನು ಸಾಂಕೇತಿಕವಾಗಿ ಹೇಳ್ತಿನಿ ಅಷ್ಟೆ. ಅದನ್ನೇ ನೀವು ನಿಜ ಅಂದುಕೊಂಡು ಬರೆಯೋ ಅಗತ್ಯ ಇಲ್ಲ."

"ಸಾರಿ ಸಾರ್, ನಾವು ತಪ್ಪು ತಿಳಕೊಂಡು ಸದ್ಯದಲ್ಲೇ ಒಂದು ರುಂಡ ಹಾರುತ್ತೆ ಅಂತ ಹೆದಿರಿದ್ದೋ."

"ಈಗ ಕೆಲವರು ಸತ್ಯ ಸಾಬೀತಾದರೆ ರಾಜಕೀಯದಿಂದಲೇ ನಿವೃತ್ತಿಯಾಗ್ತೀನಿ ಅಂತರೆ, ಯಾರಾದ್ರು ಆಗಿದ್ದಾರ?"

"ಇಲ್ಲ ಸಾರ್, ಯಾರೂ ಆಗಿಲ್ಲ."

"ಮತ್ತೆ ಪ್ರಕರಣದ ತೀವ್ರತೆ ಸಂದರ್ಭದಲ್ಲಿ ನಾವು ಏನಾದ್ರು ಹೇಳಬೇಕಾಗುತ್ತೆ ಹೇಳ್ತಿವಿ."

"ಈಗ ಏನೇಳ್ತೀರಿ ಸಾರ್?"

"ಮಾಡು ಇಲ್ಲವೆ ಮಡಿ."

"ಇದ್ಯಾವ ಅರ್ಥ ಹೇಳುತ್ತೆ ಸಾರ್?"

"ಮಾಡು, ಮಾಡಿಕೊಂಡಿರೋದನ್ನ ದಕ್ಕಿಸಿಕೊ, ಬಿಡಬೇಡ, ಮಡಿಯೋದು ನಮಗೆ ಸೇರಿದ್ದಲ್ಲ, ಅದು ಜನರ ಕೈಲಿದೆ."

"ಅಂದ್ರೆ ಚುನಾವಣೆನ ಸಾರ್?"

"ಹೌದು ಮತ್ತೆ?"


"ಥೂತ್ತೇರಿ!!!"

-ಯಾಹೂ

ಚೆಲುವರಾಯಸ್ವಾಮಿ ಕೋ-ಜಾ ಸರ್ಕಾರದಲ್ಲಿ ಸಾರಿಗೆ ಇಲಾಖೆಯಂತಹ ಪ್ರಮುಖವಾದ ಖಾತೆ ಪಡೆದದ್ದೆ ಆಯಿತು. ನಾಗಮಂಗಲ ಕಡೆ ತಲೆಹಾಕುವುದನ್ನೇ ಮರೆತಿದ್ದಾರೆ. ತನ್ನದೇ ಕ್ಷೇತ್ರದಲ್ಲಿ ತನ್ನ ಪಕ್ಷದ ಕಾರ್ಯಕರ್ತರ ಕುಟುಂಬಗಳಿಗೆ ಊರಿನವರು ಸಾಮಾಜಿಕ ಬಹಿಷ್ಕಾರ ಹಾಕಿದರೂ, ಬಹಿಷ್ಕೃತ ಕುಟುಂಬದವರ ಸಮಸ್ಯೆ ಕೇಳಲು ಪುರುಸೊತ್ತಿಲ್ಲ, ಆದ್ದರಿಂದಲೇ ಈತನಿಗೆ ಓಟು ಹಾಕಿದ ನಾಗಮಂಗಲ ತಾಲ್ಲೂಕಿನ ತಿಗಳೇನಹಳ್ಳಿಯ ಜನ ಮಂತ್ರಿ ಚಲುವರಾಯನಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ನಾಗಮಂಗಲ ತಾಲ್ಲೂಕು ತಿಗಳೇನಹಳ್ಳಿಯ ಕೃಷ್ಣೇಗೌಡ ಎಂಬ ಕಾಂಗ್ರೆಸಿನ ಮರಿ ಪುಢಾರಿಗೂ, ಅದೇ ಗ್ರಾಮದ ಮಂಜು, ರವಿ, ಕುಮಾರರ ಕುಟುಂಬದವರಿಗೂ ಹಲವು ವರ್ಷಗಳಿಂದ ಜಮೀನಿನ ಸಂಬಂಧ ನ್ಯಾಯಾಲಯದಲ್ಲಿ ವ್ಯಾಜ್ಯವಿತ್ತು.

ನ್ಯಾಯಾಲಯದ ಆದೇಶ ತಮ್ಮ ಪರವಾಗಿದ್ದರೂ, ಮೇಲಿನ ನ್ಯಾಯಾಲಯದಿಂದ ತಡೆಯಾಜ್ಞೆ ತಂದು, ತಮ್ಮ ಕುಟುಂಬದ ಜಮೀನಿನಲ್ಲಿ ವ್ಯವಸಾಯ ಮಾಡಲು ತೊಂದರೆ ನೀಡುತ್ತಿದ್ದ ಕೃಷ್ಣೇಗೌಡನ ಮೇಲೆ ಈಗ ಜೈಲಿನಲ್ಲಿರುವ ಮಂಜು ಮತ್ತಾತನ ಸ್ನೇಹಿತರಿಗೆ ಮೊದಲಿನಿಂದಲೂ ಜಿದ್ದಿತ್ತು.



ಸಾರಿಗೆ ಮಂತ್ರಿಯ ಕ್ಷೇತ್ರದಲ್ಲಿ ಸಾಮಾಜಿಕ ಬಹಿಷ್ಕಾರ

ಹಾಗಾಗಿ ಈ ಮೂವರು ಸೇರಿ 2005ರ ಸೆಪ್ಟೆಂಬರ್ ತಿಂಗಳಿನಲ್ಲಿ ಬೆಳ್ಳೂರಿನಿಂದ ತಿಗಳೇನಹಳ್ಳಿಗೆ ಬರುವ ರಸ್ತೆಯಲ್ಲಿ ಅನಾಯಾಸವಾಗಿ ಒಂಟಿಯಾಗಿ ಸಿಕ್ಕಿದ ಕೃಷ್ಣೇಗೌಡನನ್ನು ಕತ್ತರಿಸಿ ಹಾಕಿ, ಪೊಲೀಸರಿಗೆ ಶರಣಾಗಿ ಜೈಲಿಗೆ ಹೋದರು.

ಕೊಲೆ ಮಾಡಿದ ಆರೋಪಿಗಳು ಜೈಲಿಗೋದರೂ, ಊರಿನಲ್ಲಿ ಬಹುಸಂಖ್ಯಾತರಾಗಿದ್ದ ಕಾಂಗ್ರೆಸ್ಸಿನವರು ಆರೋಪಿಗಳ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಜೊತೆಗೆ ಈ ಕುಟುಂಬದವರ ಜಮೀನಿನಲ್ಲಿರುವ ಮರ ಕಡಿಯುವುದು, ತೆಂಗಿನಕಾಯಿ ಕೀಳುವುದು, ಬೆಳೆ ಲೂಟಿ ಮಾಡುವುದು ಸೇರಿದಂತೆ ಇನ್ನಿಲ್ಲದ ಕಿರುಕುಳ ಆರಂಭಿಸಿದ್ದಾರೆ.

ಗ್ರಾಮದಲ್ಲಿ ತಮಗೆ ಹಾಕಿರುವ ಬಹಿಷ್ಕಾರದ ಬಗ್ಗೆ ಮೂರು ಕುಟುಂಬದವರು ಬೆಳ್ಳೂರು ಪೊಲೀಸರಿಗೂ ದೂರು ನೀಡಿದ್ದಾರೆ. ಪಾಪ! ಬೆಳ್ಳೂರಿನ ಪೊಲೀಸರೇ ಪರಸ್ಪರ ಗುಂಪು ಕಟ್ಟಿಕೊಂಡು ಕಚ್ಚಾಡುತ್ತಿರುವುದನ್ನೇ ಬಗೆಹರಿಸಲಾಗದ ಅಲ್ಲಿನ ಎಸ್ಸೈ ರಾಜು ಅವರಿಗೆ, ಬಹಿಷ್ಕಾರಕ್ಕೊಳಗಾದ, ಆಸ್ತಿ-ಪಾಸ್ತಿ, ಬೆಳೆನಷ್ಟ ಅನುಭವಿಸಿದ ತಿಗಳೇನಹಳ್ಳಿಯ ಬಡ ಕುಟುಂಬದವರ ದೂರನ್ನು ಕೇಳಲು ಪುರಸೊತ್ತಾದರೂ ಎಲ್ಲಿದೆ?

ತಿಗಳೇನಹಳ್ಳಿಯ ಸಾಮಾಜಿಕ ಬಹಿಷ್ಕಾರ ಈ ಮೂರು ಕುಟುಂಬಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಕುಟುಂಬದ ಸದಸ್ಯರ ಜೊತೆ ಮಾತನಾಡಿದ, ಆರೋಪಿಗಳ ಕುಟುಂಬದ ಮಕ್ಕಳನ್ನು ಸ್ಕೂಟರ್‌ನಲ್ಲಿ ಶಾಲೆಗೆ ಡ್ರಾಪ್ ಮಾಡಿದ ಕಾರಣಕ್ಕೆ ಗ್ರಾಮದ ಬಸವರಾಜು, ಅಮ್ಮಯಮ್ಮ, ಕಾಂತರಾಜು, ರವಿ, ದಯಾಕರ, ರಾಜು, ಜಯಮ್ಮ, ನಿಂಗಮ್ಮ, ರಂಗಸ್ವಾಮಿಯವರ ಕುಟುಂಬಗಳಿಗೂ ಬಹಿಷ್ಕಾರ ಹಾಕಲಾಗಿದೆ. ಜೊತೆಗೆ ದಂಡವನ್ನು ವಿಧಿಸಲಾಗಿದೆ.

ಹಳ್ಳಿಗಳಲ್ಲಿ ಸಾಮಾಜಿಕ ಬಹಿಷ್ಕಾರ ಹಾಕುವುದಕ್ಕೆ ಸಂವಿಧಾನದಲ್ಲಿಯೇ ನಿರ್ಬಂಧವಿರುವಾಗ, ಕಳೆದ ಒಂದು ವರ್ಷದಿಂದಲೂ ತಿಗಳೇನಹಳ್ಳಿಯಲ್ಲಿ ಸಾಮಾಜಿಕ ಬಹಿಷ್ಕಾರಕ್ಕೊಳಗಾದ ಕುಟುಂಬದವರ ರಕ್ಷಣೆಗೆ ಮಂಡ್ಯದ ಜಿಲ್ಲಾಡಳಿತ, ಅಲ್ಲಿನ ಉಸ್ತುವಾರಿ ಮಂತ್ರಿ ಚಲುವರಾಯಸ್ವಾಮಿ ಬಾರದಿರುವುದು ನಾಚಿಕೆಗೇಡು.

ಈಗಲಾದರೂ ಸಾರಿಗೆ ಮಂತ್ರಿ ಚಲುವರಾಯಸ್ವಾಮಿ ಎಚ್ಚೆತ್ತು ಸಾಮಾಜಿಕ ಬಹಿಷ್ಕಾರ ಹಾಕಿದವರ ಮೇಲೆ ಕಾನೂನಿನ ಕ್ರಮ ಕೈಗೊಂಡು, ನೊಂದ ಕುಟುಂಬದವರಿಗೆ ಸಾಂತ್ವನ ಹೇಳದಿದ್ದರೆ, ನಾಗಮಂಗಲದ ಜನ ಮುಂದಿನ ಚುನಾವಣೆಯಲ್ಲಿ ಈತನಿಗೆ ತಿರುಪತಿ ನಾಮ ತಿಕ್ಕುವುದಂತೂ ಗ್ಯಾರಂಟಿ.

-ವರದಿಗಾರ

ದಡ್ಡರು ದೂರದಲ್ಲಿ ಸುಖ ಹುಡುಕಿದರೆ, ಬುದ್ಧಿವಂತರ ಕಾಲಕೆಳಗೇ ಸುಖವಿರುತ್ತದೆ. -ಜೇಮ್ಸ್ ಜಾನ್ಸನ್ ಹೋ

ದ್ಯಾವೇಗೌಡ್ನಿಗೆ ವಳ್ಳೆ ಮಕ್ಕಳು ಹುಟ್ಟಿಲ್ಲ ಬುಡ್ಡಾ

ಬಯಲು ಸೀಮೆಯ ಕಟ್ಟೆ ಪುರಾಣ

ಎಲ್ಲಾ ಕಡೆಯೂ ಮಳೆಯಾಗಿ ತಮ್ಮ ಏರಿಯಾದಲ್ಲಿ ಮಾತ್ರ ಮಳೆಯಾಗದ ಬಗ್ಗೆ ತೀರಾ ತಲೆ ಕೆಡಿಸಿಕೊಂಡ ಸೀರ.

"ಆ ಬೆಳಗಾಂ ಕಡೆ ಊರು ಮ್ಯಾಲೆ ನೀರು ಬರಂಗೆ ಮಳೆ ಹ್ವಡದದಂತೆ. ಆ ಮಳೆ ನಮ್ಮ ಕಡಿಕಾರ ಊದಿದ್ರೆ ಈಟೊತ್ತಿಗೆ ಯಲ್ಲಾ ಕ್ಯಲಸನೂ ಮುಗಿಸಿ ಆರಾಮಾಗಿರಬವ್ಪುದಿತ್ತು" ಎಂದ.

"ಅಂಗರೆ ಊರು ಮ್ಯಾಲೆ ನೀರು ಬಂದಿದ್ವತೆ ಅಲ್ಲಿ?" ಎಂದಳು ಜುಮ್ಮಿ.

"ಊ ಕಣೆ ಮುವ್ವತ್ತು ನಲವತ್ತೂರು ಮ್ಯಾಲಾಸಿ ದಡಕಟಗಂಡು ಹರಿತಾಯಿದ್ವತಂತೆ" ಎಂದ ಉಗ್ರಿ.

"ಅಂಗರೆ ಜನ ದನಿನ ಗತಿಯೇನ್ನ?" ಎಂದ ಕಾಳಮಾವ.

"ಗತಿಯೇನು? ಯಲ್ಲಾ ದಿಬ್ಬದ ಮ್ಯಾಲೆ ಕುಂತವು ರಂತೆ."

"ಅಂಗೆ ಕುಂತಿದ್ರೆ ವಟ್ಟಿಗೇನು ಮಾಡ್ಯರೂ?"

"ಏನು ಮಾಡ್ಯರಪ್ಪ, ಏನೊ ಇದು ನಮ್ಮಣೆಬರ ಅನುಭವುಸನ ಅಂತ ಕುಂತಿರತರೆ ಕಣ ಮಾವ."

"ಅವುರು ವಾದ್ನೆ ವರುಸ ಅಂಗೇ ಸಿಗಾಯ್ಕಂಡಿದ್ರು ಕಂಡ್ಯ. ಈ ಸತಿಲೂ ಅಂಗಾಗಬವ್ಪುದು ಅಂತ ಸರ್ಕಾರ ಯೇಚನೆ ಮಾಡಿ ಏನಾರ ಮಾಡಬೇಕಾಗಿತ್ತು" ಎಂದ ಸೀರ.

"ಸರ್ಕಾರ ಯೇಚನೆ ಮಾಡಕ್ಕೆ ಅದರದೆ ಹಳಿಸಿಗಂಡದಲ್ಲ ಹೇಳು. ಅದರ ಕತೆ ಯಂಗಾಗ್ಯದೆ ಅಂದ್ರೆ, ತನ್ನ ತಿಗ ತ್ವಳಿಯಕ್ಕೆ ಕೈ ಯಟಗದಿಲ್ಲ ಇನ್ನ ನಡುನೀರಲ್ಲಿ ನಿಂತಿರೋರಿಗೆ ಕೈ ಚಾಚ್ಯನೆ ಅನ್ನಂಗಾಗ್ಯದೆ!"

"ಅದೇನು ಸರಿಯಾಗೇಳ್ಯ?" ಎಂದಳು ಜುಮ್ಮಿ.

"ಆ ಕುಮಾರಸ್ವಾಮಿ ಗ್ವಣ್ಣಿಗೆ ಸಿಗಾಯ್ಕಂಡ ನ್ವಣಾಗ್ಯವುನೆ ಕಣೆ. ಈ ಕಾಲಾದಮ್ಯಾಲೆ ಆಕಾಲು, ಆಕಾಲದ ಮ್ಯಾಲೆ ಈಕಾಲು ಸಿಕ್ಕಂತು ಅನ್ನಂಗೆ ಕಾರಿಡಾರು, ಗಣಿ, ಲಂಚ, ಬಿಲ್ಡಿಂಗ್ ಖರೀದಿ... ಬ್ಯಾಡ ಅವನ ಪಜೀತಿ."

"ಆಡಳತ ಮಾಡಿದ ಅನುಭವಿಲ್ಲ, ಪಾಪ ಅವುನು ತಾನೆ ಇನ್ನೇನು ಮಾಡ್ಯನೂ?" ಎಂದ ಕಾಳಮಾವ.

"ಅನುಭವಿಲ್ಲದೋನು ತರಿಯಕ್ಕೆ ಅಧಿಕಾರ ಮಾಡಬೇಕಾಗಿತ್ತೆ, ಅನುಭವಿರೋರಿಗೆ ಕೊಟ್ಟು ಯಲ್ಲಾನು ನೋಡಿಕಬೇಕಾಗಿತ್ತು" ಎಂದ ಸೀರ.

"ಅದೂ ನೀನು ವಲ ಊಳದ ನಿನ್ನ ಮಗ ನೋಡಿದಂಗೆ ಅನ್ನಕಂಡೇನೊ? ಇದಂಗಲ್ಲ ಕಣೊ, ದ್ಯಾವೇಗೌಡ ತನ್ನ ಕಣ್ಣೆದುರಿಗೆ ತನ್ನ ಮಕ್ಕಳು ಮರಿ ಸ್ವಸೇರ್ಯಲ್ಲ ಅಧಿಕಾರ ಮಾಡದ ನೋಡಬೇಕು ಅಂತ ಮಾಡಿರೊ ಹರಿಗೆಡಿಸಿ ಕ್ಯಲಸದಲ್ಲಿ ಕುಮಾರ ನೋಡಿ ಕಲಿಯಕ್ಕೆಲ್ಲಿ ಟೇಮಿದ್ದತೂ?"

"ದ್ಯಾವೇಗೌಡನ ಸ್ವಸೆರು ಹೆಣ್ಣುಮಕ್ಕಳ್ಯಲ್ಲ ದುಡ್ಡು ಮಾಡಿ ಕಂಡು ಓಟ್ಟು ಕೊಂಡಿದ್ದರಂತೆ ನಿಜವೇನ್ನ?"

"ನಿನಿಗ್ಯಾರೆ ಹೇಳಿದೋರು?"

"ಆ ಶಿವಕುಮಾರನ ಕಡೆ ಹುಡ್ರು ಅಂಗೆ ಮಾತಾಡತಿದ್ರೊ?"

"ಶಿವಕುಮಾರನ ಕಡೆ ಹುಡ್ರು ಇದ್ದರೇ?"

"ಊ ಕಂಡ್ಯ, ಹೋಗಿ ಅವುನತ್ರ ದುಡ್ಡೀಸಗಂಡು ಬಂದು ಅದೇನೇನೊ ಸಭೆ ಮಾಡ್ತವೆ."

"ನೋಡಿದ್ಯಂಗದೆ? ಆ ಕಾಂಗ್ರೆಸ್ನಲ್ಲಿ ಶಿವುಕುಮಾರನ ಕಾಟ, ದಳದಲ್ಲಿ ದ್ಯಾವೇಗೌಡನ ಮಕ್ಕಳ ಕಾಟ" ಎಂದ ಉಗ್ರಿ.

"ಮಕ್ಕಳಿನ್ಯಾರ್ಲ? ಕುಮಾರಸ್ವಾಮಿ ರೇವಣ್ಣನ ಬುಟ್ರೆ ಇನ್ಯಾರು ಕಾಟ ಕೊಟ್ಟರೂ?" ಎಂದ ಸೀರ.

"ಆಯ್ಯೋ ಇನ್ನಿಬ್ಬರ ಕಾಟ ನಿಮಿ ಗೊತ್ತಿಲ್ಲ ಕಣ್ರೊ. ಬಾಲಕಿಷ್ಣೇಗೌಡ, ರಮೇಶ್ ಅಂತ ಅವುರೆ. ಅವುರು ಮೇದ ಮೋಟು ಹೋದಜ್ಜೆ ಕಾಣದಂಗಿದ್ರು. ಈಗ ರೆಡ್ಡಾಂಡಲ್ಲಿ ಸಿಗಾಯ್ಕಂಡಿದ್ದರಂತೆ."

"ಅದೇನು ಮಾಡಿ ಸಿಗಾಯ್ಕಂಡಿದ್ದರೂ?"

"ಈ ಚೆನ್ನಿಗಪ್ಪ ಬಳ್ಳಾರಿಗೋಗಿ ಗಣಿ ತೋಡೋರನ್ಯಲ್ಲ ಹೆದರಿಸಿದ ನೋಡು. ಆ ಅದುರು ಮಾರೋರ್ಯಲ್ಲ ಹೆದರಿ ದ್ಯಾವೇಗೌಡನ ಮಕ್ಕಳಿಗೆ ಅಗ್ಗವಾಗಿ ಅದುರು ಮಾರಿ ಬುಟ್ರಂತೆ. ಈ ದ್ಯಾವೇಗೌಡನ ಮಕ್ಕಳು ಅದನ್ಯಲ್ಲ ಕೊಂಡಕಂಡು ಮಂಗಳೂರತ್ರ ಚುಂಚನಗಿರಿ ಬ್ಯಟ್ಟದಂಗೆ ಸುರದಿದ್ದರಂತೆ ಪಾರಿನ್ನಿಗೆ ಮಾರಕ್ಕೆ. ಅದು ಕೋಟ್ಯಾಂತ್ರುಪಾಯಿ ಬ್ಯಲೆ ಬಾಳ್ತದಂತೆ. ಅಂಗೆ ಸಿಗಾಯ್ಕಂಡು ಬದ್ದವುರೆ ನೋಡು."

"ಅಲ್ಲಾ ಕಂಡ್ಯ, ಆ ಗಣಿ ತೋಡೋರು ಕೊಟ್ಟ ನೂರ್ಯವತ್ತು ಕೋಟಿ ಮಡಿಕಂಡು ತ್ರುಪ್ತಾಗಿರದು ಬುಟ್ಟು ತಿರಗ ಯಾಕೋಗಿ ಅಂತ ಯವಾರಕೆ ಕೈ ಹಾಕಿದ್ರು?" ಎಂದ ಸೀರ.

"ದುರಾಸೆ."

"ದ್ಯಾವೇಗೌಡನಿಗೆ ವಳ್ಳೆ ಮಕ್ಕಳುಟ್ಟಲಿಲ್ಲ ಬುಡು" ಎಂದ ಕಾಳಮಾವ.

"ಅಂತು ನಮ್ಮ ದ್ವಡಪ್ಪನಿಗೆ ದ್ಯಾವೇಗೌಡೇನು ಅಂತ ಈಗ ರಿಯಲೈಜಾಯ್ತು" ಎಂದುಕೊಂಡು ವಾಟಿಸ್ಸೆ ಬಂದ.

"ಇಸಿಸಿ, ಮಕ್ಕಳು ಕ್ಯಟ್ಟವಾದ್ರೆ ದ್ಯಾವೇಗೌಡ ಏನು ಮಾಡಕ್ಯಾದತ್ಲ?"


"ಕ್ಯಟ್ಟ ಮಕ್ಕಳಾದ್ರೆ ಇನ್ನು ಕೆಟ್ಟೋಗೊ ಅಂತ ವ್ಯಾಪಾರ ಕಲುಸಬಾರ್ದುರ್ಗ ದ್ವಡಪ್ಪ, ಅವು ಇಂತವ್ರೂ ಅಂತ ಗೊತ್ತಿದ್ರೂ ಇಡೀ ಕರ್ನಾಟಕದ ಜವಾಬ್ದಾರಿಯ ಅವುರ ಮ್ಯಾಲೆ ಹೇರಿದಲ್ಲಾ, ಈಗ ಅನುಭವುಸು."

"ಅನುಭವುಸದೇನು. ಅವುರ ಮಾಡಿದ್ದ ಅವು ರುಣ್ಣತರೆ."

"ಇದಂಗಲ್ಲ ದ್ವಡಪ್ಪ, ಇವುರು ಮಾಡಿರದ ಇವುರ ಮೂರು ತಲೆ ತಿಂದ್ರು ಮುಗಿಯದಿಲ್ಲ, ಅಂಗೆ ಮಾಡಿ ಕಂಡ್ರು."

"ಮೂರು ತಲೆ ಅಲ್ಲ ಕಣೊ, ದ್ಯಾವೇಗೌಡನ ವಂಸ ಇರಗಂಟ ಪಾಲಿಟಿಕ್ಸ್ ಮಾಡಬವ್ಪುದು."

"ಆಟೊಂತರ ದುಡ್ಡು ಮಾಡಿದ್ದರೇನ್ನ?" ಎಂದು ಜುಮ್ಮಿ ಅಚ್ಚರಿಗೊಂಡಳು.



"ಊ ಕಣಕ್ಕ. ಸುಮ್ಮನೆ ಅಂಗೆ ಗ್ಯಾನ್ಸು ಮಾಡು. ನಿನಿಗೇ ಗೊತ್ತಾಯ್ತದೆ. ಇಡೀ ಎಜುಕೇಷನ್ ಡಿಪಾರ್ಟ್ಮೆಂಟನೇ ವರ್ಗಾ ಮಾಡಿದ್ರು. ಅದರ ಬಾಬತ್ತು ಎಷ್ಟು ಬತ್ತು? ಆನಂತರ ಇಡೀ ಪೋಲಿಸ್ ಇಲಾಖೆನೆ ಟ್ರಾನ್ಸ್ಫರ್ ಮಾಡಿದ್ರು, ಅದರ ಬಾಬತ್ತೂ ಲ್ಯಕ್ಕ ಹಾಕು. ಇಡೀ ಪಾರೆಸ್ಟಿಲಾಖೆ, ಸಾರಿಗೆ ಇಲಾಖೆ ಟ್ರಾನ್ಸ್ಫರ್ ಮಾಡಿದ್ರು. ಅದರ ಜ್ವತಿಗೆ ಗಣಿ ಮಾಲೀಕರು ಕೊಟ್ಟ ಅಮವ್ಪುಂಟ್... ಟೋಟ್ಲು ಮಾಡಿಕಳಕ್ಕ, ನಿನಿಗೇ ಗೊತ್ತಾಯ್ತದೆ."

"ತಲಿ ಕೆಟ್ಟೋಯ್ತು ಕಣೋಗ್ಲ, ನೀನೇಳದ ನೋಡಿದ್ರೆ ನಂಬಕ್ಯೇ ಆಯ್ತಾಯಿಲ್ಲ."

"ಸರಿ, ಆಟೋಂತರ ದುಡ್ಡು ತಗಂಡೇನು ಮಾಡ್ಯರೂ?"

"ಅಯ್ಯೋ ಅವುರ್ ಪ್ಲಾನ್ ಪ್ರಕಾರ ಇನ್ನೂ ಸಾಲ್ತಾಯಿಲ್ಲ ಕಣಕ್ಕ, ಕುಮಾರಣ್ಣನ ಅವಧಿ ಮುಗದ ಮ್ಯಾಲೆ ರೇವಣ್ಣನ್ನ ಮುಖ್ಯಮಂತ್ರಿ ಮಾಡಬೇಕು. ಅವುನ ಮಾಡಕ್ಕೆ ಅಂತ ಎಮ್ಮೆಲ್ಲೆಗಳ ಗೆಲ್ಸಿಕೊಂಡು ಬರ ಬೇಕಾದ್ರೆ ದುಡ್ಡೆಷ್ಟು ಖರ್ಚು ಮಾಡಬೇಕು. ಅವುರು ಗೆದ್ದು ಬಂದ ಮ್ಯಾಲೆ ಮಂತ್ಲಿ ಪೇಮೆಂಟಿಗೆ ಎಷ್ಟು ಕೊಡಬೇಕು. ಇದನ್ಯಲ್ಲ ಲ್ಯಕ್ಕ ಹಾಕಿದ್ರೆ ಇನ್ನು ಕುಮಾರ ಸ್ವಾಮಿ ಅವಧಿ ಮುಗುದ್ರು ಎಡೂರಪ್ಪನ ಅವಧಿವರಿಗೂ ದುಡ್ಡು ಮಾಡ್ತಾಯಿರಬೇಕು."

"ಅಂಗರೆ ರೇವಣ್ಣನೂ ಮುಖ್ಯಮಂತ್ರಿಯಾದನೆ?"

"ಆಗಲಿಲ್ಲ ಅಂದ್ರೆ ಭವಾನಿ ಬುಡಬೇಕಲ್ಲ? ಹೋಗಿ ದ್ಯಾವೇಗೌಡನಿಗೇ ಅಡ್ರುಗಾಲಾಕ್ತಳೆ" ಎಂದು ವಾಟಿಸ್ಸೆ ನಕ್ಕ.

"ಈ ಬಡ್ಡೆತ್ತುದ್ದು ಮಾತಾಡ್ತದೆ ಅಂತ ನೀನು ಕೇಳ್ತ ಕುಂತಿದ್ದಿಯಲ್ಲೆ ನಿನಿಗೆ ಬುದ್ದಿಲ್ಲ" ಎಂದ ಕಾಳಮಾವ.

"ದ್ವಡಪ್ಪ ದೇವೇಗೌಡ್ರ ಫ್ಯಾಮಿಲಿ ಟೀಕೆ ಮಾಡ್ತಿನಿ ಅಂತ ಸಿಟ್ಟಾಗಬ್ಯಾಡ, ಇವತ್ತೇನಾಗ್ಯದೆ ಗೊತ್ತಾ? ಅವುನ ಹೆಣ್ಣುಮಕ್ಕಳು, ಸ್ವಸೇರ್ಯಲ್ಲ ಬೀದಿಗೆ ಬಂದುಬುಟ್ಟುವುರೆ."

"ಬೀದಿಗೆ ಬಂದೇನು ಮಾಡಿದ್ದರ್ಲ? ಪಾಪ ಅವ್ರು ರಷ್ಟಕವುರು ಲಕ್ಷ್ಮಿರಿದ್ದಂಗೆ ಮನೆಲವುರೆ."

"ರಿಯಲಿ ಲಕ್ಷ್ಮಿರೆ ದ್ವಡಪ್ಪ ಅವುರು. ಯಲ್ಲಾ ಸೇರಿ ಸುಮಾರು ಎಂಬತ್ತೈದು ಕೋಟಿ ಬಿಲ್ಡಿಂಗ್ ಕೊಂಡಕಂಡವುರೆ ಗೊತ್ತೆ?"

"ಆಟೊಂತರ ದುಡ್ಡು ಎಲ್ಲಿ ಬಂದತ್ಲ ಅವುಕೆ?"

"ಇನ್ನು ಅರವತ್ತೈದು ಕೋಟಿ ಮಿಕ್ಯದೆ ದ್ವಡಪ್ಪ."

"ಅಂಗಂತ ಬಂದು ನಿನಿಗೇಳಿದ್ರೆ?"

"ಹೇಳದೆಯಿದ್ರು ಗೊತ್ತಾಗ ದಿಲವೆ? ಬಳ್ಳಾರಿ ಗಣಿ ಅಮವ್ಪುಂಟು ನೂರ್ಯವತ್ತು ಕೋಟಿಲಿ ಎಂಬತ್ತೈದು ಹೋದ್ರೆ ಇನ್ನೆಷ್ಟು ಉಳಿತು? ನೀನೇ ಹೇಳು. ನೀನೆಲ್ಲೇಳ್ತಿ ದ್ಯಾವೇಗೌಡುಂದು ಬರೀ ಜುಬ್ಬ ಖಾಲಿ ಜೇಬು ಅಂತಿದ್ದೆ. ಅವುನ್ಯಾರೋ ಪೇಪರ್ನೋನು ನಿನ್ನಂಗೆ ಅಂದವುನೆ ಪಾಪ ದ್ಯಾವೇಗೌಡ್ರಿಗೆ ಮನಿಯೇ ಯಿಲ್ಲ ಅಂತ. ಇಂಥೋರಿಗೇನೇಳನ?"

"ಅಂಗರೆ ದ್ಯಾವೇಗೌಡ್ರಿಗೆ ಮನಿಲವೇನ್ನ?" ಎಂದಳು ಜುಮ್ಮಿ.

"ಯಾಕಿರಬೇಕಕ್ಕ. ಮಕ್ಕಳಿಗೋಸ್ಕರ ಮಾಡಬಾರ್ದ ರಾಜಕೀಯ ಮಾಡೋನಿಗೆ ಮನಿಯಾಕೆ? ಅಡಗೆ ಮನಿಯಾಕೆ? ಬೆಡ್ರೂಮ್ಯಾಕೆ? ಮಾಟಮಂತ್ರಕೊಂದು ರೂಮು, ಕೂತಗಳಕ್ಕೊಂದು ರೂಮಿದ್ರಾಯ್ತು, ಪಾಲಿಟಿಕ್ಸ್ ಮಾಡಬವ್ಪುದು"

"!?"

-ಬಿ. ಚಂದ್ರೇಗೌಡ

Zero Hour ಮುನ್ನಿ


1. "ಗಣಿ ಪ್ರಕರಣದಿಂದ ಉಂಟಾದ ಗೊಂದಲ ಬಗೆಹರಿಸುವೆ" ಎಂದವ್ರೆ ಸುಷ್ಮಾಜಿ. ನಿಮ್ಮ ಅಭಿಪ್ರಾಯ ತಿಳ್ಸಿ ಪ್ಲೀಸ್
   - a) ಈ ಚಿನ್ನದ ಗಣಿಗೇನು ಗೊತ್ತು ಬಳ್ಳಾರಿ ಗಣಿಯ ಅಂತರ್ಯ?
   - b) 150 ಕೋಟಿ ಅಂದ್ರೆ 150 ರೂಪಾಯಿ ಅಂತಾ ತಿಳಿದಿದೆಯೇನೋ ಈಯಮ್ಮ!
   - c) ಬಳ್ಳಾರಿಯ ಆ ವರಮಹಾಲಕ್ಷ್ಮಿ ತಾಯಿಯ ನೆರವಿನಿಂದ ಲಂಚ ಪ್ರಕರಣ ಮುಚ್ಚಿ ಹಾಕ್ತಾಳೇನೊ....
   - d) ಕಣಿ ಹೇಳುವ ಈಯಮ್ಮನನ್ನು ನಂಬೋಕಾಗುತ್ತ?
   - e) ಮೇಲಿನೆಲ್ಲವೂ ಸರಿ




2. "ಯಾರ್ಯಾರು ಏನೇನು ಮಾಡಿದ್ದಾರೆ ಎಂಬುದು ನಮಗೂ ಗೊತ್ತಿದೆ. ಟೈಮ್ ಬಂದಾಗ ಗಳಿಗೆ, ಮುಹೂರ್ತ ನೋಡಿ ಎಲ್ಲವನ್ನೂ ಹೊರಗೆ ಬಿಡುತ್ತೇವೆ". ರೇವಣ್ಣನ ಈ ಮಾತು ಏನನ್ನು ಸೂಚಿಸುತ್ತೆ?
   - a) ಕಳ್ಳರ ವಿಷಯ ಕಳ್ಳರಿಗಷ್ಟೇ ಗೊತ್ತು
   - b) ಅರಿಶಿಣ, ಕುಂಕುಮಕ್ಕೆ ರಾತ್ರಿ 10 ರ ಮುಹೂರ್ತ. ಹಗರಣ ಹೊರಹಾಕಲೂ ಮುಹೂರ್ತ ಬೇಕಂತಾ....
   - c) ರೇವಣ್ಣನಂತಹ ಪ್ರಾಮಾಣಿಕನ ಕುರಿತು ಕೆ.ಸಿ. ರೆಡ್ಡಿಯೇ ಹೇಳಬೇಕು.
   - d) ಮೇಲಿನೆಲ್ಲವೂ ಸರಿ



3. "ಈಜಿಪ್ಟ್‌ನ ಮರಳುಗಾಡಿನಲ್ಲಿರಬೇಕಾದ 'ಮಮ್ಮಿ' ಪ್ರತಿ ಮನೆಯಲ್ಲೂ ರಾರಾಜಿಸುತ್ತಿದೆ" ಎಂದು ಬನ್ನಂಜೆ ಗೋವಿಂದಾಚಾರ್ಯರಿಗೆ ವ್ಯಥೆಯಾಗಿದೆಯಲ್ಲ?
   - a) ತಲೆ ಕೆಟ್ಟವರ ಮಾತೇಕೆ ಇಲ್ಲಿ
   - b) 'ಮಮ್ಮಿ' ಎಂಬುದಕ್ಕೆ ಗೂಡಾರ್ಥ ಇರಬೇಕು ನೋಡು ಮುನ್ನಿ.....
   - c) ಬನ್ನಂಜೆ ಕುರಿತ ಈ ಪ್ರಶ್ನೆಗೆ ವಿಷ್ಣುವರ್ಧನ್ ಮಾತ್ರ ಉತ್ತರಿಸಬಲ್ಲರು
   - d) ಮುನ್ನಿ ಬೇಟಿ, ಈ ಬನ್ನಂಜೆ, ಗಿನ್ನಂಜೆಗಳ ಮಾತು ಕೇಳಬೇಡ.... ಮೆಂಟಲ್ ಆಗ್ತಿಯಾ
4. ಪ್ರಧಾನಿ ಕಚೇರಿಯಲ್ಲಿ ಬೇಹುಗಾರನಿದ್ದ ಎಂದು ಹೇಳಿ ಈಗ ಉಲ್ಟಾ ಹೊಡೆತಿದ್ದಾರೆ, ಜಸ್ವಂತ್ ಸಿಂಗ್?
   - a) ಆತನೇ ಒಬ್ಬ ಮಹಾನ್ ಬೇಹುಗಾರ!
   - b) ಆ ಬೇಹುಗಾರನ ಹೆಸರು ಜೇಮ್ಸ್ ಬಾಂಡ್ 007 ಎಂದು ಹೇಳಿಲ್ಲವಲ್ಲ
   - c) ಆ ಬೇಹುಗಾರ ಈ ಜಸ್ವಂತ್‌ನ ಕ್ಲೋಸ್ ಫ್ರೆಂಡ್ ಇದ್ದನೇನೊ?
   - d) ಚೆಡ್ಡಿಗಳೇ ಮಹಾನ್ ದೇಶದ್ರೋಹಿ ಗೂಢಚಾರರಾಗಿರುವಾಗ ಈ ಜಸ್ವಂತ್ ಮಾತು ಬಿಟ್ಹಾಕಿ



5. 'ಕಾಗೆ ಕೈಗೆ ಕಚೇರಿ ಕೊಟ್ರೆ' ಎಂಬುದು ಈ ಕೆಳಗಿನ ಯಾವುದಕ್ಕೆ ಹೊಂದುತ್ತದೆ?
   - a) ಕುಮಾರಸ್ವಾಮಿ ಕೈಗೆ ವಿಧಾನಸೌಧ ಕೊಟ್ಟಿದ್ದು
   - b) ಕೋ-ಜಾ ಸರ್ಕಾರದ ಬಾಯಿಗೆ ರಾಜ್ಯವನ್ನು ಹಾಕಿದ್ದು
   - c) ಚಂಪಾ ಕೈಗೆ ಕ.ಸಾ.ಪ. ಕೊಟ್ಟಿದ್ದು.
   - d) ಈ ಆಡಳಿತದಲ್ಲಿ ಬಹುತೇಕ ಕಡೆ ಇದು ಕಾಮನ್ ಆಗ್ತಿದೆ
   - e) ಎಲ್ಲವೂ ಸರಿ.



ಉತ್ತರಗಳು: 1) e, 2) d, 3) c, 4) d, 5) e

ಬುದ್ಧಿವಂತರು ಬುದ್ಧಿಯನ್ನು ಕಳೆದುಕೊಳ್ಳದಿದ್ದರೆ, ಮತ್ತೇನನ್ನೂ ಕಳೆದುಕೊಳ್ಳುವುದಿಲ್ಲ. -ಮಾಂಟೇನ್

ಬ್ಲಡ್ ಪ್ರೆಶರ್

ನನ್ನ ಪರಿಚಿತರೊಬ್ಬರಿಗೆ ರಕ್ತದೊತ್ತಡ. ಹೈ ಬ್ಲಡ್ ಪ್ರೆಶರ್. ಈತನಿಗೆ ಕೇವಲ ಮೂವತ್ತೋ ಮೂವತ್ತೆರಡೋ ವರ್ಷ. ಇದನ್ನು ಕೇಳಿ ನನಗೆ ಬೇಸರ ಮತ್ತು ಕುತೂಹಲ. ಈ ವಯಸ್ಸಿನ ಹಲವರಿಗೆ ರಕ್ತದೊತ್ತಡ ಬಂದಿದ್ದು ನೆನೆದೆ. ಅವರಲ್ಲೊಬ್ಬ ಸಣ್ಣ ಕೈಗಾರಿಕೆಯ ಯಜಮಾನ; ಇನ್ನೊಬ್ಬ ಚಿತ್ರಕಲಾವಿದ. ಮೂವರಿಗೂ ಸಮಾನವಾಗಿದ್ದ ಅಂಶ ಅಶಿಸ್ತು ಮತ್ತು ಗೊಂದಲ. ಅಶಿಸ್ತಿನಿಂದ ಗೊಂದಲ ಮತ್ತು ಇವೆರಡರಿಂದ ಬ್ಲಡ್ ಪ್ರೆಶರ್.




ಅಶಿಸ್ತಿನ ವ್ಯಕ್ತಿಗಳ ದೌರ್ಬಲ್ಯ ಕಾಲ ಮತ್ತು ದೇಶಗಳ ಬಗ್ಗೆ ಔದಾಸೀನ್ಯ. ಇದೊಂದು ಬಗೆಯ ನಿರ್ಲಕ್ಷ್ಯದಿಂದ, ಒಂದು ರೀತಿಯ ಆತ್ಮವಂಚನೆಯಿಂದ ಬರುತ್ತದೆ. ಇವರು ಯಾವುದನ್ನೂ ಲೆಕ್ಕಾಚಾರದಿಂದ ಮಾಡುವುದಿಲ್ಲ. ಬೆಳಗ್ಗೆ ಒಂಬತ್ತಕ್ಕೆ ಭೇಟಿ ಮಾಡುವೆನೆಂದು ಒಬ್ಬರಿಗೆ ಹೇಳಿರುತ್ತಾರೆ, ಹತ್ತಕ್ಕೆ ಸಭೆಗೆ ಬರುವುದಾಗಿ ಆಹ್ವಾನ ಸ್ವೀಕರಿಸಿರುತ್ತಾರೆ. ಭೇಟಿ ಹತ್ತಕ್ಕೆ ಮಾಡುತ್ತಾರೆ, ಹನ್ನೊಂದರ ಹೊತ್ತಿಗೆ ಸಭೆಗೆ ಹೋಗಿ ಜನರನ್ನು ಕಾಯಿಸಿರುತ್ತಾರೆ. ಹೀಗಾಗಿ ತನ್ನ ಫ್ಯಾಕ್ಟರಿಗೆ ಹೋಗುವುದು ಎರಡು ಗಂಟೆ ತಡವಾಗುತ್ತದೆ. ಅಲ್ಲಿಗೆ ಹನ್ನೆರಡಕ್ಕೆ ಬರುವೆನೆಂದಿದ್ದ ಗಿರಾಕಿ ಹನ್ನೆರಡೂವರೆಗೆ ಬಂದು ಹೋಗಿರುತ್ತಾನೆ. ಮರುದಿನದ ಯೋಜನೆಗಳೆಲ್ಲ ಇದೇ ಜಾಡು ಹಿಡಿದಿರುತ್ತವೆ.

ಇದರಿಂದ ವ್ಯವಹಾರ ಮಾತ್ರ ಕೆಡುವುದಿಲ್ಲ; ಮನುಷ್ಯ ಮನುಷ್ಯರ ನಡುವಿನ ಸಂಬಂಧ ಕೆಡುತ್ತದೆ. ಇವೆರಡರಿಂದಾಗಿ ಈತನಲ್ಲಿ ಇತರರ ವಿಶ್ವಾಸ, ಆಮೇಲೆ ಈತನ ಆತ್ಮವಿಶ್ವಾಸ ಕುಗ್ಗುತ್ತದೆ. ಅನೈತಿಕತೆ, ಉದಾಸೀನಗಳೆಲ್ಲ ತಲೆದೋರುತ್ತವೆ. ಇದರ ಪರಿಣಾಮ ರಕ್ತದೊತ್ತಡ.

ದೇಹದಿಂದ ಮನಸ್ಸು, ಮನಸ್ಸಿನಿಂದ ದೇಹ ಕೆಡುತ್ತಾ ಹೋಗುವುದು ಮನುಷ್ಯನಲ್ಲಿ ಮಾತ್ರ. ರಕ್ತದೊತ್ತಡ, ಲಕ್ವಾ, ಹೃದಯಾಘಾತ ಇವಕ್ಕೆ ಮನುಷ್ಯನ ದುರಭ್ಯಾಸಗಳು ಕೂಡ ಕಾರಣವಿರಬಹುದು. ಮನುಷ್ಯ ಮೂಲಭೂತವಾಗಿ ಸಸ್ಯಾಹಾರಿ ಎಂದು ವಾದಿಸುವವರಿದ್ದಾರೆ; ಇವರ ಪ್ರಕಾರ ಮಾಂಸಾಹಾರ ದುರಭ್ಯಾಸ. ಈ ಜಾಡಿನಲ್ಲಿಯೇ ಸಿಗರೇಟು, ಗಾಂಜಾ, ಮದ್ಯಗಳೆಲ್ಲ ದುರಭ್ಯಾಸಗಳು. ಆದರೆ ಮಾಂಸಾಹಾರ ಹೇಗೆ ಮನುಷ್ಯನ ಶಿಸ್ತು, ಲೆಕ್ಕಾಚಾರಕ್ಕೆ ಮಣಿದು ಆತನ ಸಹಜ ಆಹಾರವಾಗಬಲ್ಲವೋ ಹಾಗೆ ಇತರ ಹಿತಮಿತ ದುರಭ್ಯಾಸಗಳೂ ಆತನ ಜೀವನ ಶೈಲಿಯ ಭಾಗವಾಗಬಲ್ಲವು. ಆದರೆ ಅಶಿಸ್ತು ಹಾಗಲ್ಲ. ಸೈನಿಕನ ಡ್ರಿಲ್ ಬಗೆಯ ಶಿಸ್ತು ಅನಗತ್ಯವಾದರೂ ಮನುಷ್ಯನ ಬದುಕಿನ ಒಳಪದರಗಳಲ್ಲಿನ ಶಿಸ್ತು ಅನಿವಾರ್ಯ. ಕಾಲ, ದೇಶದ ಬಗೆಗಿನ ಅಶಿಸ್ತು ಆತನಿಗೆ ಮಾರಕ.


'ಪುರಸೊತ್ತಿಲ್ಲದ ಮನುಷ್ಯನಿಗೆ ಮಾತ್ರ ವೇಳೆ ಇರುತ್ತದೆ' ಎಂದು ಹೇಳುವವರಿದ್ದಾರೆ. ಬಿಡುವಿಲ್ಲದ ಸ್ಥಿತಿ ಕೂಡ ಮನುಷ್ಯನ ಶಿಸ್ತನ್ನನುಸರಿಸಿದ ಸ್ಥಿತಿಯಾಗಿದ್ದರೆ ಆತನ ಆರೋಗ್ಯ ಕೆಡುವ ಮಾತೇ ಇಲ್ಲ. ಸೋಮಾರಿಗೆ ಕೂಡ ಬಿಡುವಿರುವುದಿಲ್ಲ; ಯಾಕೆಂದರೆ ಸಣ್ಣಪುಟ್ಟ ಕೆಲಸ ಮಾಡುವುದೂ ಆತನ ಸೋಮಾರಿತನ ಕೆಡಿಸುತ್ತದೆ; ಬಿಡುವಿಲ್ಲದ ಸ್ಥಿತಿಯೇ ಆಗುತ್ತದೆ. ■



ಮೇ 15, 29, 1988

ಚಿದಾನಂದಮೂರ್ತಿ: ಒಂದು ಫ್ಯಾಸಿಸ್ಟ್ ಕ್ರಿಯೆ

"ಕನ್ನಡ ಉಳಿಸುವುದಕ್ಕಾಗಿ ಬಾಂಬ್ ಬೇಕಾದರೂ ಹಾಕುವುದನ್ನು ಸಹಿಸಬಲ್ಲೆ" ಎಂದು ಮುಂಚಾಗಿ ಅಪದ್ಧವಾಗಿ ಕೂಗಾಡಿದ ಕನ್ನಡ ಸಾಹಿತಿಗಳು-ಕಲಾವಿದರ ಬಳಗದ ಡಾ. ಎಂ. ಚಿದಾನಂದಮೂರ್ತಿ ಇತ್ತೀಚೆಗೆ ಇನ್ನೊಂದು ಬಾಂಬ್ ಎಸೆದಿದ್ದಾರೆ. ಖ್ಯಾತ ಸಂಗೀತಗಾರ ಡಿ.ಕೆ. ಜಯರಾಮನ್ ಅವರ ಸಂಗೀತ ಕಛೇರಿಯಲ್ಲಿ ಉದ್ಧಟತನದಿಂದ ವರ್ತಿಸಿದ್ದಾರೆ. ಇದು ಡಾ. ಚಿದಾನಂದಮೂರ್ತಿ ಇಲಿ ವೇಷದಲ್ಲಿರುವ ಇಲಿ ಮಾತ್ರ ಆಗಬಲ್ಲರು; ಹುಲಿ ತರಹದ ಮನುಷ್ಯ ಎಂದೂ ನಿರರ್ಥಕ ಗದ್ದಲ ಮಾಡುವುದಿಲ್ಲ, ಜನರನ್ನು ತಪ್ಪು ದಾರಿಗೆಳೆಯುವುದಿಲ್ಲ, ಅಭಿರುಚಿ ಹೀನವಾಗಿ ವರ್ತಿಸಿ ರಸಭಂಗ ಮಾಡುವುದಿಲ್ಲ.



ಕರ್ನಾಟಕ ಸಂಗೀತ ಶೈಲಿ ದಕ್ಷಿಣದ ಎಲ್ಲ ಭಾಷೆಗಳಲ್ಲಿ, ಎಲ್ಲಾ ಕಲಾವಿದರ ಮೂಲಕ ಜನಪ್ರಿಯವಾಗಿದೆ. ತ್ಯಾಗರಾಜರು ಕನ್ನಡನಾಡಲ್ಲಿ ಜನಪ್ರಿಯರಾಗಿರುವಂತೆಯೇ ಪುರಂದರ ದಾಸರು ನೆರೆರಾಜ್ಯಗಳಲ್ಲಿ ಅರ್ಥಪೂರ್ಣರಾಗಿದ್ದಾರೆ, ಅಲ್ಲದೆ ಸಂಗೀತದಲ್ಲಿ ಭಾಷೆ ಕೇವಲ ಕಾಲುಭಾಗದಷ್ಟು ಮುಖ್ಯ.

ನಮ್ಮ ಕನ್ನಡಪರ ಚಳವಳಿ ಹಿಂಸೆ, ಗೂಂಡಾಗಿರಿಯಿಂದ ದೂರವಿದ್ದು ನಿಷ್ಠುರತೆ, ಮಾನವೀಯತೆಯಿಂದ ಬೆಳೆಯಬೇಕಾಗಿದೆ. ಕೊನೆಗೂ ನಮ್ಮ ಭಾಷೆಯೊಂದಿಗೆ ಬದುಕಬೇಕಾದವರು, ಸದಭಿರುಚಿಯಿಂದ ಬಾಳಬೇಕಾದವರು ಕನ್ನಡಿಗರೇ ಎಂಬುದನ್ನು ಮರೆಯದಿರೋಣ.

ಆಂಟಿಗೂ ತುಂಟಿಗೂ ಏನು ವ್ಯತ್ಯಾಸ?

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕುಮಾರಸ್ವಾಮಿ ಸೂಟು ತೊಟ್ಟರೆ ಹೇಗಿರುತ್ತದೆ?
* ಹರ್ಷದ್ ಮೆಹತಾ ತರ ಕಾಣುತ್ತಾರೆ.

ಟಿ.ಎಚ್. ನಾಯ್ಕ್, ಅಂಬಾರಗೊಪ್ಪ
ನಟಿ ಎಕ್ಸ್‌ಪೋಸ್ ಮಾಡಿದ್ರೆ ಬಿಚ್ಚಮ್ಮ ಅಂತಾರೆ! ನಟ ಎಕ್ಸ್‌ಪೋಸ್ ಮಾಡಿದ್ರೆ?
* ಸಲ್ಮಾನ್ ಖಾನ್ ಅಂತಾರೆ.

ಹೇಮಲತಾ ಮಹದೇವ್, ಬೆಂಗಳೂರು
ಇಲ್ಲೊಬ್ಬ ಡಾಕ್ಟರು, ನವಜಾತ-ಶಿಶು ಎನ್ನಲು ನವಜಾತಿ-ಶಿಶು ಎನ್ನುತ್ತಾರಲ್ಲ?
* ಆತ ಕ್ಯಾಪಿಟೇಷನ್‌ಗೆ ಹುಟ್ಟಿದ ಡಾಕ್ಟರ್ ಇರಬೇಕು.

ಡಾ.ಬ.ಬಸವರಾಜ್, ಯಳಂದೂರು
ಅಗಸ್ತ್ಯ ಮಹರ್ಷಿ ಸಮುದ್ರದ ನೀರನ್ನೆಲ್ಲ ಕುಡಿದು ಬರಿದು ಮಾಡಿದರೂ ಪುನಃ ಹೇಗೆ ತುಂಬಿಕೊಂಡಿತು?
* ಕುಡಿದಿದ್ದು ಆಮೇಲೆ ಹರಿದಿದ್ದರಿಂದಲೇ ಉಪ್ಪುಪ್ಪಾಗಿರೋದು.

ಆ.ರಾ.ಮಂಜುನಾಥ್, ಗೆದರೆ
ಪೊಲೀಸ್ ನ್ಯೂಸಲ್ಲೂ ಪೋಲಿ ಪೋಲಿ ನ್ಯೂಸೇ ಹೆಚ್ಚಾಗಿರುತ್ತಲ್ಲಾ?
* 'ಪೋಲೀ'ಸ್‌ಗಳ ದೈನಂದಿನ ಚಟುವಟಿಕೆ ಅದೇ ಅಲ್ಲವಾ.

ಬಿ.ಚಂದ್ರೇಗೌಡ, ಬೆಂಗಳೂರು
ಮೂರೂ ಬಿಟ್ಟವರು ಎಂದರೆ ಯಾರು?
* ಸದ್ಯದ ಪರಿಸ್ಥಿತಿಯಲ್ಲಿ DK ಮತ್ತು HDK.

ರಶ್ಮಿ ರವೀಂದ್ರ, ಬಿಜಾಪುರ
ಆಂಟಿಗೂ ತುಂಟಿಗೂ ಏನು ವ್ಯತ್ಯಾಸ?
* ಬಲ್ಲವರು 'ರಸಪುರಿ' ಮತ್ತು 'ತೋತಾಪುರಿ' ಅಂತಾರೆ.



ಬಹುಮಾನಿತ ಪ್ರಶ್ನೆ

ಎಸ್. ಶಶಿಧರ, ಬೆಂಗಳೂರು
ಕುಮಾರಸ್ವಾಮಿ ಈಗಲಾದರೂ ಜಾತ್ಯತೀತ ಪದದ ಅರ್ಥವನ್ನು ತಿಳ್ಕೊಂಡಿದ್ದಾರಾ?
* ಅದು ಹಳೇ ವಿಷಯ. ಈಗ ಸೊನ್ನೆಗಳ ಲೆಕ್ಕ ಹಾಕುತ್ತಿದ್ದಾರೆ.

ಓದು ಸಿದ್ದೇಗೌಡ, ಕಬ್ಬೇಹಳ್ಳಿ, ಕನಕಪುರ
ರವಿ ಬೆಳಗೆರೆ ಶಾಲೆಯಲ್ಲಿ ಓದ್ದೋರೆಲ್ಲ ಪತ್ರಕರ್ತರಾಗ್ತಾರಾ?
* ಕ್ರೈಂ ಡೈರಿಯ ಪಾತ್ರಗಳಾಗದಿರಲಿ ಅಂತ ನಮ್ಮ 'ಪ್ರಾರ್ಥನೆ'!

ಡಿ.ಎಲ್.ನಾಗರಾಜ್, ಹರಪನಹಳ್ಳಿ
ಪ್ರೀತಿಗೆ ಸೋತವನು ಗೆಲ್ಲುತ್ತಾನೋ? ಅಥವಾ ಕಾಮಕ್ಕೆ ಸೋತವನು ಗೆಲ್ಲುತ್ತಾನೋ?
* ಗೆದ್ದೆ ಅಂದುಕೊಂಡವರು ಸೋತೇ ಇರುತ್ತಾರೆ ಬಿಡ್ರಿ.



ತೊರಗಲ್ಲ ಉಮೇಶ, ಸಾಲಹಳ್ಳಿ
ಕುರುಬರ ಗುರುವಾಗಿ ಎಚ್. ವಿಶ್ವನಾಥ್‌ರನ್ನು ಮಾಡಿದರೆ ಹೇಗೆ?
* ಅವರ ಅಭಿಮಾನಿ ಮಹಿಳೆಯರ ಬಳಗ ಬಿಟ್ಟು ಬಿಡ್ತಾರಾ.

ಕೆ.ಶ್ರೀನಿವಾಸ್, ಮಂಡ್ಯ
ಹುಡುಗಿ ಕೈಕೊಟ್ರೆ ಹುಡುಗ ದೇವದಾಸ. ಹುಡುಗ ಕೈಕೊಟ್ರೆ ಹುಡುಗಿ?
* ಮಂದಹಾಸ...

ಎಂ. ನಿಸರ್ಗ, ದಾವಣಗೆರೆ
ಟಿವಿ ಮೂರ್ಖರ ಪೆಟ್ಟಿಗೆಯಾದರೆ ಜಾಣರ ಪೆಟ್ಟಿಗೆ ಯಾವುದು?
* ನಿಮ್ಮ ಹೆಸರಲ್ಲೇ ಉತ್ತರ ಇದೆ ನೋಡಿ...

ಬಿ.ಎಸ್. ಇಮ್ಮಾನುವೇಲ, ಮಸರಕಲ
ಆಕಾಶ ನೋಡಿ ಮಳೆ ಬರ್ತದೆ ಅಂತ ಹೇಳಬಹುದು, ಭೂಮಿ ನೋಡಿ ಭೂಕಂಪ ಆಗ್ತದೆ ಅಂತ ಹೇಳಬಹುದೇನ್ರೀ....?
* ಇದೊಳ್ಳೆ ಸೊಂಟ ನೋಡಿ ಬಸಿರಾಗುತ್ತೆ ಅಂದಂಗಾಯ್ತು.

ರಾಂಕೊಪ್ಪಲು, ತೀರ್ಥಹಳ್ಳಿ
ದೇವೇಗೌಡ್ರು ಫಿನಿಕ್ಸ್‌ನಂತಾದ್ರೆ ಕುಮಾರಸ್ವಾಮಿ?
* ಫಿನಿಷ್ ಅಂತಿದ್ದಾರೆ ಸಿದ್ದು.


ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ಅಪ್ಪನದು ಶಾಸ್ತ್ರೀಯ ಸಂಗೀತ, ಮಗನದು ಸುಗಮ ಸಂಗೀತವಂತೆ, ಮಗಳದು...?
* ಜಾನಪದ ಸಂಗೀತ.

ಬಸವರಾಜ್ ಬೆಸ್ತರ್, ಹರಪನಹಳ್ಳಿ
ಎಂ.ಪಿ.ಪ್ರಕಾಶರ ಮಗ ಸಾಲ ಮಾಡಿ ಕ್ರಶರ್ ಹಾಕಿದ್ದಾನಂತಲ್ಲ?
* ಅದೀಗ ಸರಕಾರವನ್ನೇ ಕ್ರಶ್ ಮಾಡುವ ಹಂತಕ್ಕೆ ಬಂದಿದೆಯಂತಲ್ಲಾ.

"ನಮ್ಮ ಪ್ರಶ್ನೆ, ನಿಮ್ಮ ಉತ್ತರ" ಕಾಲಂಗೆ ತುಂಬಾ ಜನ ಪ್ರತಿಕ್ರಿಯಿಸುತ್ತಿದ್ದಾರೆ. ಆದರೆ ನಮ್ಮ ಪತ್ರಿಕೆ ಹಲವರಿಗೆ ಮಂಗಳವಾರ/ ಬುಧವಾರ ಸಿಗುವುದರಿಂದ ಅವರು ಉತ್ತರಗಳನ್ನು ಬೇಗನೆ ಕಳುಹಿಸಲು ಸಾಧ್ಯವಾಗುತ್ತಿಲ್ಲ ಎಂದು ದೂರು ನೀಡಿದ್ದಾರೆ. ಆದ್ದರಿಂದ ಈ ವಾರದಿಂದ ಪ್ರತಿಪ್ರಶ್ನೆಗೆ ಎರಡು ವಾರಗಳ ಕಾಲಾವಕಾಶವನ್ನು ನೀಡುತ್ತಿದ್ದೇವೆ.

ಛೀ ತುಂಟಿ!

ಸೀನ ಲೇಟಾಗಿ ಮನೆಗೆ ಹಿಂದಿರುಗಿದಾಗ ಅವನ ಹೆಂಡತಿ ಆಗಲೇ ನಿದ್ದೆ ಮಾಡುತ್ತಿದ್ದಳು. ಹಲವಾರು ದಿನಗಳಿಂದ ರಾತ್ರಿ ಸಲ್ಲಾಪಗಳಲ್ಲಿ ತೊಡಗಲು ನಿರಾಕರಿಸಿದ್ದ ಆಕೆಗೆ ಈಗಲಾದರೂ ಪಾಠ ಕಲಿಸಬೇಕೆಂದು ಸೀನ ಆತುರ ಆತುರವಾಗಿ ಹಾಸಿಗೆ ಸೇರಿದ.



ನಿದ್ದೆ ಮಾಡುತ್ತಿದ್ದ ಹೆಂಡತಿಯನ್ನು ಹಿಡಿದು ಮುತ್ತಿಟ್ಟು ಪ್ರೇಮಿಸಿದ, ಕಾಮಿಸಿದ. ಆಕೆ ನಿದ್ದೆಗಣ್ಣಿನಲ್ಲೇ ಎಲ್ಲವನ್ನೂ ಆನಂದಿಸಿದಳು.

ಎಲ್ಲ ಮುಗಿದ ಮೇಲೆ ಸೀನ ಬಾತ್‌ರೂಮಿಗೆ ಹೋದ. ಅಲ್ಲಿ ಹೆಂಡತಿ ಮುಖ ತೊಳೆಯುತ್ತಾ ನಿಂತಿದ್ದಳು.

"ಅರೆ, ನೀನು ಇಲ್ಲೇನು ಮಾಡುತ್ತಿದ್ದೀಯಾ?" ಎಂದ ಸೀನ ಆಚ್ಚರಿಯಿಂದ.

"ಶ್! ಮೆಲ್ಲಗೆ ಮಾತಾಡು. ಹಾಸಿಗೆಯಲ್ಲಿರುವ ನನ್ನ ಅಮ್ಮ ಎದ್ದಾಳು" ಎಂದು ಪಿಸುಗುಟ್ಟಿದಳು ಸೀನನ ಹೆಂಡತಿ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಸುಷ್ಮಾಸ್ವರಾಜ್‌ಳ ಪ್ಯಾಚ್-ಅಪ್ ಫ್ಲಾಪ್ ಆದದ್ದೇಕೇ?

ಆಗಸ್ಟ್ 2ರ ಸಂಚಿಕೆಯ ನಮ್ಮ ಪ್ರಶ್ನೆ 'ರಾತ್ರಿ 10ರಿಂದ ಮುಂಜಾನೆ 5ರ ತನಕ ಸಿನಿಮಾ' ಮಾಡುವ 'ಶ್ರೀವತ್ಸ'ನಿಗೆ ಯಾವ ಅವಾರ್ಡ್?
ನಿಮ್ಮ ಉತ್ತರ: ಬೊಬ್ಬಿಟ್ಟೈಜ್ ಅವಾರ್ಡ್.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಸ್. ವಿಶ್ವನಾಥ್, ಕಲ್ಲಹಳ್ಳಿ


ಅರಿಶಿಣ ಕುಂಕುಮ ವಹಿವಾಟು

ಕೋರ್ಟ್ ಆದೇಶ ಉಲ್ಲಂಘನೆ, ಮಾಲೀಕನಿಗೆ ವಂಚನೆ, ಪೊಲೀಸ್ ಶಾಮೀಲು

ಆಗಸ್ಟ್ 9 ರ ಸಂಚಿಕೆಯ ಮೂಲಕವೇ ಪ್ರಪ್ರಥಮವಾಗಿ ಸ್ಫೋಟಿಸಲ್ಪಟ್ಟ "ಅರಿಶಿನ ಕುಂಕುಮಕ್ಕೆ 30 ಕೋಟಿ ರೂ. ಆಸ್ತಿ" ಪ್ರಕರಣವೀಗ ಪುರಾವೆ ಸಮೇತ ಜಗಜ್ಜಾಹೀರಾಗಿಬಿಟ್ಟಿದೆ...

ನಮ್ಮ 'ಪತ್ರಿಕೆ' ಬಿಡುಗಡೆಯಾದ ಮರುದಿನ ಸಂಜೆ (ಆ.2) ಕಾಂಗ್ರೆಸ್ ನಾಯಕ ಡಿಕೆಶಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ನಾವು ಉಲ್ಲೇಖಿಸಿದ ದೇವೇಗೌಡರ ಕುಟುಂಬದ "ಸ್ತ್ರೀಶಕ್ತಿ ಗುಂಪು" ಕೆ.ಆರ್. ಪುರಂ ಹೋಬಳಿಯ ವ್ಯಾಪ್ತಿಯಲ್ಲಿ ಖರೀದಿಸಿದ 30 ಕೋಟಿ ರೂ. ಆಸ್ತಿ ಖರೀದಿ ವಹಿವಾಟಿನ ಸಮಗ್ರ ವಿವರಗಳು ಬಯಲಿಗೆ ಬಂದವು.

ನಮ್ಮ ಪ್ರಾಥಮಿಕ ವರದಿಯಲ್ಲಿ ಸೂಚಿಸಿದಂತೆ ದೊಡ್ಡನೆಕ್ಕುಂದಿ ಗ್ರಾಮಕ್ಕೆ ಸೇರಿದ ಸದರಿ ಆಸ್ತಿಯ ಒಟ್ಟು ವಿಸ್ತೀರ್ಣ ಬರೀ 3 ಎಕರೆಯಲ್ಲವಂತೆ... ಅದು ಒಟ್ಟು 9.72 ಎಕರೆಯಂತೆ... ಅಂದರೆ 39, 378 ಚದುರು ಮೀಟರುಗಳಂತೆ.....



ಇದೇ ಸಂಚಿಕೆಯಲ್ಲಿ ನಮ್ಮೊಂದಿಗೆ ಮಾತಾಡಿರುವ ಗೌಡರ ಕಿರಿಯ ಪುತ್ರ ಡಾ. ಎಚ್.ಡಿ. ರಮೇಶ್ ಲೆಕ್ಕ ಹಾಕಿದ ಪ್ರಕಾರ ಸುಮಾರು 1 ಲಕ್ಷದ 80 ಸಾವಿರ ಚದರಡಿಗಳಂತೆ!

ಹಾಗೆಯೇ ಆಸ್ತಿಯ ಮೌಲ್ಯವೂ ಕೇವಲ 30 ಕೋಟಿ ರೂ. ಅಲ್ಲವಂತೆ. ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿಯವರೇ ಬಹಿರಂಗಪಡಿಸಿದ ಪ್ರಕಾರ ಅದು ಒಟ್ಟು 36.06 ಕೋಟಿ ರೂ.ಗಳಂತೆ.....

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ವ್ಯಾಪ್ತಿಗೆ ಬರುವ ವೈಟ್‌ಫೀಲ್ಡ್‌ನ ಕೈಗಾರಿಕಾ ವಲಯದ ಅತ್ಯ

ರವೀಂದ್ರ ರೇಶ್ಮೆ

ಮೂಲ್ಯ ಪ್ರದೇಶಕ್ಕೆ ಸೇರಿದ ಈ ನಿವೇಶನದಲ್ಲಿ 1,21,028 ಚದರಡಿ ಜಾಗವಿರುವ 4 ಅಂತಸ್ತಿನ ಭವ್ಯವಾದ ವಾಣಿಜ್ಯ ಸಂಕೀರಣವಿದ್ದು ಅದರಲ್ಲಿ 190 ಕಾರುಗಳು ಹಾಗೂ 120 ದ್ವಿಚಕ್ರ ವಾಹನಗಳನ್ನು ಏಕಕಾಲಕ್ಕೆ ನಿಲ್ಲಿಸಬಹುದಾದ ಪಾರ್ಕಿಂಗ್ ಏರಿಯಾ ಕೂಡ ಲಭ್ಯವುಂಟು....

ದಿನಾಂಕ 23.3.2006 ರಂದು ಅಂದರೆ ಸನ್ಮಾನ್ಯ ಕುಮಾರಣ್ಣ ರಾಜ್ಯದ ಮುಖ್ಯಮಂತ್ರಿಯಾದ ನಂತರ ಸರಿಯಾಗಿ 50 ನೇ ದಿನದಂದು ಕೆ.ಆರ್. ಪುರಂನ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಪ್ರಶ್ನಿತ ಆಸ್ತಿಯ ನೊಂದಣಿಗೆ ಪ್ರಸ್ತಾವನೆ ಸಲ್ಲಿಸಿದ್ದು ಮಧ್ಯಾಹ್ನ 12.30 ಕ್ಕಂತೆ.... ನೊಂದಣಿ ಪ್ರಕ್ರಿಯ ಜರುಗಿದ್ದು ಮಧ್ಯಾಹ್ನ 3.30ಕ್ಕಂತೆ....

ಆದರೆ ನೊಂದಾವಣಿ ಕಚೇರಿ ಮೂಲಗಳು ಈಗಲೂ ಪಿಸುಗುಟ್ಟುತ್ತಿರುವಂತೆ ವಾಸ್ತವವಾಗಿ ಈ ವಹಿವಾಟು' ಪೂರ್ಣಗೊಂಡಿದ್ದು ನಮ್ಮ ವರದಿಯಲ್ಲಿ ದಾಖಲಿಸಿರುವಂತೆ ರಾತ್ರಿ 10 ಗಂಟೆಗೆ!!

ನೊಂದಣಿಗೆ ಸಂದಾಯವಾದ ಸ್ಟಾಂಪ್‌ಡ್ಯೂಟಿ ಶುಲ್ಕ 3 ಕೋಟಿ 3 ಲಕ್ಷ ರೂ....

ಇವಿಷ್ಟು ಮೇಲ್ನೋಟಕ್ಕೆ ನಿಚ್ಚಳವಿರುವ, ಅಧಿಕೃತ ದಾಖಲೆಗಳಲ್ಲಿ ಗೋಚರಿಸುವ ಹಾಗು ಡಿಕೆಶಿ ಆರೋಪ ಮತ್ತು ಕುಮಾರಣ್ಣನವರ ಪ್ರತ್ಯಾರೋಪಗಳಲ್ಲಿ ಎದ್ದು ಕಾಣಿಸಿದ ಅಂಶಗಳಲ್ಲವೇ....

ಆದರೀಗ ನಾವು ಸಾದರಪಡಿಸಲಿರುವ ಮಾಹಿತಿಗಳು ಮೇಲಿನ ಸಕ್ರಮ ಖರೀದಿ ವ್ಯವಹಾರದಲ್ಲಿ ಹಸ್ತಾಂತರವಾದ 36 ಕೋಟಿ ರೂಪಾಯಿ ಮೌಲ್ಯದ, ತಿಂಗಳಿಗೆ 46.76 ಲಕ್ಷ ಬಾಡಿಗೆ ತರುವ ಈ ದುಬಾರಿ ಆಸ್ತಿಯ ಮಾಲೀಕತ್ವಕ್ಕೆ ಸಂಬಂಧಿಸಿದ ಅಕ್ರಮ ನಡಾವಳಿಗಳು; ಕಾನೂನುಬಾಹಿರ ತಂತ್ರಗಳು; ಮತ್ತು ಫೋರ್ಜರಿ ಫ್ರಾಡ್ ವ್ಯವಹಾರಗಳು!!!

ಆಸ್ತಿಯ ಅಸಲಿ ಮಾಲೀಕರು ಯಾರು?

ಮುಖ್ಯಮಂತ್ರಿಯ ಪರಿವಾರದ ಐವರು ಹೆಣ್ಣು ಮಕ್ಕಳು ಹಾಗು ಅವರ ಕಿರಿಯ ಸೋದರ ಸೇರಿ ಒಟ್ಟು 6 ಮಂದಿ ಪಾಲುದಾರರು ಖರೀದಿಸಿದ 36.06 ಕೋಟಿ ರೂ. ಮೌಲ್ಯದ (ನೊಂದಾಯಿತ) ವೈಟ್‌ಫೀಲ್ಡ್‌ನ ನಿವೇಶನ ಹಾಗು 4 ಅಂತಸ್ತಿನ ಸುಸಜ್ಜಿತ ಕಾಂಪ್ಲೆಕ್ಸ್‌ನ ಮಾರಾಟದಾರ (vendor)ನೆಂದು ಕ್ರಯಪತ್ರದಲ್ಲಿ ನಮೂದಿಸಲಾಗಿರುವ ವ್ಯಕ್ತಿಯ ಹೆಸರು ಚಾತ್ರು ಎಂ. ಮೆಂಡಾ ಎಂಬಾತನದ್ದು...


ಈ ಚಾತ್ರು ಮೆಂಡಾ ತಾನು MRPL ಮಿಲೆನಿಯಾ ರಿಯಲ್ಟರ್ಸ್ ಪ್ರೈ.ಲಿ. ಎಂಬ ರಿಯಲ್ ಎಸ್ಟೇಟ್ ಕಂಪನಿಯ ಮಾಲೀಕನೆಂದು ದಾಖಲಿಸಿದ್ದಾನೆ....

ಸದರಿ ಆಸ್ತಿ ಖರೀದಿಯ ಸೇಲ್ ಡೀಡ್‌ನಲ್ಲಿ ಗೌಡರ ಕುಟುಂಬದ ಒಟ್ಟೊಟ್ಟು ಖರೀದಿದಾರರ ಹಸ್ತಾಕ್ಷರದ ಎದುರು ಮಾರಾಟದಾರನೆಂದು ಸಹಿ ಮಾಡಿರುವ ಮೆಂಡಾ ಒಂದೊಂದು ಕಡೆ ಒಂದೊಂದು ಬೇರೆ ಬೇರೆ ಮಾತೃಸಂಸ್ಥೆಗಳ ಪರ ಪವರ್ ಆಫ್ ಅಟಾರ್ನಿ ಹೋಲ್ಡರ್ ಎಂದು ಹೆಸರಿಸಿಕೊಂಡಿದ್ದಾನೆ!

ಒಂದು ಕಡೆ ಸೆಂಟನಿಯಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿ., ಎಂದೂ, ಮತ್ತೊಂದೆಡೆ ಪಾಲಿಮರ್ ಕಂಪೌಂಡರ್ಸ್ ಆಂಡ್ ಪ್ರಾಸೆಸರ್ಸ್ ಎಂದೂ ಹಾಗು ಮೂರನೆಯ ಹಂತದಲ್ಲಿ ಮೈಸೂರ್ ರಿವೆಟ್ಸ್ ಆಂಡ್ ಮೆಟಲ್ ಇಂಡಸ್ಟ್ರೀಸ್ ಎಂಬ ಕಂಪನಿಗೆ ತಾನು GPA ಹೋಲ್ಡರ್ ಎಂದೂ ತೋರಿಸಿಕೊಂಡಿದ್ದಾನೆ ಈ ಚಾತ್ರು ಮೆಂಡಾ!


ಮೂಲತಃ ಈ ಚಾತ್ರು ಮೆಂಡಾ ಎಂಬ ಆಸಾಮಿ ಸದರಿ ಕಟ್ಟಡದ ಮೇಲೆ ನಾಮಫಲಕವಿರುವ RMZ ಮಿಲೆನಿಯಂ ಬಿಲ್ಡರ್ಸ್ ಎಂಬ ಕಂಪನಿಯ ಪ್ರತಿನಿಧಿ. ಈ RMZ ಎಂಬುದು ಈ ಮೊದಲು ಹೆಸರುವಾಸಿಯಾಗಿದ್ದ ರಹೇಜಾ ಬಿಲ್ಡರ್ಸ್ ಕಂಪನಿಯ ಮರುನಾಮಕರಣ ಅಷ್ಟೇ....

ಅಸಲಿಗೆ ಕುಮಾರಸ್ವಾಮಿ ಪರಿವಾರದ ಕೈ ಸೇರಿದ ಆಸ್ತಿಗೆ ಈ RMZ ನ ಮೆಂಡಾ ಕೂಡ ಮಾಲೀಕನಲ್ಲವೇ ಅಲ್ಲ... ಹಾಗಾದರೆ ಸದರಿ ಸಂಪತ್ತಿಗೆ "ಮಾರಾಟದಾರ" ಎಂಬ ಹಕ್ಕನ್ನು ಈ ಚಾತ್ರು ಮೆಂಡಾಗೆ ವರ್ಗಾಯಿಸಿದ್ದಾದರೂ ಯಾರು?



ಪ್ರೀತಮ್ ಸೇನ್ ಎಂಬ ನಯವಂಚಕ....

ಚಾತ್ರು ಮೆಂಡಾನ ಮಲೆನಿಯಾ ರಿಯಲ್ಟರ್ಸ್ ಕಂಪನಿಗೆ ಸದರಿ ಆಸ್ತಿಯ ಮಾರಾಟ ಹಕ್ಕನ್ನು ವರ್ಗಾಯಿಸಿದಾತನೇ ಸೆಂಟೆನಿಯಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂಬ ಮತ್ತೊಂದು ಕಂಪನಿಯನ್ನು ಸೃಷ್ಟಿಸಿಕೊಂಡು ಮೆಂಡಾ ಜತೆಗೆ ಜಾಯಿಂಟ್ ವೆಂಚರ್ ಒಪ್ಪಂದ ಮಾಡಿಕೊಂಡ ಪ್ರೀತಮ್ ಸೇನ್ ಎಂಬ ಚಾಲಾಕು ಖದೀಮ....



together with the enclosures thereon on the respondents to enable them to file their comments on the interim reliefs claimed in the petition by 02.03.2006. The matter will be heard on 03.03.2006 at 2.30 p.m. In the meanwhile, any transaction or dealing in relation to the fixed assets of the Company, by way of sale or creation of charge will be subject to the outcome of the main petition. The petitioners will forward a copy of this order to the respondents and file proof of service.

(K.K. BALU)

Dated this the 24[th] day of February 2006


ಆಸ್ತಿ ಪರಭಾರೆ ಮಾಡಬಾರದೆಂದು ಕೋರ್ಟ್ ಆದೇಶ

ಮೂಲತಃ ಈ ಪ್ರೀತಮ್ ಸೇನ್ ಕೈಗೆ ಪ್ರಶ್ನಿತ ಆಸ್ತಿ ಬಂದದ್ದೇ ಸುಪ್ರಸಿದ್ಧ ಪ್ಲಾಸ್ಟಿಕ್ ಕೈಗಾರಿಕಾ ಸಮೂಹವಾದ ಪೆರಿವಾಲ್ ಗ್ರೂಪ್ ಆಫ್ ಇಂಡಸ್ಟ್ರೀಸ್‌ನ ಯಜಮಾನರುಗಳಾದ ಪೆರಿವಾಲ್ ಕುಟುಂಬದ ವಿರುದ್ಧ ನಡೆಸಲಾದ ವ್ಯವಸ್ಥಿತ ವಂಚನೆ, ಫೋರ್ಜರಿ ಹಾಗು ದಗಲ್ಬಾಜಿಯ ಪಿತೂರಿಯಿಂದ!!

ಪೆರಿವಾಲ್ ಕುಟುಂಬದ ಹಾಲಿ ವಂಶಜರಾದ ಪಿಯೂಶ್ ಪೆರಿವಾಲ್ ಎಂಬುವವರು ಕಳೆದ ವರ್ಷವಷ್ಟೇ ಅಂದರೆ 13.9.2005 ರಂದು ಬೆಂಗಳೂರಿನ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಈ ಪ್ರೀತಂ ಸೇನ್ ವಿರುದ್ಧ ಗೂಂಡಾಗಳ ಮೂಲಕ ಹಲ್ಲೆ ಯತ್ನ ನಡೆಸಿದ ಆರೋಪ ಹೊರಿಸಿ ಕ್ರಿಮಿನಲ್ ದೂರು ದಾಖಲಿಸಿದ್ದೂ ಆಗಿತ್ತು....

2001 ರಷ್ಟು ಹಿಂದೆಯೇ ಈ ಪ್ರೀತಂ ಸೇನ್ ಕಲಕತ್ತಾದಿಂದ ಬಂದವನೇ ಆಗ ವೃದ್ಧಾಪ್ಯದ ಬಾಧೆಯಿಂದ ನರಳುತ್ತಿದ್ದ ಗಜಾನಂದ್ ಪೆರಿವಾಲ್ ಮತ್ತು ಅವರ ಪತ್ನಿ ಸ್ನೇಹಲತಾ ಪೆರಿವಾಲ್ ಅವರುಗಳನ್ನು ಉಪಾಯವಾಗಿ ಏಮಾರಿಸಿ ಪೆರಿವಾಲ್ ಸಮೂಹದ ಕೈಗಾರಿಕೆಗಳನ್ನು ನಿಭಾಯಿಸಲು ಪವರ್ ಆಫ್ ಅಟಾರ್ನಿ ಕಾಗದ ಪತ್ರಕ್ಕೆ ಸಹಿ ಪಡೆದುಕೊಂಡು ಬಿಟ್ಟ....

ಮುಂದೆ ಪೆರಿವಾಲ್ ಕುಟುಂಬದ ಇತರೆ ಸದಸ್ಯರುಗಳನ್ನು ಕಾನೂನುಬಾಹಿರವಾಗಿ ನಿರ್ದೇಶಕ ಮಂಡಲಿಯಿಂದ ಕಿತ್ತು ಹಾಕುತ್ತ ಬಂದು ತಾನೇ ಈ ಕಂಪನಿ ಸಮೂಹದ ಚೇರ್ಮನ್ ಆಂಡ್ ಮ್ಯಾನೇಜಿಂಗ್ ಡೈರೆಕ್ಟರಾಗಿ (CMD) ಪ್ರತಿಷ್ಠಾಪಿಸಿಕೊಂಡುಬಿಟ್ಟ.....



ನ್ಯಾಯಮಂಡಲಿಯ ತಡೆಯಾಜ್ಞೆಗೆ ಧಿಕ್ಕಾರ!

ಪೆರಿವಾಲ್ ಕಂಪನಿಯ ಯಜಮಾನಿಕೆಯನ್ನು ಮೋಸದಿಂದ ಕೈವಶ ಮಾಡಿಕೊಂಡ ಪ್ರೀತಂಸೇನ್ ಅದರ ಸ್ಥಿರಾಸ್ತಿಗಳನ್ನೆಲ್ಲಾ ಒಂದೊಂದಾಗಿ ಮಾರಾಟ ಮಾಡಲು ಶುರು ಮಾಡಿಕೊಂಡದ್ದಲ್ಲದೇ "ಪೆರಿವಾಲ್" ಎಂಬ ಜನಪ್ರಿಯ ಬ್ರ್ಯಾಂಡನ್ನೇ ಅಳಿಸಿ ಹಾಕುವ ಮಟ್ಟಕ್ಕೆ ತಲುಪಿದ....

ಸೇನ್‌ನ ಅತಿಕ್ರಮಣಶೀಲ ವಹಿವಾಟುಗಳನ್ನು ಪ್ರಶ್ನಿಸಿ ಚೆನ್ನೈನ ಕೇಂದ್ರೀಯ ಕಾನೂನು ಮಂಡಳಿಗೆ ಪಿಯೂಶ್ ಪೆರಿವಾಲ್ ಮತ್ತವರ ಶೇರುದಾರ ಬಂಧುಗಳು ದೂರು ದಾಖಲಿಸಿದರು...


ಮೊನ್ನೆ ಫೆಬ್ರವರಿ 24, 2006 ರಂದು ಈ ದೂರನ್ನು ವಿಚಾರಣೆಗೆ ಸ್ವೀಕರಿಸಿದ ಕಂಪನಿ ಲಾ ಬೋರ್ಡಿನ ಹೆಚ್ಚುವರಿ ಪ್ರಧಾನ ನ್ಯಾಯಪೀಠವು ಪೆರಿವಾಲ್ ಕಂಪನಿಗಳ ಮಾಲೀಕತ್ವದ ಪ್ರಶ್ನೆ ಇತ್ಯರ್ಥಗೊಳ್ಳುವವರೆಗೂ ಸಮೂಹಕ್ಕೆ ಸೇರಿದ ಯಾವುದೇ ಸ್ಥಿರಾಸ್ತಿಗಳನ್ನು ಮಾರಾಟ ಅಥವಾ ಒತ್ತುವರಿ ಮಾಡತಕ್ಕದಲ್ಲವೆಂದು ತಡೆಯಾಜ್ಞೆ ನೀಡಿತ್ತು....

ಕೇಂದ್ರಿಯ ನ್ಯಾಯ ಮಂಡಲಿಯ ತಡೆಯಾಜ್ಞೆ ಇರುವುದು ಗೊತ್ತಿದ್ದೂ ಅಥವಾ ಗೊತ್ತಿಲ್ಲದೆಯೋ ಕರ್ನಾಟಕದ ಹಾಲಿ ಮುಖ್ಯಮಂತ್ರಿಯ ಪರಿವಾರಕ್ಕೆ ಪೆರಿವಾಲ್ ಕಂಪನಿ ಸಮೂಹದ ಈ ಅಮೂಲ್ಯ ಆಸ್ತಿಯನ್ನು RMZ ಬಿಲ್ಡರುಗಳ ಬ್ರೋಕರ್ ಚಾತ್ರು ಮೆಂಡಾ ಮೂಲಕ ಮಾರಾಟ ಮಾಡಿಸಿ ಕೈತೊಳೆದುಕೊಂಡು ಬಿಟ್ಟಿದ್ದಾನೆ ಪ್ರೀತಮ್ ಸೇನ್ ಎಂಬ ಮಹಾವಂಚಕ!

ಪೊಲೀಸ್ ಕಂಪ್ಲೇಂಟ್: ಬಿ-ರಿಪೋರ್ಟ್!

ಶೇಷಾದ್ರಿಪುರ ರೆಡ್ಡಿ ಬಂಕ್ ಬಳಿ 13.9.2005 ರಂದು ಬೆಳಗ್ಗೆ 11.45 ರ ಸುಮಾರಿಗೆ ಮಲ್ಲೇಶ್ವರಂ ಕಡೆಯಿಂದ ಕಾರಿನಲ್ಲಿ ಹೊರಟಿದ್ದ ತಮಗೆ ಮೂವರು ರೌಡಿಗಳು ಮುತ್ತಿಗೆ ಹಾಕಿ ಪ್ರೀತಂ ಸೇನ್ ವಿರುದ್ಧದ ಕೇಸನ್ನು ವಾಪಾಸು ಪಡೆಯದಿದ್ದಲ್ಲಿ ಮುಗಿಸಿಬಿಡುವುದಾಗಿ ಬೆದರಿಕೆ ಹಾಕಿದರೆಂದು ಪಿಯೂಶ್ ಪೆರಿವಾಲ್ ಸೇನ್ ವಿರುದ್ಧ ಅದೇ ದಿನ ಶೇಷಾದ್ರಿಪುರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರು ದಾಖಲಿಸಿದ್ದರಷ್ಟೇ.....

ಸದರಿ ಠಾಣೆಯ ಇನ್ಸಪೆಕ್ಟರ್‌ರವರು ಈ ದೂರಿನ ಬಗ್ಗೆ ಯಾವುದೇ ವಿಚಾರಣೆಯನ್ನೂ ನಡೆಸದೆಯೆ



Piyush Periwal

Industry House
45 Race Course Road
Bangalore-560001
Ph: +91 (80) 22289527
Fax: +91 (80) 22261520
Email: npilblr@vsnl.net
13-Sep-05

The Circle Inspector
Seshadripuram P.S.
Seshadripuram
Bangalore.

Respected Sir,

Sub: Complaint against Mr. Pritam Sen, having his office situated at 'Chandrika Complex', 57/1 Mission Road, 1[st] floor, Bangalore -560027, and residing at 'Prabhu Kripa' 17 RMV Layout, 1[st] Block 2[nd] Stage Bangalore, for cheating, fraud and threat. His mobile No: is 98455 44100.

ಪ್ರೀತಮ್ ಸೇನ್ ವಿರುದ್ಧ ಪೆರಿವಾಲ್ ಸಲ್ಲಿಸಿದ್ದ ದೂರು

'ಹುರುಳಿಲ್ಲ' ಎಂದು ತೀರ್ಮಾನಿಸಿ 'B' ರಿಪೋರ್ಟ್ ನೀಡಿಬಿಟ್ಟರು. ಅಷ್ಟರಲ್ಲಾಗಲೇ ಕರ್ನಾಟಕದಲ್ಲಿ ಕುಮಾರಣ್ಣನ ಅಧಿಪತ್ಯ ಆರಂಭಗೊಂಡಿದ್ದು ಕಾಕತಾಳೀಯವಿದ್ದೀತು....

ಈ ಪೊಲೀಸ್ ತಂತ್ರಗಾರಿಕೆಯ ವಿರುದ್ಧ ಪೆರಿವಾಲ್ ಕುಟುಂಬ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಸಂಬಂಧಪಟ್ಟ ನ್ಯಾಯಾಧೀಶರು ಬಿ-ರಿಪೋರ್ಟನ್ನು ರದ್ದುಗೊಳಿಸಿ ಪಿಯೂಶ್ ಪೆರಿವಾಲ್ ಸಲ್ಲಿಸಿದ ದೂರಿನ ಮರು ವಿಚಾರಣೆ ನಡೆಯಲೆಂದು ಆದೇಶಿಸಿದ್ದಾರೆ!

ಅಂದಹಾಗೆ ಈ ಪ್ರೀತಂ ಸೇನ್‌ನ ಸೆಂಟನಿಯಲ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿಯ ಜತೆ ಕುಮಾರಣ್ಣನವರ ರಾಜಪರಿವಾರ ಜಾಯಿಂಟ್ ಡೆವೆಲಪ್‌ಮೆಂಟ್ ಒಪ್ಪಂದ ಮಾಡಿಕೊಂಡದ್ದು 6.2.2004 ರಲ್ಲಿಯೇ ಅಂತೆ.... ಮುಂದೆ 20.5.2004 ರಿಂದ ಅವರದ್ದೇ ಪಾಟಿ ಮತ್ತು ಕುಟುಂಬದ ದಟ್ಟ ಪ್ರಭಾವಳಿಯಿಂದ ಜೆಡಿಎಸ್-ಕಾಂಗ್ರೆಸ್ ಮೈತ್ರಿಕೂಟದ ರಾಜ್ಯಭಾರವೇ ಶುರುವಾಗಿಬಿಟ್ಟಿತಲ್ಲವೇ... ಹಾಗಾಗಿ ಉದ್ದಕ್ಕೂ ಪ್ರೀತಂ ಸೇನ್‌ನ ಬಿಸಿನೆಸ್ ಚಟುವಟಿಕೆಗಳಿಗೆ 'ರಾಜರಕ್ಷೆ' ದಕ್ಕುತ್ತಾ ಬಂತು...

ಕರ್ನಾಟಕ ಬ್ಯಾಂಕ್ ಲೋನ್ ಗಾಥೆ

ಮೊನ್ನೆ ತಾನೇ ಡಿಕೆಶಿ ಮಾಡಿದ ಆರೋಪಗಳಿಗೆ ಪ್ರತ್ಯುತ್ತರ ನೀಡಿದ ಕುಮಾರಸ್ವಾಮಿ ತಮ್ಮ ಕುಟುಂಬದ ಆಸ್ತಿ ಖರೀದಿ ವ್ಯವಹಾರದಲ್ಲಿ ಕಾನೂನುಬಾಹಿರ ಅನ್ನುವುದು ಯಾವುದೂ ಇಲ್ಲವೆಂದಿದ್ದಾರೆ....

ಮಾರ್ಚ್ 23, 2006 ರಂದೇ ಕರ್ನಾಟಕ ಬ್ಯಾಂಕಿನಿಂದ 33 ಕೋಟಿ ರೂ. ಸಾಲ ಬಿಡುಗಡೆಯಾದ್ದರಿಂದ ಮರುದಿನವೇ ಅಂದರೆ ಮಾರ್ಚ್ 24, 2006 ರಂದು ಆಸ್ತಿಯ ನೊಂದಣಿ ಮಾಡಿಸಲಾಯಿತೆಂದು ಸಮರ್ಥಿಸಿಕೊಂಡಿದ್ದಾರಲ್ಲವೆ....

ಆದರೆ ಸೇಲ್‌ಡೀಡ್‌ನಲ್ಲಿಯೇ ಸೂಚಿಸಿರುವಂತೆ ಅವರ ಕುಟುಂಬ ಸದಸ್ಯರಾದ ಶ್ರೀಮತಿ ಕವಿತಾ ಬಾಲಕೃಷ್ಣ ಮತ್ತಿತರ ಆರು ಮಂದಿ ಖರೀದಿದಾರರು ಆಸ್ತಿಯ ಮಾರಾಟಗಾರ ಚಾತ್ರು ಮೆಂಡಾಗೆ ಪಾವತಿಸುತ್ತ ಬಂದ ಮೊತ್ತಗಳ ವಿವರಗಳೇ ವಿಚಿತ್ರವಾಗಿವೆ.

* ದಿನಾಂಕ 4.7.2005 ರಂದು ಆರೂ ಮಂದಿ ಖರೀದಿದಾರರು ತಲಾ 33,95,000 ಗಳಂತೆ 2 ಕೋಟಿ 3 ಲಕ್ಷ 70 ಸಾವಿರ ರೂ.ಗಳನ್ನು ಸಂದಾಯ ಮಾಡಿದರು

* ದಿನಾಂಕ 22.7.05 ರಂದು ತಲಾ 5 ಲಕ್ಷ ರೂ.ನಂತೆ ಒಟ್ಟು 30 ಲಕ್ಷ ರೂ. ಟೋಕನ್ ಅಡ್ವಾನ್ಸ್ ಸಂದಾಯ....

* ದಿನಾಂಕ 12.8.2005 ರಂದು ತಲಾ 5 ಕೋಟಿ ರೂಪಾಯಿನಂತೆ ಒಟ್ಟು 30 ಕೋಟಿ ರೂ. ಸಂದಾಯ... ಕರ್ನಾಟಕ ಬ್ಯಾಂಕ್ ಮಿನರ್ವಾ ಸರ್ಕಲ್ ಬ್ರ್ಯಾಂಚ್‌ನಿಂದ ಪೇ ಆರ್ಡರ್ ಮೂಲಕ ಪಾವತಿ....

* ದಿನಾಂಕ 4.7.2005 ರಂದೇ ಪದ್ಮನಾಭನಗರದ ಅಪೆಕ್ಸ್ ಬ್ಯಾಂಕಿನಿಂದ ತಲಾ 18 ಲಕ್ಷ 73 ಸಾವಿರ 712 ರೂ ಡಿ.ಡಿ. ಸಂದಾಯ.... ಅದೇ ದಿನ ಮೊದಲ ಖರೀದಿದಾರರಾದ ಕವಿತಾರಿಂದ 20 ಲಕ್ಷ ಹಾಗು 40 ಲಕ್ಷ ರೂ. ಪ್ರತ್ಯೇಕ ಸಂದಾಯ...

* ದಿನಾಂಕ 30.7.05 ರಂದು ಕಟ್ಟಡದ ಬಾಡಿಗೆದಾರರಿಂದ ಮಾರಾಟಗಾರನಿಗೆ 3 ತಿಂಗಳ ಬಾಡಿಗೆ ರೂಪದಲ್ಲಿ ಸಂದಾಯವಾದ 1 ಕೋಟಿ 40 ಲಕ್ಷ ರೂ.ಗಳನ್ನು ಸೆಕ್ಯುರಿಟಿ ಡಿಪಾಸಿಟ್ ಎಂದ ಹೊಂದಿಸಲಾಗಿದೆ

ಹೀಗೆ 2005 ರ ಆಗಸ್ಟ್ 12 ರಂದೇ ಕುಮಾರಣ್ಣನವರ ಕುಟುಂಬದ ಸದಸ್ಯರು ಆಸ್ತಿ ಖರೀದಿಯ ಮೌಲ್ಯವಾದ 36 ಕೋಟಿ, 6 ಲಕ್ಷದ 43 ಸಾವಿರದ ... ನೂರು ರೂ.ಗಳನ್ನು ಮಾರಾಟಗಾರನಿಗೆ ವರ್ಗಾಯಿಸಿಬಿಟ್ಟಿರುವಾಗ ಕರ್ನಾಟಕ ಬ್ಯಾಂಕಿನಿಂದ ಟರ್ಮ್‌ಲೋನ್ ಎಂದು ದಕ್ಕಿದ 33 ಕೋಟಿ ರೂ.ಗಳ ಸಾಲ ಮಂಜೂರಾದದ್ದಾದರೂ ಯಾವ ದಿನಾಂಕದಂದು ಎಂದು ಕೇಳಬಹುದೇ?

ಕುಮಾರಣ್ಣ ಹೇಳಿರುವಂತೆ ಸಾಲ ಮಂಜೂರಾದದ್ದು ರಿಜಿಸ್ಟ್ರೇಶನ್ನಿನ ಹಿಂದಿನ ದಿನವೇ (23.3.06) ಅಥವಾ ಬಹುಹಿಂದೆಯೇ? ಅಥವಾ ಈ ರಾಜ ಪರಿವಾರಕ್ಕೆ ಬ್ಯಾಂಕ್ ಸಾಲದ ಅಗತ್ಯವೂ ಇರಲಿಲ್ಲವೇ?

ಆಗಸ್ಟ್ 1 ರಂದೂ ಮಾಲೀಕತ್ವ ಪೆರಿವಾಲ್‌ರದ್ದೇ!

7.3.2006 ರಿಂದ ಮೊನ್ನೆ 1.8.2006 ರವರೆಗೂ ಪ್ರತಿ ತಿಂಗಳೂ ಕೆ.ಆರ್. ಪುರಂನ ಸಬ್‌ರಿಜಿಸ್ಟ್ರಾರ್ ಕಚೇರಿಯಿಂದ ನೀಡಲಾದ No

▶▶▶▶▶

ನೀವು ಬುದ್ಧಿವಂತರಾಗಬೇಕೇ? ಹಾಗಾದರೆ ಮೊದಲು ನಿಮ್ಮ ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಳ್ಳಿ -ಲಿವೆಕ್ಟರ್

"ನಮ್ಗೆ ಅಷ್ಟೊಂದು ಯೋಗ್ಯತೆ ಇಲ್ವಾ ಸಾ" - ಡಾ. ರಮೇಶ್

ಕಳೆದ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಈ ವರದಿಗಾರನಿಗೆ ಅನಿರೀಕ್ಷಿತ ಮೊಬೈಲ್ ಕರೆ...

"ಹಲೋ ಸಾರ್... ನಾನು ರಮೇಶ್ ಮಾತಾಡ್ತಿರೋದು ಸಾರ್...."

"ಹಲೋ... ರಮೇಶ್ ಅಂದ್ರೆ ತಾವು ಯಾವ ರಮೇಶ್....?"

"ಅದೇ ಸಾರ್ ದೇವೇಗೌಡ್ರ ಮಗ ಡಾ. ಎಚ್.ಡಿ. ರಮೇಶ್ ಮಾತಾಡ್ತಿರೋದು...."

"ಹೇಳಿ ಡಾಕ್ಟರೇ ಏನು ಸಮಾಚಾರ?"

"ಇದೇನ್ ಸಾರ್... ನಿಮ್ಮ 'ಲಂಕೇಶ್'ನಲ್ಲಿ ಕವರ್ ಮೇಲೆ ನನ್ನ ಫೋಟೋ ಹಾಕಿಬಿಟ್ಟು 4 ಲಕ್ಷ ಟನ್ ಐರನ್ ಓರ್ ಕದ್ದಿದೀನಿ ಅಂತ ಹಾಕಿದ್ದೀರಿ... ಇದೇನು ಅನ್ಯಾಯ ಸಾರ್...."

"ಡಾಕ್ಟರ್ ರಮೇಶ್... ಬೇಸರ ಮಾಡ್ಕೋಬೇಡಿ... ಈ ವಿಷಯದಲ್ಲಿ ಸತ್ಯಾಂಶ ಏನೂಂತ ತಾವೂ ವಿವರಣೆ ಕೊಡಬಹುದಲ್ಲವ...."

"ಹಾಗಾದ್ರೆ ತಾವು ಎಲ್ಲಿ ಸಿಗ್ತೀರಾ ಸಾರ್...? ನಾನು ನಿಮ್ಜೊತೆ ಮಾತಾಡ್ಬೇಕು"

"ದಯವಿಟ್ಟು ಕ್ಷಮಿಸಿ... ನಾನು ಹೊರಗೆಲ್ಲೂ ಬರುವ ಸ್ಥಿತಿಯಲ್ಲಿಲ್ಲ... ನಾನಿನ್ನೂ ನನ್ನ ಆಕ್ಸಿಡೆಂಟ್ ಗಾಯದಿಂದ ಚೇತರಿಸ್ಕೊಳ್ತಾ ಇದೀನಿ...."

"ಡೋಂಟ್ ವರಿ ಸಾರ್... ನಿಮ್ಮ ಅಡ್ರೆಸ್ ಹೇಳ್ಬಿಡಿ... ನಾನೇ ಬಂದುಬಿಡ್ತೇನೆ"

ಮುಂದೆ ಕೇವಲ 10 ನಿಮಿಷದಲ್ಲಿ ಮಲ್ಲೇಶ್ವರದ ಸರ್ಕಾರಿ ಜನರಲ್ ಆಸ್ಪತ್ರೆ ಆವರಣದಲ್ಲಿರೋ ನಮ್ಮ ಕ್ವಾರ್ಟರ್ಸ್‌ನಲ್ಲಿ ಡಾ. ಎಚ್.ಡಿ. ರಮೇಶ್ ಪ್ರತ್ಯಕ್ಷರಾಗಿದ್ದರು!

ಕಾಂಗ್ರೆಸ್ಸಿಗರಿಗೆ ಪ್ರತಿ ಸವಾಲು....!

ಸೋಫಾದಲ್ಲಿ ಕೂತು ಸೆಟಲ್ ಆಗ್ತಿರೋ ಹಾಗೆಯೇ ಡಾ. ರಮೇಶ್ ಒಂದೊಂದಾಗಿ 'ಬಾಂಬ್' ಸಿಡಿಸತೊಡಗಿದರು...

"ಸಾರ್ ಈ ವಿಷಯಗಳೇನಾದ್ರೂನು ನ್ಯಾಷನಲ್ ಮೀಡಿಯಾದಲ್ಲೇನಾದ್ರೂ ಬಂದುಬಿಟ್ರೆ ನಾನೇ ಬಹಿರಂಗವಾಗಿ ಒಂದು ಚಾಲೆಂಜ್ ಕೊಟ್ಟುಬಿಡ್ತೇನೆ. ಸತ್ಯ ಹೊರಗೆ ಬರಲೀಂತ ನಾನೇ ನನ್ನ ಬ್ರೇನ್ ಮ್ಯಾಪಿಂಗ್ ಟೆಸ್ಟ್ ನಡೀಲಿ ಅಂತ ಸ್ಟೇಟ್‌ಮೆಂಟ್ ಮಾಡಿಬಿಡ್ತೇನೆ...."

"ಯಾಕೆ ಡಾಕ್ಟರೇ, ಅಷ್ಟೊಂದು ಭಾವಾವೇಶಕ್ಕೊಳಗಾಗ್ತೀರಿ? ಅದರ ಬಗ್ಗೆ ತನಿಖೆ ನಡೆದು ನಿಜಾಂಶ ಹೊರಬಿದ್ದ ಮೇಲೆ ತಾನೆ ಅದೆಲ್ಲಾ ಬೇಕಾಗೋದು....."

"ಇಲ್ಲಾ... ಇಲ್ಲಾ ಸಾರ್..... ನಮ್ಮ ಫ್ಯಾಮಿಲಿಗೆ ಕೆಟ್ಟ ಹೆಸರು ತರೋ ಪಿತೂರಿ ನಡೀತಾ ಇರೋದ್ರಿಂದ ಇವಾಗ್ಲೆ ನನ್ನ ಮಾತಿನ ಪರೀಕ್ಷೆ ನಡ್ದು ಹೋಗ್ಲಿ.... ಆದರೆ ನನ್ಜತೇನೆ ನಾನು ಒಂದು 21-22 ಜನ ಕಾಂಗ್ರೆ ಲೀಡರುಗಳ ಹೆಸರು ಕೊಡ್ತೇನೆ.... ಅವರುಗಳ್ಗೂ ಬ್ರೇನ್ ಮ್ಯಾಪಿಂಗ್ ಟೆಸ್ಟ್ ನಡೆಸಲೇಬೇಕು....."

"ಆ ಕಾಂಗ್ರೆ ಲೀಡರುಗಳೂ ಮೈನಿಂಗ್‌ನಲ್ಲಿದ್ದಾರಾ ಡಾ. ರಮೇಶ್? ಅವರುಗಳ ಹೆಸರುಗಳನ್ನು ಇವಾಗ್ಲೆ ಹೇಳಬಹುದಲ್ಲ...?"

"ಇಲ್ಲ.... ಇಲ್ಲ ಸಾರ್.... ಸೂಕ್ತ ಸಮಯ ಬಂದಾಗ ಹೇಳ್ತೇನೆ... ಆದ್ರೆ ಇದು ಇನ್‌ಕ್ಯಾಮರಾ (ರಹಸ್ಯವಾದ) ಟೆಸ್ಟ್ ಆಗಕೂಡದು ಸಾರ್.... ಓಪನ್ ಹಾಲ್‌ನಲ್ಲಿ ಟೆಸ್ಟ್ ನಡೀಬೇಕು...!!"

ರಾಮಮೂರ್ತಿಯವರೇ ನನ್ನ ಗಾಡ್‌ಫಾದರು ಸಾರ್.....

ಡಾ. ರಮೇಶ್‌ರ ಆತ್ಮನಿವೇದನೆ ಇದೇ ಧಾಟಿಯಲ್ಲಿ ಮುಂದುವರೀತು....

"ನಾನು ಮೊದಲು ಗ್ರಾನೈಟ್ ಬಿಸಿನೆಸ್ ಮಾಡ್ತಾ ಇದ್ದೆ ಸಾರ್.... ಆಗ ನಮ್ಮ ರಾಮಮೂರ್ತಿಯವರೇ ನೀವ್ಯಾಕೆ ಐರನ್ ಓರ್ ರಫ್ತು ಮಾಡಬಾರ್ದು ಅಂತ ನನ್ನನ್ನ ಹುರಿದುಂಬಿಸಿದ್ದು...."

"ಈ ರಾಮಮೂರ್ತಿ ಅಂತಂದ್ರೆ ಚಿತ್ರದುರ್ಗದ ಜಾನ್ ಮೈನ್ಸ್ ಮಾಲೀಕರಾ ಡಾಕ್ಟರೇ.....?"

"ಹೌದೌದು ಅವರೇ ಸಾರ್.... ತಮ್ಮ ಗಣಿಯಿಂದ ಬರೀ ನಾರ್ತ್ ಇಂಡಿಯಾದವರೇ ಮೆಟೀರಿಯಲ್ ಕೊಂಡೊಯ್ದು ಲಾಭ ಮಾಡಿಕೊಳ್ತಿದಾರೆ... ನೀವುಗಳು ನಮ್ಮವರಾಗಿ ಯಾತಕ್ಕೆ ಮಾಡಬಾರ್ದು ಅಂತ ಅವರೇ ಗೈಡ್ ಮಾಡಿದ್ರು...."



"ಆದರೆ ಡಾ. ರಮೇಶ್ ಈ ರಾಮಮೂರ್ತಿಗಳು ವ್ಯಾಪಾರದಲ್ಲಿ ತುಂಬಾ ಸ್ಟ್ರಿಕ್ಟು ಅಂತ ಹೇಳ್ತಾರಲ್ಲ? ಅವರು ಯಾವುದೇ ಗಿರಾಕಿಗೂ ಒಂದ್ಸಲಕ್ಕೆ 5 ಸಾವಿರ ಟನ್ ಮಾತ್ರವೇ ರಿಲೀಸು ಮಾಡೋದಂತೆ?"

"ಹೌದು ಅದು ನಿಜಾನೇ... ಆದ್ರೆ ಒಂದು ಏಳೆಂಟು ಜನ ವಿಐಪಿ ಗಿರಾಕಿಗಳಿಗೆ ಅಂದ್ರೆ ನಮ್ಮ ಶಾಮನೂರು ಶಿವಶಂಕರಪ್ಪನೋರು, ಬಿ. ಉಮಾಪತಿಯವರು, ಡಿ.ಎಂ. ಸಿದ್ದೇಶ್ ತರದೋರಿಗೆಲ್ಲ ಧಾರಾಳವಾಗಿ ಅದಿರು ಸಪ್ಲೈ ಮಾಡ್ತಾರೆ ಸಾರ್...."

"ಹಾಗಿದ್ರೆ ನೀವು ಇದುವರೆಗೂ ಕಬ್ಬಿಣದ ಅದಿರು ಖರೀದಿ ಮಾಡಿ ಎಕ್ಸ್‌ಪೋರ್ಟ್ ಮಾಡಿರೋದೆಲ್ಲ ಬರೀ ಇದೊಂದೇ ಮೈನ್ಸ್‌ನಿಂದಾನಾ?"

"ಖಂಡಿತವಾಗೂ ಸಾರ್... ನಾನು ಮತ್ತು ನಮ್ಮಣ್ಣ ಬಾಲಕೃಷ್ಣಗೌಡ್ರು ಸೇರಿಕೊಂಡು ಬಿಎಸ್‌ಕೆ ಟ್ರೇಡಿಂಗ್ ಕಂಪನಿ ಮಾಡಿದ ಮೇಲೆ ಒಟ್ಟು ಎರಡೂ ಕಾಲು ಲಕ್ಷ ಟನ್‌ನಷ್ಟು ಎಕ್ಸ್‌ಪೋರ್ಟ್ ಮಾಡಿರ್ಬಹುದು.... ಅದೆಲ್ಲವೂ ಲೀಗಲ್ಲೇ.... ಪ್ರತಿಯೊಂದು ವ್ಯವಹಾರಾನೂ ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್‌ನಲ್ಲಿ ತೋರಿಸಿದ್ದೇವೆ ಕೂಡ... ಬೇಕಾದ್ರೆ ನೀವೇ ಚೆಕ್ ಮಾಡಬಹುದು...."

"ಇನ್ನಾವುದೇ ಮೈನ್ಸ್‌ನಿಂದಾನೂ ನೀವು ಅದಿರು ಖರೀದಿಸಿಲ್ಲವಾ?"

"ಒಂದಷ್ಟು ಲೋಕಲ್ ಟ್ರೇಡಿಂಗ್ ಮಾಡಿಕೊಳ್ಳೋದಕ್ಕೋಂತ ಆನಂದ್‌ಸಿಂಗ್ ಮೈನ್ಸ್‌ನಿಂದ (ಹೊಸಪೇಟೆ) 20-30 ಸಾವಿರ ಟನ್ನು ಪಡೆದಿರಬಹುದು ಅಷ್ಟೆ ಸಾರ್...."

"ನೀವೇ ಹೇಳ್ತಿರೋ ಪ್ರಕಾರ ಈ 2.25 ಲಕ್ಷ ಟನ್ ಅದಿರು ವ್ಯಾಪಾರ ಎಷ್ಟು ದಿನದಲ್ಲಿ ಮಾಡಲಿಕ್ಕೆ ಸಾಧ್ಯವಾಯ್ತು ಡಾ. ರಮೇಶ್? ಅಂದಾಜು ಲಾಭ ಎಷ್ಟೂಂತ ಕೇಳಬಹುದಾ?"

"ನೋಡಿ ಸಾರ್ ಇದು ತುಂಬಾ ತಾಪತ್ರಯದ ಧಂದೆ ಸಾರ್... ಮೊದಮೊದಲು ಒಂದು ಶಿಪ್‌ಮೆಂಟ್‌ಗೆ 4 ರಿಂದ 5 ತಿಂಗಳಾಗ್ತಾಯಿತ್ತು... ಇತ್ತೀಚೆಗೆ ನಮ್ಮ ಕುಮಾರ್ ಸಿ.ಎಂ. ಆದಮೇಲೆ ಒಂದು ಮೂರು ಶಿಪ್‌ಮೆಂಟ್ ಮಾಡೋಕೆ ಸಾಧ್ಯವಾಯಿತು. ಇದರಲ್ಲಿ ಲಾಭ ಎಷ್ಟೂಂತ ಮುಚ್ಚಿಡೋಕೂ ಆಗಲ್ಲ ಸಾರ್.... ಟನ್ನಿಗೆ 100-150 ರೂ. ತರ ಅಬ್ಬಬ್ಬಾ ಅಂದ್ರೆ ಇದುವರೆಗೂ ಒಂದೈದು ಕೋಟಿ ಬಂದಿರ್ಬಹುದು... ಅದೆಲ್ಲಾ ಇನ್‌ಕಂಟ್ಯಾಕ್ಸ್‌ನಲ್ಲಿ ತೋರ್ಸಿದೀವಿ...."

"ಮಂಗಳೂರಿನಲ್ಲಿ ನೀವೇ ಒಂದು ಯಾರ್ಡ್ ಖರೀದಿಸಿ 46 ಸಾವಿರ ಟನ್ ಅನಧಿಕೃತ ಮೆಟೀರಿಯಲ್ ಸಂಗ್ರಹಿಸಿದ್ದೀರ ಅಂತ ಆರೋಪ ಇದೆಯಲ್ಲ?"

"ಸಾರ್... ಆ ಮೂರು ಎಕರೆ ಯಾರ್ಡ್ ಪಡೀಲಿಕ್ಕೆ 50 ಲಕ್ಷ ಡಿಪಾಸಿಟ್ ಕಟ್ಟಿದ್ದೀವಿ... ಅಲ್ಲಿರೋದೆಲ್ಲ ಅಧಿಕೃತವಾದ ಸ್ಟಾಕ್ ಹೊರತು ಯಾರ ಹತ್ರಾನೂ ಕೊಳ್ಳೆ ಹೊಡದಿದ್ದಲ್ಲ...."

"ನಾನು ಎಂ.ಡಿ. ರೇಡಿಯಾಲಜಿ...."

"ಡಾಕ್ಟರೇ ವೈದ್ಯಕೀಯದಲ್ಲಿ ನಿಮ್ಮ ಕ್ವಾಲಿಫೇಕೇಶನ್ನೇನು? ನೀವ್ಯಾಕೆ ಆ ವೃತ್ತಿ ಮಾಡದೇ ಹೋದ್ರಿ?"

"ನಾನು ಎಂಬಿಬಿಎಸ್ ಮುಗಿಸಿ ಎಂ.ಡಿ. ರೇಡಿಯಾಲಜಿ ಮಾಡ್ದೆ ಸಾರ್..... ಆಮೇಲೆ ಮೂರು ತಿಂಗಳು ಕಿಮ್ಸ್‌ನಲ್ಲಿ (ಕೆಂಪೇಗೌಡ ಮೆಡಿಕಲ್ ಕಾಲೇಜು ಬೆಂ.) ಲೆಕ್ಚರರ್ ಆಗಿದ್ದೆ...... ಆದ್ರೆ ಅಲ್ಲಿದ್ದ ಪ್ರೊಫೆಸರ್‌ಗೂ ನನಗೂ ಮನಸ್ತಾಪ ಬಂದು ಬೇಜಾರಾಯ್ತು... ಅವತ್ತೇ ತೀರ್ಮಾನಿಸಿಬಿಟ್ಟೆ, ಈ ಪ್ರೊಫೆಶನ್ನು (ಡಾಕ್ಟರಿಕೆ!) ನನಗೆ ಹೇಳಿ ಮಾಡಿಸಿದ್ದಲ್ಲಾಂತ."

"ಮತ್ತೆ ಬೇರೆ ಯಾವ ಯಾವ ಬಿಸಿನೆಸ್‌ಗೆ ಕೈಹಾಕಿದ್ರಿ?"

"ಮೊದಲು ಸಣ್ಣದಾಗಿ ರಿಯಲ್ ಎಸ್ಟೇಟ್ ಶುರುಮಾಡಿಕಂಡು ಕೈಯಲ್ಲಷ್ಟು ಕಾಸು ಮಾಡಿಕೊಂಡೆ... ಆಮೇಲೆ 1999 ರಲ್ಲಿ IPCL ಪ್ಲಾಸ್ಟಿಕ್ ಪ್ರಾಡಕ್ಟ್ಸ್‌ದು ಏಜನ್ಸಿ ಪಡಕೊಂಡು ಚೆನ್ನಾಗೇ ನಡಿಸ್ತಾ ಬಂದೆ.... ಕೊಂಚ ಕಾಲ ಶಾ ವ್ಯಾಲೇಸ್ ಬಿಯರ್ ಡೀಲರ್‌ಶಿಪ್ ಕೂಡ ಮ್ಯಾನೇಜ್ ಮಾಡ್ದೆ... ಅದು ಮುಂದೆ ಟೇಕ್‌ಓವರ್ ಆದಾಗ ನಮ್ಮ ಡೀಲರ್‌ಶಿಪ್ ರದ್ದು ಮಾಡಿದ್ರು... ಜತೆಗೇನೆ ಗ್ರಾನೈಟ್ ಎಕ್ಸ್‌ಪೋರ್ಟ್‌ಗೂ ಕೈಹಾಕಿದ್ದೆ...."

"ನೀವು ಪದ್ಮನಾಭನಗರದಲ್ಲಿ ಕಟ್ಟಿಸಿರೋ ಡಿಜಿ ಹಾಸ್ಪಿಟಲ್ ಮತ್ತು ನರ್ಸಿಂಗ್ ಹೋಮ್ ಗತಿ ಏನಾಯ್ತು?"

"ಅದಕ್ಕೋಸ್ಕರ 65 ಲಕ್ಷ ರೂ. ಸಾಲ ಮಾಡಿ ಕೊಂಡಿದ್ದೆ... ಆದ್ರಿಂದಾನೇ ಅದನ್ನ ಮಲ್ಯ ಆಸ್ಪತ್ರೆಯ ಆದಿಕೇಶುವುಲು ಅವರಿಗೆ ಲೀಸ್ ಕೊಡೋಣ ಅಂದುಕೊಂಡೆ...ಆದರೆ ಉದ್ಘಾಟನೆ ದಿನವೇ ನಮ್ಮ ತಂದೆಯವರು 'ಅಲ್ರಯ್ಯ ಮನೇಲಿ 3-4 ಮಂದಿ ಡಾಕ್ಟರ್‌ಗಳಿದ್ದು ನೀವಿದನ್ನ ಆ ಹೆಂಡದ್ರವಿಗೆ ಯಾಕೆ ಕೊಡ್ತೀರಾ' ಅಂದುಬಿಟ್ಟು ನನ್ನ ತಲೆಗೇ ಈ ನರ್ಸಿಂಗ್ ಹೋಂ ಮ್ಯಾನೇಜ್‌ಮೆಂಟ್ ಕಟ್ಟಿಬಿಟ್ರು."

30 ಕೋಟಿ ಆಸ್ತಿ: "ನಮ್ಮ ಮಕ್ಕಳ ಭವಿಷ್ಯಕ್ಕೇಂತ....."

ಡಾ. ರಮೇಶ್ ತಮ್ಮ ಮೈನಿಂಗ್ ವ್ಯಾಪಾರದ ಬಗ್ಗೆ ಸಮಜಾಯಿಷಿ ನೀಡಿದ ಮೇಲೆ ಹಿಂದಿನ ದಿನವಷ್ಟೇ 'ಲಂಕೇಶ್'ನಲ್ಲೇ ಪ್ರಪ್ರಥಮವಾಗಿ ಬೆಳಕಿಗೆ ಬಂದ ಕೆ.ಆರ್. ಪುರಂ ಹೋಬಳಿಯ 30 ಕೋಟಿ ರೂಪಾಯಿ ಆಸ್ತಿ ಖರೀದಿ ವಹಿವಾಟಿನತ್ತ ಅವರ ಆತ್ಮನಿವೇದನೆ ಶುರುವಾಯ್ತು:

"ಸಾರ್ ನಾವು 6 ಜನ ಮಾಜಿ ಪ್ರಧಾನಿಯವರ ಮಕ್ಕಳಾಗಿ ತಲಾ ಇಪ್ಪತ್ತೈದು-ಇಪ್ಪತ್ತೈದು ಲಕ್ಷ ಶೇರು ಹಣ ತೊಡಗಿಸೋವಷ್ಟು ಯೋಗ್ಯತೆ ಇಲ್ಲಾಂದ್ರೆ ಹ್ಯಾಗೆ ಸಾರ್.....?!"

"ಡಾ. ರಮೇಶ್‌ರವರೇ ನೀವುಗಳು ಎಲ್ಲರೂ ಒಟ್ಟಿಗೆ ಸೇರಿ ಪಾಲುದಾರಿಕೆಯಲ್ಲಿ ಆಸ್ತಿ ಖರೀದಿಸೋದ್ರಲ್ಲೇನೂ ತಪ್ಪಿಲ್ಲ, ಆದರೆ ಇಂತಹ ಕೋಟ್ಯಂತರ ರೂಪಾಯಿ ದುಬಾರಿ ಆಸ್ತಿ ಖರೀದಿಗೆ ನಿಮ್ಮ ಕುಮಾರಣ್ಣ ಸಿ.ಎಂ. ಆಗ್ತಿರೋ ಹಾಗೇನೇ ನಿಮ್ಮಗಳಿಗೆ ಈ ಪರಿ ಶಾಕಷ್ಟು ಬಂತೂಂದ್ರೆ ಜನ ಏನಂದುಕೊಂಡಾರು? ಇದು ಉಚಿತ್ಯದ ಪ್ರಶ್ನೆ ಅಲ್ಲವೆ?"

"ನೋಡಿ ಸಾರ್ ನಾವು ಈ ಪ್ರಾಪರ್ಟಿ ಖರೀದಿಗೆ 2005 ರ ಜೂನ್‌ನಲ್ಲೇ ಅಗ್ರಿಮೆಂಟ್ ಮಾಡಿಕೊಂಡ್ವಿ... ಅಲ್ಲಿಂದ ಇಲ್ಲೀವರೆಗೂ ತಿಂಗಳಿಗೆ 55 ಲಕ್ಷ ರೂ. ಬಾಡಿಗೆ ದರದಲ್ಲಿ 10 ತಿಂಗಳ ಒಟ್ಟು ಬಾಡಿಗೇನೂ ಮಾರ್ಜಿನ್ ಮನಿ ಅಂತ ತೋರ್ಸಿ ಕರ್ನಾಟಕ ಬ್ಯಾಂಕಿನಿಂದ 33 ಕೋಟಿ ರೂ. ಸಾಲ ಮಂಜೂರು ಮಾಡಿಸಿಕೊಂಡ್ವಿ.... ರಿಜಿಸ್ಟ್ರೇಷನ್‌ಗೆ ಬೇಕಾದ 3 ಕೋಟಿ 3 ಲಕ್ಷ ರೂಪಾಯಿನೂ ಕೂಡ ಬ್ಯಾಂಕ್ ಸಾಲದಿಂದಲೇ ಕಟ್ಟಿದ್ವಿ...."

"ಆ ಆಸ್ತಿಯ ಒಟ್ಟು ಗಾತ್ರ ಎಷ್ಟು ಡಾಕ್ಟರೆ? ಅದರ ಮಾಲೀಕರು ಯಾರಿದ್ರು?"

ರೇಶ್ಮೆ

"ನೋಡಿ ಸಾರ್.... ನಾವು 6 ಜನ ತಲಾ 30 ಸಾವಿರ ಚದರಡಿ ತರ ಒಟ್ಟು 1 ಲಕ್ಷ 80 ಸಾವಿರ ಚದರಡಿಯಷ್ಟು ಈ ಪ್ರಾಪರ್ಟಿ ಬರುತ್ತೆ.... ನಾವು ಅದನ್ನು ಖರೀದಿ ಮಾಡಿದ್ದು RMZ ಬಿಲ್ಡರ್ಸ್‌ನವರಿಂದ...."

"ನಮ್ಮ ಭಾವ 15 ಲಕ್ಷ IT ಕಟ್ತಾರೆ"

"ಡಾ. ರಮೇಶ್‌ರವರೇ ಈ ಆಸ್ತಿ ಖರೀದಿದಾರರ ಪೈಕಿ ನೀವೊಬ್ಬರನ್ನು ಹೊರತುಪಡಿಸಿದರೆ ಉಳಿದವರೆಲ್ಲ ನಿಮ್ಮ ಕುಟುಂಬದ ಹೆಣ್ಣುಮಕ್ಕಳೇ ಇದ್ದಾರಲ್ಲವ.... ಯಾವುದೇ ವೃತ್ತಿವಂತರಲ್ಲದ, ಕೇವಲ ಗೃಹಿಣಿಯರಾಗಿರೋ ನಿಮ್ಮ ಸೋದರಿಯರು, ಅತ್ತಿಗೆಯವರಿಗೆ ಈ ಪರಿ ವರಮಾನ ಎಲ್ಲಿಂದ ಬರಲಿಕ್ಕೆ ಸಾಧ್ಯ ಹೇಳಿ?"

"ಸಾರ್.... ನಮ್ಮ ಬ್ರದರ್-ಇನ್-ಲಾ ವರ್ಷಕ್ಕೆ 15 ಲಕ್ಷ ರೂ. ಇನ್‌ಕಮ್ ಟ್ಯಾಕ್ಸ್ ಕಟ್ತಾರೆ ಸಾರ್.... ಅವರಿಗೆ 25 ಲಕ್ಷ ಕೊಡಲಿಕ್ಕಾಗಲ್ಲವಾ?"

"ಯಾರಂದ್ರಿ ನಿಮ್ಮ ಬ್ರದರ್-ಇನ್-ಲಾ ಡಾ. ರಮೇಶ್?"

"ಅದೇ ಸರ್ ಫೇಮಸ್ ಹಾರ್ಟ್ ಸ್ಪೆಷಲಿಸ್ಟು ಡಾ. ಸಿ.ಎನ್. ಮಂಜುನಾಥ್‌ರವರು."

"ಆದ್ರೆ ಅವರು ಜಯದೇವ ಸರ್ಕಾರಿ ಆಸ್ಪತ್ರೆಯ ಡೈರೆಕ್ಟರ್ ಅಲ್ಲವಾ?"

"ಇರಬಹುದು. ಅವರು ಹೆಸರುವಾಸಿ ಆಗಿರೋದ್ರಿಂದ ಒಳ್ಳೆಯ ಪ್ರಾಕ್ಟೀಸಿದೆ... ನಮ್ಮ ಇನ್ನೊಬ್ಬ ಬ್ರದರ್-ಇನ್-ಲಾ ಆರ್ಥೋಪೆಡಿಕ್ ಸರ್ಜನ್ ಡಾ. ಚಂದ್ರಶೇಖರ್‌ಗೂ ತಿಂಗಳಿಗೆ ಒಂದೆರಡು ಲಕ್ಷದವರೆಗೂ ಪ್ರಾಕ್ಟೀಸಿದೆ ಸಾರ್."

"ನೋ ನೋ ಡಾ. ರಮೇಶ್ ಅವರು ಕೂಡ ಸರ್ಕಾರಿ ಸಂಜಯ್‌ಗಾಂಧಿ ಆಸ್ಪತ್ರೆಯ ಮುಖ್ಯಸ್ಥರಲ್ಲವೇ?..."

"ಹೇ.... ಹೇ.... ಇರಬಹುದು ಸಾರ್... ಅವರುಗಳಿಗೆ ಪ್ರಾಕ್ಟೀಸು allowed ಇದೆಯಲ್ಲ..."

"ಕಡೆಯದಾಗಿ ಡಾಕ್ಟರೇ... ತಾವು ಇಷ್ಟೆಲ್ಲ ಬಿಜಿನೆಸ್‌ಗಳಲ್ಲಿ ತೊಡಗಿಸಿಕೊಂಡಿರೋದ್ರಿಂದ ಸಾಕಷ್ಟು ಆಸ್ತಿ-ಪಾಸ್ತಿ ಸಂಪಾದಿಸಿರಬಹುದಲ್ಲವಾ?"

"ಎಲ್ಲಿಂದ ಬಂತು ಸಾರ್.... ನನ್ನ ತಲೆ ಮೇಲೆ ಒಂದು 8 ಕೋಟಿ ರೂ. ಸಾಲಯಿದೆ... ಆದರೆ ಅದನ್ನೆಲ್ಲ ರೊಟೇಶನ್ ಮಾಡ್ತಾ ತೀರಿಸ್ತಾ ಬರ್ತಿದೀನಿ... ನಾನಿವಾಗ ವಾಸವಾಗಿರೋ ಮನೇನೂ ಸ್ವಂತದ್ದಲ್ಲ ಸಾರ್... ಅದೂ ರೆಂಟೆದ್ದೇ...."

ಡಾ. ರಮೇಶ್ ಮಾತನಾಡುತ್ತಲೇ ಇದ್ದರು... ಬೇಗ ಮುಗಿಸುವ ಮೂಡ್‌ನಲ್ಲೇ ಇರಲಿಲ್ಲ... ಮಧ್ಯಾಹ್ನವಾಗಲೇ 3 ಗಂಟೆ ದಾಟಿದ್ದರಿಂದ ಅನಿವಾರ್ಯವಾಗಿ ಹೊರಟು ನಿಂತರು....

ಮಾಜಿ ಪ್ರಧಾನಿಯ ಮುದ್ದು ಕುವರನ ಮುಗ್ಧತೆ, ಹಾಲಿ ಮುಖ್ಯಮಂತ್ರಿಯ ತಮ್ಮನೆಂಬ 'ಹೆಮ್ಮೆ' ಹಾಗು ಚಾಣಾಕ್ಷ ಬಿಜಿನೆಸ್‌ಮ್ಯಾನ್ ಎಂಬ ಚಾಲಾಕಿತನವೂ ಸಮ್ಮಿಳಿತವಾಗಿರುವ ಈ ಡಾ. ಎಚ್.ಡಿ. ರಮೇಶ್‌ರನ್ನು ಸಂದರ್ಶಿಸುತ್ತಿದ್ದರೆ ಯಾರ ನೆನಪಾಗುತ್ತದೆ ಗೊತ್ತಾ: ಸಂಜಯ್ ದತ್ ಅಭಿನಯಿಸಿದ ಸೂಪರ್ ಹಿಟ್ ಚಿತ್ರದ "ಡಾ. ಮುನ್ನಾಭಾಯಿ ಎಂ.ಬಿ.ಬಿ.ಎಸ್." ಖಾತ್ರಿ!"

▶▶▶▶▶

Encumberance (ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣ ಪತ್ರ) ಸರ್ಟಿಫಿಕೇಟುಗಳಲ್ಲಿ ದೊಡ್ಡನೆಕ್ಕುಂದಿ ಗ್ರಾಮದ ಸರ್ವೆ ನಂ. 74 ರಿಂದ 77 ರಲ್ಲಿರುವ ಪ್ರಶ್ನಿತ ಸ್ಥಿರಾಸ್ತಿಗಳನ್ನು ಪೆರಿವಾಲ್ ಗ್ರೂಪ್ ಆಫ್ ಕಂಪನಿಗಳ ಮಾಲೀಕತ್ವದಲ್ಲೇ ಇವೆ ಎಂದು ನಮೂದಿಸಲಾಗಿದೆ...

ಹಾಗಿದ್ದಲ್ಲಿ ಕುಮಾರಸ್ವಾಮಿಯವರ ಪರಿವಾರ ಖರೀದಿರಿಸಿರುವ ಇದೇ ಸರ್ವೆ ನಂಬರುಗಳಲ್ಲಿನ 36 ಕೋಟಿ ರೂ. ಆಸ್ತಿ ಯಾರದ್ದು?

24.3.06 ರಂದೇ ರಿಜಿಸ್ಟ್ರೇಷನ್ ಆದ ನಂತರವೂ ಮಾಲೀಕತ್ವದ ವರ್ಗಾವಣೆ ಏಕಾಗಿಲ್ಲ?

ಆರಿ... ಜೊತೆ ಆಗಸ್ಟ್ 2 ರಂದು ಶೇಷಾದ್ರಿಪುರಂ ಸಬ್‌ರಿಜಿಸ್ಟ್ರಾರ್ ದಾಖಲೆಗಳಲ್ಲಿ ಮಾತ್ರ ದಿಢೀರನೆ 23.3.06 ರಿಂದಲೇ ಗೌಡರ ಕುಟುಂಬದ ಹೆಸರುಗಳು ಕಾಣಿಸಿಕೊಂಡಿವೆಯಂತೆ...!

ಯಕ್ಷಪ್ರಶ್ನೆ!


33 ಕೋಟಿ ಸಾಲಕ್ಕೆ 36 ಕೋಟಿ ರೂ. ಮೌಲ್ಯದ ಆಸ್ತಿ ಒತ್ತುವರಿ ಮಾಡಿದರೆ ಸಾಕೆ? ಇದನ್ನೇ ಜನಾರ್ಧನ ಪೂಜಾರಿ ಯಕ್ಷಪ್ರಶ್ನೆ ಮೂಲಕ ಎತ್ತಿರುವುದು.

ಗೌಡರ ಕುಟುಂಬಕ್ಕೆ 33 ಕೋಟಿ ರೂ. ಒದಗಿಸಿದ ಕರ್ನಾಟಕ ಬ್ಯಾಂಕಿಗೆ ಹೆಚ್ಚುವರಿ ಕೊಲ್ಯಾಟೆರಲ್ ಸೆಕ್ಯೂರಿಟಿ (colateral security)ಗಳ ನೆರವು ದೊರೆಯುತ್ತಿರುವುದು 15 ಬೇನಾಮಿ ಖಾತೆದಾರರಿಂದ.

ಈ ಆಪದ್ಬಾಂಧವರು ಯಾರು?

ಅವರು ರಾಜಪರಿವಾರದ ರಕ್ತಸಂಬಂಧಿಕರೆ? ಅಥವಾ ಹಿತೈಷಿಗಳೇ?

ತೀರಾ ಇತ್ತೀಚಿನವರೆಗೂ ಪೆರಿವಾಲ್ ಕುಟುಂಬದ ಹೆಸರಿನಲ್ಲಿದ್ದ ಇದೇ ಆಸ್ತಿಯ ಮೇಲಿನ KSFC ಸಾಲ ಮತ್ತು ತದನಂತರ ಯೂನಿಯನ್ ಬ್ಯಾಂಕ್‌ನಿಂದ ಪಡೆಯಲಾದ 70 ಕೋಟಿ ರೂ. ಋಣಭಾರವನ್ನು ಕ್ಷಣಾರ್ಧದಲ್ಲಿ ತೀರಿಸಿ ಗೌಡರ ಪರಿವಾರಕ್ಕೆ ಈ ಆಸ್ತಿಯನ್ನು ಪರಭಾರೆ ಮಾಡಿದ ಮಹಾನುಭಾವರಾರು?



ಪ್ರಸ್ತುತ ಆಸ್ತಿ ಪೆರಿವಾಲ್‌ರವರದ್ದು ಎಂದು ತೋರಿಸುವ ದಾಖಲೆ



ಶೋಭಾ ಬನ್‌ಗಯೀ ಕರೋಡ್‌ಪತ್ನಿ

ರಾಜ್ಯದಲ್ಲಿ ಅಧಿಕಾರದಲ್ಲಿರುವ ಕೋ-ಜಾ ಸರ್ಕಾರದ ಸುತ್ತ ಗುಲುಗುಳ್ಳರ ಸಂತೆಯೇ ನೆರೆದಿದೆ. ದೊಡ್ಡ ಗೌಡರ ಪುತ್ರ ಕುಮಾರಣ್ಣ ರಾಜ್ಯದ ಮುಖ್ಯಮಂತ್ರಿಯಾಗು ತ್ತಿದ್ದಂತೆಯೇ ಕೀಳಿಗಿಳಿದ ಗೌಡರ ಕುಟುಂಬದ ಆಪ್ತೂ ಸಮಸ್ತರು ಬಳ್ಳಾರಿ ಮೈನ್ಸ್ ಧೂಳಿನ ಅಮೇಧ್ಯ ತಿಂದು ತೋರಬರಲು ತಿಣುಕಾಡುತ್ತಿದ್ದರೆ, ಗೌಡರ ಕುಟುಂಬಕ್ಕೆ ತಾವೇನು ಕಮ್ಮಿ ಇಲ್ಲ ಎಂದು ಉಪ-ಮುಖ್ಯಮಂತ್ರಿ ಯಡಿಯೂರಪ್ಪನವರ ಪರಿವಾರವು ಸಿಕ್ಕ-ಸಿಕ್ಕಲ್ಲೆಲ್ಲಾ ಕಾಸು ಮಾಡಲು ಶುರುವಿಟ್ಟುಕೊಂಡಿದೆ.

ಹೀಗೆ ಕಾಸು ಬಾಚುತ್ತಿರುವ ಯಡ್ಡಿ 'ಪರಿವಾರ'ದ ಮೊದಲ ಹೆಸರೇ ಎಂಎಲ್‌ಸಿ ಶೋಭಾ ಕರಂದ್ಲಾಜೆ. ಕಳೆದ ಜನವರಿಯಲ್ಲಿ ರಾಜ್ಯದಲ್ಲಿ ಸಂಭವಿಸಿದ 'ಕುಮಾರ ಸಂಭವ' ಡ್ರಾಮಾದಲ್ಲಿ ಯಡಿಯೂರಪ್ಪ ಕೋ-ಜಾ ಸರ್ಕಾರದ ಉಪಮುಖ್ಯಮಂತ್ರಿಯಾಗಿದ್ದೇ ತಡ.... ನೇರವಾಗಿಯೇ ದೀಲಿಗಿಳಿದ ಶೋಭಾ ಕರಂದ್ಲಾಜೆ, ಸರ್ಕಾರ ಕೇವಲ ಆರು ತಿಂಗಳು ಪೂರೈಸಿದ ಅವಧಿಯ ಲ್ಲಿಯೇ ಕೋಟಿ-ಕೋಟಿಗಳ ಒಡತಿಯಾಗಿದ್ದಾರೆ....

ಕೋ-ಜಾ ಸರ್ಕಾರದ ಸಚಿವರ ಖಾತೆಗಳ ಹಂಚಿಕೆ ಸಮಯದಲ್ಲಿಯೇ ರಚ್ಚೆಹಿಡಿದು ಹಣಕಾಸು, ಅಬಕಾರಿ, ಮೂಲಭೂತ ಸೌಕರ್ಯದಂತಹ ಮಹತ್ವದ ಖಾತೆಗಳನ್ನು ಪಡೆದುಕೊಂಡ ಯಡಿಯೂರಪ್ಪ ನಂತರ ತಮ್ಮ ಖಾತೆಯ ಎಲ್ಲಾ ದೀಲುಗಳನ್ನು ವಹಿಸಿದ್ದು ತಮ್ಮ ಪ್ರೀತಿಯ ಪುತ್ರಿ(?) ಕರಂದ್ಲಾಜೆ, ಪುತ್ರರಾದ ರಾಘ ವೇಂದ್ರ, ವಿಜೇಂದ್ರ,

ಲಕ್ಷ್ಮೀಸಾಗರ ಸ್ವಾಮಿಗೌಡ

ಅಳಿಯಂದಿರಾದ ಸುರೇಶ್ ಮತ್ತು ಸೋಹನ್ ಕುಮಾರ್‌ಗೆ....

ಯಡ್ಡಿಯಿಂದ ಗ್ರೀನ್ ಸಿಗ್ನಲ್ ಪಡೆದು ಪದ್ಮಾಸನ ಹಾಕಿ ಊಟಕ್ಕೆ ಕುಳಿತ ಶೋಭಾ ಮೇಡಮ್ಮು ಬೆಂಗಳೂರು, ನೆಲಮಂಗಲ, ಪುತ್ತೂರು, ಮಂಗಳೂರು.... ಹೀಗೆ ಎಲ್ಲೆಂದರಲ್ಲಿ ಭರ್ಜರಿ ಆಸ್ತಿ ಮಾಡಿಕೊಳ್ಳುತ್ತಿದ್ದಾರೆ.

ಅಂದು ಸ್ಟಾಫ್‌ನರ್ಸ್.... ಇಂದು ಕರೋಡ್‌ಪತ್ನಿ...

ಕೋ-ಜಾ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೋಟಿ-ಕೋಟಿಗಳ ಆಸ್ತಿ, ಹಣ ಹೊಂದಿರುವ ಶೋಭಾ ಕರಂದ್ಲಾಜೆ 11 ವರ್ಷಗಳ ಹಿಂದೆ ಮಣಿಪಾಲದ ಕೆಎಂಸಿಯಲ್ಲಿ ಆರ್ಡಿನರಿ ಸ್ಟಾಫ್‌ನರ್ಸ್ ಆಗಿದ್ದಾಕೆ. ಕೆಎಂಸಿ ಕಾಲೇಜಿನಲ್ಲಿ ಕೆಲಸದಲ್ಲಿದ್ದಾಗ ಅಲ್ಲಿನ ಉಪನ್ಯಾಸಕರೊಬ್ಬರೊಂದಿಗೆ ಅದೇನೋ ಯಡವಟ್ಟು ಮಾಡಿಕೊಂಡು, ಕಾಲೇಜಿನಿಂದ "ಗೌರವಾನ್ವಿತವಾಗಿ" ಹೊರದಬ್ಬಿಸಿಕೊಂಡ ಕರಂದ್ಲಾಜೆ, ಆನಂತರ ಕಾಣಿಸಿ ಕೊಂಡಿದ್ದು ಉಡುಪಿಯ ಬಿಜೆಪಿ ಕಚೇರಿಯ ಪಡಸಾಲೆ ಯಲ್ಲಿ.

ಬಿಜೆಪಿ ಪಡಸಾಲೆಯಲ್ಲಿ ಕಾಣಿಸಿಕೊಂಡ ಶೋಭಾ ಕರಂದ್ಲಾಜೆ ರಾಜ್ಯ ಬಿಜೆಪಿ ಉಪಾಧ್ಯಕ್ಷ ಎ.ಜಿ. ಕೊಡಿಗಿ ಯವರ ಕಣ್ಣಿಗೆ ಬಿದ್ದಿದ್ದೇ ತಡ... ಅವರು ಈಕೆಯನ್ನು ಸಾಗಹಾಕಿದ್ದು ಮಲ್ಲೇಶ್ವರಂನಲ್ಲಿರುವ ರಾಜ್ಯ ಬಿಜೆಪಿಯ ಕಚೇರಿಗೆ.

ಆರಂಭದಲ್ಲಿ ಎರಡು ಸಾವಿರ ರೂಪಾಯಿ ತಿಂಗಳ ಸಂಬಳಕ್ಕೆ ಬಿಜೆಪಿ ಕಚೇರಿಯಲ್ಲಿ ಕೆಲಸಕ್ಕೆ ಸೇರಿಕೊಂಡ ಕರಂದ್ಲಾಜೆ ಅಂದು ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಯಡಿಯೂರಪ್ಪನವರ ಕೃಪೆಯಿಂದ ರಾಜ್ಯ ಮಹಿಳಾ ಮೋರ್ಚಾದ ಕಾರ್ಯದರ್ಶಿಯಾದರು. ಆನಂತರ ಅವರ ಅಂತಸ್ತು, ಸ್ಥಾನಮಾನಗಳು ಬದಲಾಗಿವೆ.

ಕಾರ್ಯದರ್ಶಿಯಾದ ಪ್ರಾರಂಭದಲ್ಲಿ ಯಡಿಯೂರಪ್ಪ ನವರೇ ಆಸ್ಥೆ ವಹಿಸಿ ಈಕೆಯನ್ನು ಎಲ್‌ಐಸಿ ಏಜಂಟ್ ಮಾಡಿಸಿದ್ದಾರೆ. ರಾಜ್ಯದ ಬೇರೆ ಜಿಲ್ಲೆಗಳಿಗೆ ಪ್ರವಾಸ ಹೋದ ಕಾಲದಲ್ಲಿ ಪಕ್ಷದ ಪ್ರಮುಖರಿಂದ ಹತ್ತಾರು ಲಕ್ಷಗಳ ಪಾಲಿಸಿ ಕೊಡಿಸಿದ್ದಾರೆ. ಹೀಗೆ ಪಾಲಿಸಿ ಕೊಡಿ ಸುತ್ತಲೇ ಆಕೆಯ ಜೀವನಕ್ಕೊಂದು ದಾರಿ ಮಾಡಿ ಕೊಟ್ಟಾಗ ಬಿಜೆಪಿಯ ನಾಯಕರಲ್ಲದೆ, ಸ್ವತಃ ಯಡಿ ಯೂರಪ್ಪನವರ ಕುಟುಂಬದವರು ಸಹ ಇದನ್ನು ವಿರೋ ಧಿಸಲಿಲ್ಲ. ಆದರೆ ಯಾವಾಗ ಯಡಿಯೂರಪ್ಪ 2004ರ ವಿಧಾನ ಪರಿಷತ್ ಚುನಾವಣೆಯಲ್ಲಿ ಕರಂದ್ಲಾಜೆಯನ್ನು ಎಂಎಲ್‌ಸಿ ಕ್ಯಾಂಡಿಡೇಟ್ ಮಾಡಿದರೋ.... ಆಗಲೇ ಬಿಜೆಪಿಯ ಪಾಳಯದಲ್ಲಿ ಗುಸು-ಗುಸು ಆರಂಭವಾಗಿದ್ದು.

ಹದಿನೈದು ದಿನಕ್ಕೆ ಬಿಡಿಎ ಸೈಟು!

ಎಂಎಲ್‌ಸಿಯಾದ ಮರುದಿನವೇ ಹಿಂದಿನ ಮುಖ್ಯ ಮಂತ್ರಿ ಧರಂಸಿಂಗರಿಗೆ ದುಂಬಾಲು ಬಿದ್ದ ಯಡಿಯೂರಪ್ಪ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆ ಎಚ್.ಎಸ್.ಆರ್. ಲೇಔಟನಲ್ಲಿ 50x80 ವಿಸ್ತೀರ್ಣದ ಬಿಡಿಎ ನಿವೇಶನವನ್ನು ಕೊಡಿಸಿಯೇ ಬಿಟ್ಟರು.

ಬಿಡಿಎನಿಂದ 8 ಲಕ್ಷದ 60 ಸಾವಿರ ರೂಪಾಯಿಗೆ 'ಜಿ' ಕ್ಯಾಟಗರಿಯ ನಿವೇಶನ ಪಡೆದ ಕರಂದ್ಲಾಜೆ, ಹದಿನೈದು ದಿನದಲ್ಲಿ ಅದನ್ನು ಮಾರಾಟ ಮಾಡಿದ್ದು 1.5 ಕೋಟಿ ರೂಪಾಯಿಗೆ... ಈ ಹಣದಿಂದ ಕುಮಾರಕೃಪ ಗೆಸ್ಟ್‌ಹೌಸ್ ಹಿಂಭಾಗದ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಖರೀದಿಸಿದ್ದೀನಿ ಎಂದು ಶೋಭಾ ಹೇಳುತ್ತಾರೆ. ವಾಸ್ತವದಲ್ಲಿ ಇದನ್ನು ಕೊಡಿಸಿದ್ದು ಮಾಲೂರಿನ ಶಾಸಕ ಕಂ ರಿಯಲ್ ಎಸ್ಟೇಟ್ ಧಗಾಕೋರ ಎಸ್.ಎನ್. ಕೃಷ್ಣಯ್ಯಶೆಟ್ಟಿ ಎಂಬುದು ಬಿಜೆಪಿ ವಲಯದಲ್ಲಿ ಬಹಿರಂಗವಾಗಿರುವ ಗುಟ್ಟು.



ಶೋಭಾ ಖರೀದಿಸಿರುವ ಅಪಾರ್ಟ್‌ಮೆಂಟ್

ಕಿಚನ್‌ಗೆ ಎಂಟ್ರಿ....

ಈ ಅವಧಿಯಲ್ಲಿಯೇ ಯಡ್ಡಿಯ ಅಡುಗೆ ಮನೆಗೆ ಎಂಟ್ರಿ ಪಡೆದುಕೊಂಡ ಕರಂದ್ಲಾಜೆ, ಕೆಲದಿನಗಳಲ್ಲಿಯೇ ಮನೆಯ ವ್ಯವಹಾರವನ್ನೆಲ್ಲಾ ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಾಗ, ಯಡ್ಡಿಯ ಮಕ್ಕಳು ಮತ್ತು ಈಕೆಯ ನಡುವೆ ಶರಂಪರ ರಾದ್ಧಾಂತವಾಗಿದೆ. ಆ ಸಂದರ್ಭದಲ್ಲಿ ಸ್ವತಃ ಯಡಿಯೂರಪ್ಪನರೇ ಮಕ್ಕಳನ್ನು ಗದರಿಸಿ ಬಾಯಿ ಮುಚ್ಚಿಸಿದ್ದಾರೆ.

ಡಿಫ್ಯಾಕ್ಟೋ ಡಿಸಿಎಂ

ಧರಂಸಿಂಗ್ ಸರ್ಕಾರ ಉರುಳಿ, ಜೆಡಿಎಸ್, ಬಿಜೆಪಿ ನೇತೃತ್ವದ ಕೋ-ಜಾ ಸರ್ಕಾರದಲ್ಲಿ ಯಡಿಯೂರಪ್ಪ ಉಪಮುಖ್ಯಮಂತ್ರಿಯಾದರೂ, ಅವರ ಖಾತೆಯ ನಿಯಂತ್ರಣವಿರುವುದು ಕರಂದ್ಲಾಜೆಯ ಕೈಯಲ್ಲಿ. ಇವತ್ತು ಯಡಿ ಯೂರಪ್ಪನವರ ಬಳಿ ಏನೇ ಕೆಲಸವಾಗ ಬೇಕಾದರೂ ಕರಂದ್ಲಾಜೆಯ ಗ್ರೀನ್‌ಸಿಗ್ನಲ್ ಬೇಕೇ ಬೇಕು! ಯಾವುದೇ ಫೈಲು ವಿಲೇವಾರಿಯಾಗಲೂ ಅದಕ್ಕೆ ಈಕೆಯ ಚೋಟಾ ಸಹಿ ಬೀಳಲೇಬೇಕು.

ಒಂದರ್ಥದಲ್ಲಿ ಡಿಫ್ಯಾಕ್ಟೋ ಡಿಸಿಎಂ ಆಗಿ ರುವ ಕರಂದ್ಲಾಜೆ ಪರ್ಸೆಂಟೇಜ್ ವ್ಯವಹಾರದಲ್ಲಿ ಪಕ್ಕಾ ವ್ಯವಹಾರಸ್ಥೆ ಎಂಬುದನ್ನು ಈಗಾಗಲೇ ತೋರಿಸಿದ್ದಾರೆ. ಇವತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಯಾವುದೇ ಎಲ್.ಓ.ಸಿ. ಬಿಡುಗಡೆಯಾಗಬೇಕಾದರೂ ಗುತ್ತಿಗೆದಾರರು ಕರಂದ್ಲಾಜೆಯ ಬಳಿ 10 ಪರ್ಸೆಂಟ್ ಕಪ್ಪ ಮಡಗಲೇಬೇಕು. ಯಡಿ ಯೂರಪ್ಪ ಉಪಮುಖ್ಯಮಂತ್ರಿಯಾಗಿ, ಹಣಕಾಸು ಖಾತೆ ತಮ್ಮಲ್ಲಿಯೇ ಉಳಿಸಿಕೊಂಡ ಬಳಿಕ, ಕೇವಲ ಎಲ್.ಓ.ಸಿ. ಬಿಡುಗಡೆಯಲ್ಲಿಯೇ ಕರಂದ್ಲಾಜೆ 5 ರಿಂದ 6 ಕೋಟಿ ಎತ್ತುವಳಿ ಮಾಡಿದ್ದಾರೆ.

(12 ನೇ ಪುಟಕ್ಕೆ)

ಯಡ್ಡಿಯ ಹೊಸ ಸ್ಟೈಲ್: ಯಾರು ತಿಂದರೂ ಓಕೆ!

ದೇವೇಗೌಡರಿಗೆ, ಅನಂತ್‌ಕುಮಾರ್‌ಗೆ ತಾನು ಹಣ ನೀಡಿರುವುದಾಗಿ ವಿನಿವಿಂಕ್ ಶಾಸ್ತ್ರಿ ಮಂಪರು ಪರೀಕ್ಷೆಯಲ್ಲಿ ಹೇಳುವ ಮೂಲಕ ರಾಜ್ಯ ರಾಜಕೀಯದಲ್ಲಿ ಮತ್ತೊಂದಿಷ್ಟು ಕಿಡಿ ಹೊತ್ತಿಸಿದ್ದಾನೆ.

ಆದರೆ ಈಗ ಗಣಿ ಲಂಚ ಪ್ರಕರಣ ಬಯಲಾದರೆ ತನ್ನ ಡಿಸಿಎಂ ಪಟ್ಟ ಎಲ್ಲಿ ಹೋಗುವುದೋ, ಆದರಿಂದ ಶೋಭಾ ಕರಂದ್ಲಾಜೆಗೆ ಬೇಜಾರುಗುವುದೋ ಎಂದು ಅಧಿಕಾರವನ್ನು ತಬ್ಬಿಕೊಂಡಿರುವ ಯಡಿಯೂರಪ್ಪನವರು ಲಂಚದ ಹಣ ಸ್ವೀಕಾರ ಕುರಿತು ಹೊಸ ವ್ಯಾಖ್ಯಾನ ಶುರು ಮಾಡಿದ್ದಾರೆ.



ವಿನ್‌ವಿಂಕ್ ಶಾಸ್ತ್ರಿ

ಅವರ ಪ್ರಕಾರ ವಿನಿವಿಂಕ್ ಶಾಸ್ತ್ರಿಯ ಹಗರಣ ಗೊತ್ತಾಗುವುದಕ್ಕೂ ಮೊದಲು ದೇವೇಗೌಡ, ಅನಂತ್ ಕುಮಾರ್ ಹಣ ಪಡೆದಿದ್ದರೆ ತಪ್ಪಲ್ಲವಂತೆ.

ಜನಾರ್ಧನ್ ರೆಡ್ಡಿಯ ಮೂಲಕ ತಮ್ಮ ಸರ್ಕಾರವನ್ನು ಅಲ್ಲಾಡಿಸಲು ಯತ್ನಿಸುತ್ತಿರುವ ಅನಂತ್ ಕುಮಾರ್‌ಗೆ ವಿನಿವಿಂಕ್ ಶಾಸ್ತ್ರಿ 5 ಲಕ್ಷ ನೀಡಿದ್ದು ಯಡ್ಡಿಗೆ ಮುಖ್ಯವಾಗುವುದಿಲ್ಲ. ಅನಂತ್‌ಕುಮಾರ್ ಪ್ರಕರಣವೂ ಮುಚ್ಚಿಹೋಗಲಿ, ಗಣಿ ಪ್ರಕರಣವೂ ಮುಚ್ಚಿ ಹೋಗಲಿ ಕೊನೆಯಲ್ಲಿ ತನ್ನ ಡಿಸಿಎಂ ಪಟ್ಟ, ಅದರ ಜೊತೆಗೆ ಶೋಭಾ ಕರಂದ್ಲಾಜೆ ಮಾತ್ರ ಉಳಿದರೆ ಸಾಕು ಎನ್ನುವ ಹೊಸ ವರಸೆ ಶುರು ಮಾಡಿದ್ದಾರೆ ಯಡ್ಡಿ.

ಅಂದರೆ ಯಾರೇ ಎಷ್ಟೇ ತಿಂದರೂ ಮನ್ನಾ ಮಾಡಿ ಎನ್ನುತ್ತಾ ತನ್ನ ಅಧಿಕಾರ ಮಾತ್ರ ಕೈಜಾರಬಾರದು ಎಂಬುದು ಯಡ್ಡಿಯ ಪರಮ ನೀಚತನವಲ್ಲವೇ?

ಬಿಜೆಪಿಯಲ್ಲಿ ಶೋಭಾ ಸಿಂಡ್ರೋಮ್!

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕೋ-ಜಾ ಸರ್ಕಾರದ ಪ್ರಮುಖ ಪಕ್ಷ ಜೆಡಿಎಸ್‌ಗೆ 'ಗಣಿಕಪ್ಪ' ಕಾಟವಾದರೆ, ಮೈತ್ರಿ ಪಕ್ಷ ಬಿಜೆಪಿಯ ನಾಯಕರಿಗೆ ಶೋಭಾ 'ಸಿಂಡ್ರೋಮ್' ಕಾಡುತ್ತಿದೆ.

ಎರಡು ವರ್ಷದ ಕೆಳಗೆ ಶೋಭಾ 'ಸಿಂಡ್ರೋಮ್'ಗೆ ತುತ್ತಾದ ಉಪಮುಖ್ಯಮಂತ್ರಿ ಯಡಿಯೂರಪ್ಪ ಕೊಲ್ಲೂರು, ಕಟೀಲು, ಕೇರಳದ ಪಲಚೇರಿಯ ರಕ್ತ ಕಾಳೇಶ್ವರಿಯ ಮುಂದೆ ಜ್ಯೋತಿಷಿಗಳು, ಹಲ್ಲಿ ಶಕುನದವರೆದುರು ಭಾಗವಹಿಸಿದ್ದು ಹಳೆಯ ಸುದ್ದಿ.

ತಾಜಾ ಸುದ್ದಿಯೆಂದರೆ, ಕೋ-ಜಾ ಸರ್ಕಾರದಲ್ಲಿ ತನಗೆ ಮಂತ್ರಿ ಪದವಿ ಕೈ ತಪ್ಪಿದ್ದಕ್ಕೆ ಭಿನ್ನಮತೀಯರೇ ಕಾರಣ ಎಂದುಕೊಂಡಿರುವ ಕರಂದ್ಲಾಜೆ, ಭಿನ್ನಮತೀಯರಿಗೆ ಬುದ್ಧಿ ಕಲಿಸಲು ಪುತ್ತೂರಿನ ಭೂತರಾಯನ ಮೊರೆ ಹೋಗಿದ್ದಾರಂತೆ.



ಇದರಿಂದಾಗಿಯೇ ಬಿಜೆಪಿಯ ಭಿನ್ನಮತೀಯರಾದ ಅರವಿಂದ ಲಿಂಬಾವಳಿ, ಮುಖ್ಯಮಂತ್ರಿ ಚಂದ್ರು, ವಾಮನಾಚಾರಿ, ಯತ್ನಾಳ್ ಮುಂತಾದ ಚೆಡ್ಡಿಶೂರರು 'ಶೋಭಾ ಸಿಂಡ್ರೋಮ್'ಗೊಳಗಾಗಿ ಚಿಕಿತ್ಸೆಗಾಗಿ ಸಂಘ ಪರಿವಾರದ ಪ್ರಮುಖ ಮೈ.ಚ. ಜಯದೇವ್ ಮೊರೆ ಹೋಗಿದ್ದಾರೆ.

ಆದರೆ ಕುಲಬಾಂಧವನಿಗೆ ಅನಿರೀಕ್ಷಿತವಾಗಿ ಉಪಮುಖ್ಯಮಂತ್ರಿ ಪದವಿ ಬಂದಿರುವಾಗ, ಯಡ್ಡಿ-ಕರಂದ್ಲಾಜೆ ವಿಚಾರದಲ್ಲಿ ತಲೆ ತೂರಿಸುವುದು ಬೇಡ ಎಂದು ನಿರ್ಧರಿಸಿರುವ ಚೆಡ್ಡಿ ಜಯದೇವ್ ಭಿನ್ನಮತೀಯರು ದೂರು ಹೇಳಲು ಬಂದರೆ, ಕೇಶವಕೃಪದ ಕಚೇರಿಯಲ್ಲಿ 'ಮೌನವ್ರತ'ದ ಫಲಕ ಹಾಕಿಸಿ, ಬಂದವರನ್ನು ತಮ್ಮ ಸಹಾಯಕರ ಮೂಲಕ ವಾಪಸ್ಸು ಕಳಿಸುತ್ತಿದ್ದಾರೆ.

ಯಡ್ಡಿ ಮನೆಯಲ್ಲಿ ರಾದ್ಧಾಂತ

ಉಪಮುಖ್ಯಮಂತ್ರಿಯಾದ ತಕ್ಷಣ, ತಮ್ಮ ಪುತ್ರರು, ಹೆಣ್ಣುಮಕ್ಕಳು, ಅಳಿಯಂದಿರನ್ನು ರೇಸ್‌ಕೋರ್ಸ್ ರಸ್ತೆಯ ಅಧಿಕೃತ ನಿವಾಸಕ್ಕೆ ಕರೆಸಿಕೊಂಡ ಯಡಿಯೂರಪ್ಪ ಯಾರ್‍ಯಾರು, ಯಾವ್ಯಾವ ದೀಲು ನೋಡಿಕೊಳ್ಳಬೇಕೆಂದು ಪಾಲು ಹಂಚಿಬಿಟ್ಟರು.

ಹಿರಿಯ ಮಗ ರಾಘವೇಂದ್ರ ಮತ್ತು ಅಳಿಯ ಸುರೇಶ್‌ಗೆ ತವರು ಜಿಲ್ಲೆ ಶಿವಮೊಗ್ಗದ ದೀಲಿಂಗ್ ವಹಿಸಿಕೊಟ್ಟ ಯಡ್ಡಿ, ಕಿರಿಯ ಮಗ ವಿಜೇಂದ್ರ ಹಾಗೂ ಮತ್ತೊರ್ವ ಅಳಿಯ ಸೋಹನ್ ಕುಮಾರ್‌ಗೆ ವಹಿಸಿದ್ದು ಬೆಂಗಳೂರಿನ ದೀಲುಗಳನ್ನು.

ತಮ್ಮ ತಂದೆಯಿಂದಲೇ ಅಧಿಕೃತವಾಗಿ ದೀಲಿಂಗ್ ದೀಡ್ ಪಡೆದುಕೊಂಡ ರಾಘವೇಂದ್ರ ಮತ್ತು ಅಳಿಯ ಸುರೇಶ ಶಿವಮೊಗ್ಗದಲ್ಲಿ ವಸೂಲಿ ಧಂದೆ ಆರಂಭಿಸಿದರೆ, ಬೆಂಗಳೂರಿನ ದೀಲು ಪಡೆದಿದ್ದ ವಿಜೇಂದ್ರ ಮತ್ತು ಸೋಹನ್ ಕುಮಾರ್ ಕೈಗೆ ಸಿಕ್ಕಿದ್ದು ತಿರುಪತಿ ಪ್ರಸಾದ.



ವಿಜೇಂದ್ರ

ಕಾರಣ, ಯಡಿಯೂರಪ್ಪ ಬೆಂಗಳೂರಿನ ವ್ಯವಹಾರವನ್ನು ಇವರಿಗೆ ವಹಿಸಿದ್ದರೂ ಅಧಿಕೃತವಾಗಿ ಎಲ್ಲಾ ವ್ಯವಹಾರ ನಡೆಯುತ್ತಿದ್ದುದು ಕರಂದ್ಲಾಜೆಯ ಮೂಗಿನ ನೇರಕ್ಕೆ.

ಹಾಗಾಗಿಯೇ ಈಕೆಯ ವಿರುದ್ಧ ಬಂಡಾಯವೆದ್ದ ವಿಜೇಂದ್ರ ಕರಂದ್ಲಾಜೆಗೆ ಮನೆಯೊಳಕ್ಕೆ ಕಾಲಿಡದಂತೆ ತಾಕೀತು ಮಾಡಿದ್ದಾನೆ. ವಿಜೇಂದ್ರನಿಂದ ಅಪಮಾನಕ್ಕೊಳಗಾದ ಕರಂದ್ಲಾಜೆ ಯಡ್ಡಿಯ ಕಿವಿ ಕಚ್ಚಿದ್ದೇ ತಡ, ಕೆಂಡಾಮಂಡಲವಾದ ಯಡ್ಡಿ ಪುತ್ರ ವಿಜೇಂದ್ರನಿಗೆ ಲೆಫ್ಟು-ರೈಟು ತೆಗೆದುಕೊಂಡಿದ್ದಾರೆ.

ಇಷ್ಟಾಗುತ್ತಿದ್ದಂತೆಯೇ ಕಕ್ಕಾಬಿಕ್ಕಿಯಾದ ವಿಜೇಂದ್ರ ಮತ್ತು ಅಳಿಯ ಸೋಹನ್ ಬುದ್ಧಿ ಕಲಿಸಲು ಸಮಯ ಕಾಯುತ್ತಿದ್ದಾರೆ!

ದನಾರ್ಧನ ರೆಡ್ಡಿಯ ಓಬಳಾಪುರಂ ಮೈನು, ...ಷದ ಕರುಣಾಕರ ರೆಡ್ಡಿಯ ರಾಜಾಪುರ ಮೈನು, ...ತಿ ಶ್ರೀರಾಮುಲುನ ಬೇನಾಮಿ ಮೈನು, ಅನಿಲ್ ...ವನ ಸಂಡೂರು ಮೈನು, ಬಾಗಲಕೋಟೆ ಶಾಸಕ ...ತಿ ಮತ್ತೊಂದು ಮೈನು, ಹುನಗುಂದ ಎಮ್ಮೆಲ್ಲೆ ...ಪ್ಪನಗೌಡನಿಗೊಂದು ಮೈನು ಮತ್ತು ಯಡ್ಡಿಯ ...ಮಾಪ್ತೆ ಶೋಭಾ ಕರಂದ್ಲಾಜೆಯ ಅಣ್ಣನಿಗೊಂದು ...ನು....

ಹೀಗೆ ಶುರುವಾಗುತ್ತದೆ ಬಿಜೆಪಿಯ ಮೈನ್ಸ್ ...ರಾಣ. ಮೈನ್ಸ್ ಮಾಲೀಕರಿಂದ ಮುಖ್ಯಮಂತ್ರಿಗಳು ...ರೈವತ್ತು ಕೋಟಿ ಲಂಚ ಕಿತ್ತಿದ್ದಾರೆಂದು ಎಮ್ಮೆಲ್ಸಿ ...ನಾರ್ಧನ ರೆಡ್ಡಿ ಬೊಬ್ಬೆ ಹಾಕಿದ್ದೇ ಉಪಮುಖ್ಯಮಂತ್ರಿ ...ಡಿಯೂರಪ್ಪನವರ ಹೊಟ್ಟೆಯೊಳಗೆ ಖಾರ ...ಸಿದಂತಾಗುವುದಕ್ಕೂ ಕಾರಣಗಳಿವೆ.


ಯಡಿಯೂರಪ್ಪ


ಕರುಣಾಕರ ರೆಡ್ಡಿ


ಶ್ರೀರಾಮುಲು

ಶೋಭಕ್ಕನಿಗೆ ಯಡ್ಡಿಯ ಪ್ರೇಮದ ಕಾಣಿಕೆ!

ಬಿಜೆಪಿಯ ಅದಿರುಗಳ್ಳರು

ಕೋ-ಜಾ ಸರ್ಕಾರ ಬರುತ್ತಿದ್ದಂತೆ ಎಮ್ಮೆಲ್ಲೇ ಧರ್ಮೇಗೌಡರು ತನ್ನ ತಮ್ಮ ಭೋಜೇಗೌಡನನ್ನು ಮುಂದೆ ಬಿಟ್ಟು ಯಡ್ಡಿಯ ಜೊತೆ ದೀಲಿ ಗಿಳಿದರು. ಅದಕ್ಕೆ ಯಡ್ಡಿ ಸೂಚಿಸಿದ ಪರಿಹಾರೋಪಾಯವೆಂದರೆ ರಾಷ್ಟ್ರನಾಯಕ ವೆಂಕಯ್ಯನಾಯ್ಡುವಿನ ನೆಂಟ ಆಂಧ್ರದ ಬಾಲಿಗುರುವಯ್ಯನನ್ನೂ, ಆತನ ಜೊತೆ ಶೋಭಾ ಕರಂದ್ಲಾಜೆಯ ಅಣ್ಣ ಲಕ್ಷ್ಮಣ್ ಎಂಬಾತನನ್ನೂ ಇದಕ್ಕೆ ಪಾರ್ಟನರ್‌ಗಳಾಗಿ ಮಾಡಿಕೊಳ್ಳಿ....! ಶೋಭಾ ಕರಂದ್ಲಾಜೆಯ ಅಣ್ಣ ಲಕ್ಷ್ಮಣ್ ಬೇರೆ ಯಾರೂ ಅಲ್ಲ; ಸಾಕ್ಷಾತ್ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಬೇನಾಮಿ!

ಅದು ಇಲ್ಲಿಗೆ ನಾಲ್ಕು ತಿಂಗಳ ಹಿಂದಿನ ...ತೆ. ಆವತ್ತು ತಮ್ಮ ಕಂಕುಳಲ್ಲಿ ಫೈಲೊಂದನ್ನು ...ವಿಟ್ಟುಕೊಂಡು ಮುಖ್ಯಮಂತ್ರಿ ಕುಮಾರ ...ಸ್ವಾಮಿಯವರ ಮನೆ ಬಾಗಿಲಲ್ಲಿ ಶತಪಥ ...ಕುತ್ತಿದ್ದ ಉಪಮುಖ್ಯಮಂತ್ರಿ ಯಡಿ...ಯೂರಪ್ಪನವರನ್ನು ಕಂಡು ಕುಮಾರಣ್ಣನ ...ದಿಮಾಗದರೆಲ್ಲ ಗೊಳ್ಳಂಥ ನಕ್ಕುಬಿಟ್ಟರು.

ಅದು ಮೈನ್ಸ್ ಸಂಬಂಧಿ ಫೈಲಾಗಿತ್ತು. ...ನ್ನೆ ಪರಮಾಪ್ತೆ ಶೋಭಾ ಕರಂದ್ಲಾಜೆಯ ...ಣ್ಣ ಲಕ್ಷ್ಮಣ್ ಎಂಬಾತನಿಗಾಗಿ ಸಾವಿರ ...ಕೋಟಿ ಲೂಟಿಯ ಗಣಿಗಾರಿಕೆಯ ಪರ ...ವಾನಗಿ ಬೇಡಿಯೇ ಯಡ್ಡಿ ಮುಖ್ಯಮಂತ್ರಿಗಳ ಮನೆ ...ಬಾಗಿಲಿಗೇ ಬಿಜಯಂಗೈದಿದ್ದರು. ಶೋಭಾ ಕರಂದ್ಲಾಜೆ ...ಗಿ ಮುಖ್ಯಮಂತ್ರಿಯ ಮನೆ ಮುಂದೆ ದೈನೇಸಿಯಂತೆ ...ತಿದ್ದ ಉಪಮುಖ್ಯಮಂತ್ರಿಯ ಪಡಿಪಾಟಲು ಕಂಡ ...ಬ್ಬಂದಿಗಳೆಲ್ಲ ಆವತ್ತು ಮುಸಿಮುಸಿ ನಗುತ್ತಿದ್ದರು. ...ದರ ಪರಿಣಾಮವೇನು ಗೊತ್ತೆ?

ಇವತ್ತು ಇಡೀ ಚಿಕ್ಕಮಗಳೂರು ಜಿಲ್ಲೆಯ ಜನಪರ ...ಳವಳಿಗಾರರೆಲ್ಲ ಎದೆಬಡಿದುಕೊಳ್ಳುತ್ತಿದ್ದಾರೆ. ಕೆಮ್ಮಣ್ಣು ...ಗುಂಡಿಯಲ್ಲಿ ಗಣಿಗಾರಿಕೆಯನ್ನು ನಿಷೇಧಿಸುತ್ತಿದ್ದಂತೆ ಇಡೀ ...ಜಿಲ್ಲೆಯ ಪರಿಸರವಾದಿಗಳು-ಜನಪರ ಹೋರಾಟಗಾರ ...ಲ್ಲಿ ಮೂಡಿದ್ದ ವಿಜಯೋತ್ಸಾಹವನ್ನೆಲ್ಲ ಯಡ್ಡಿ-ಶೋಭಾ ...ಜೋಡಿ ಧ್ವಂಸಗೊಳಿಸಿದೆ. ಹಾಗೇ ಮುಖ್ಯಮಂತ್ರಿಯ ...ಬಾಗಿಲು ಕಾದ ಯಡ್ಡಿ ...ಕುಮಾರಸ್ವಾಮಿಯವರ ...ಹಿ ಗಿಟ್ಟಿಸಿದ್ದು ...ಹೊಗರೇಕಾನ್ ...ಗಣಿಗಾರಿಕೆಗೆ!

ಕೆಮ್ಮಣ್ಣುಗುಂಡಿಗೆ ...ಹೊಂದಿಕೊಂಡಂತೆ ...ರುವ ಹೊಗರೇಕಾನ್ ...ಡೂರು ತಾಲ್ಲೂಕು, ...ರೂರು ಹೋಬಳಿಯ ...ವ್ಯಾಪ್ತಿಗೆ ಬರುವ ನಿಸರ್ಗ ...ರಮಣೀಯ ತಾಣ. ಈ ...ಕ್ಕಿ ಮುನ್ನೂರು ಎಕರೆ ...ಪ್ರದೇಶವನ್ನು ಇತ್ತೀಚೆಗೆ ...ಮಂಗಳೂರಿನ ಪನಾಮಾ ...ಇಂಟರ್‌ನ್ಯಾಷನಲ್ ...ಕಂಪನಿಯ ರಾಜೇಶ್





ಬಳ್ಳಾರಿಯ ಗಣಿಗಾರಿಕೆಯ ಒಂದು ನೋಟ

[illegible] ಗುರುತಿಸಿ, [illegible] ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧಿಸಲಾಗಿದ್ದರೂ [illegible] ಚೆನ್ನಾಗಿ ಗೊತ್ತು. ಹೊಗರೇಕಾನ್ ಅರಣ್ಯದ [illegible] ಅದಿರಿನಲ್ಲಿ ಶೇ. 68 ರಷ್ಟು ಕಬ್ಬಿಣಾಂಶವಿರುವುದೂ ಗೊತ್ತು. ಸದ್ಯದ ಮಾರುಕಟ್ಟೆ ದರದಂತೆ ಇಂಥ 'A' ಗ್ರೇಡ್ ಅದಿರು ಟನ್ ಒಂದಕ್ಕೆ ಸಾವಿರದ ಒಂಭೈನೂರು ರೂಪಾಯಿ ಬೆಲೆಬಾಳುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಆ ಪ್ರದೇಶದಲ್ಲಿ ಗಣಿಗಾರಿಕೆ ನಿಷೇಧಿಸಿ ದ್ದಾಗ್ಯೂ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ದಬಾಯಿಸಿ ಅದಿರು ದೋಚುವುದು ಕಷ್ಟವೇನಲ್ಲ.

ಈ ಹೊತ್ತಿಗಾಗಲೇ ಹೊಗರೇಕಾನ್ ಗಣಿಗಾರಿಕೆ ವಿರುದ್ಧ ರೈತ ಸಂಘದ ಗುರುಶಾಂತಪ್ಪ, ಸಿಪಿಐನ ರಾಧಾ ಸುಂದರೇಶ್, ರವಿ ಬಸಪ್ಪ ಅಮ್ಜದ್, ರೇಣುಕಾರಾಧ್ಯ, ಕಾಂಗ್ರೆಸ್ಸಿನ ಕೆ.ಬಿ. ಮಲ್ಲಿಕಾರ್ಜುನ ಮುಂತಾದವರೆಲ್ಲ ಬೀದಿಗಿಳಿದಿದ್ದರು. 2004 ರಲ್ಲಿ ಮಂಗಳೂರಿನ ರಾಜೇಶ್ ನಾಯಕ್ ಎಂಬಾತ ಮುಖ್ಯಮಂತ್ರಿ ಧರ್ಮಸಿಂಗ್ ಮತ್ತು ಗಣಿ ಇಲಾಖೆಯ ಹೆಗ್ಗಣ ಬಸಪ್ಪರೆಡ್ಡಿಗೆ ಅಮೇಧ್ಯ ತಿನ್ನಿಸಿ ಹನ್ನೆರಡು ಎಕರೆ ಪ್ರದೇಶದಲ್ಲಿ ಗಣಿಗಾರಿಕೆಗೆ ಪರವಾನಗಿ ಗಿಟ್ಟಿಸಿಬಿಟ್ಟ. ನಿಸರ್ಗ ರಮಣೀಯ ಹೊಗರೇಕಾನ್‌ನಲ್ಲಿ ಗಣಿಗಾರಿಕೆ ಶುರುವಾಗಿ ಇಡೀ ಪರಿಸರವೇ ಪ್ರಕ್ಷುಬ್ಧಗೊಂಡಿತ್ತು. ಅದರ ವಿರುದ್ಧ ರೈತಸಂಘ ಬೀದಿಗಿಳಿದಿತ್ತು. ಈಗ ಶಾಸಕನಾಗಿರುವ ಎಸ್.ಎಲ್. ಧರ್ಮೇಗೌಡ ಆವತ್ತು ಪ್ರತಿಭಟನಾಕಾರರ ಜೊತೆಗಿದ್ದ. ಆವತ್ತು ಪ್ರತಿಭಟನೆಗೆ ಮಣಿದ ಸರ್ಕಾರ ಗಣಿಗಾರಿಕೆ

ರಾ. ಸೋಮನಾಥ್

ನಿಷೇಧಿಸಿ ಆದೇಶ ಹೊರಡಿಸಿತ್ತು. ಆಗ ಜಿಲ್ಲಾಧಿಕಾರಿಯಾಗಿದ್ದ ಹರ್ಷದ್ ಗುಪ್ತಾ ಮತ್ತೇನಾದರೂ ಗಣಿಗಾರಿಕೆ ಶುರುವಾದರೆ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗೇ ಭಂಗ ಬರುತ್ತದೆಯೆಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಅಷ್ಟಕ್ಕೇ ಗಣಿಗಾರಿಕೆ ನಿಂತಿತೆಂದು ಜನ ಕೂಡ ನಿಟ್ಟುಸಿರಿಟ್ಟಿದ್ದರು. ಆದರೆ ಕೋ-ಜಾ ಸರ್ಕಾರ ಬರುತ್ತಿದ್ದಂತೆ ಎಮ್ಮೆಲ್ಲೇ ಧರ್ಮೇಗೌಡರು ತನ್ನ ತಮ್ಮ ಭೋಜೇಗೌಡನನ್ನು ಮುಂದೆ ಬಿಟ್ಟು ಯಡ್ಡಿಯ ಜೊತೆ ದೀಲಿ ಗಿಳಿದರು. ಅದಕ್ಕೆ ಯಡ್ಡಿ ಸೂಚಿಸಿದ ಪರಿಹಾರೋಪಾಯವೆಂದರೆ ರಾಷ್ಟ್ರ ನಾಯಕ ವೆಂಕಯ್ಯನಾಯ್ಡುವಿನ ನೆಂಟ ಆಂಧ್ರದ ಬಾಲಿಗುರುವಯ್ಯನನ್ನೂ ಆತನ ಜೊತೆ ಶೋಭಾ ಕರಂದ್ಲಾಜೆಯ ಅಣ್ಣ ಲಕ್ಷ್ಮಣ್ ಎಂಬಾತನನ್ನೂ ಇದಕ್ಕೆ ಪಾರ್ಟನರ್‌ಗಳಾಗಿ ಮಾಡಿಕೊಳ್ಳಿ....!

ಶೋಭಾ ಕರಂದ್ಲಾಜೆಯ ಅಣ್ಣ ಲಕ್ಷ್ಮಣ್ ಬೇರೆ ಯಾರೂ ಅಲ್ಲ; ಸಾಕ್ಷಾತ್ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಬೇನಾಮಿ!

ಅಲ್ಲಿಗೆ ಶ್ರೀನಿವಾಸ ಮಿನರಲ್ಸ್ ಲಿಮಿಟೆಡ್ ಎಂಬ ಹೊಸ ಆದಿರುಗಳ್ಳ ಸಂಸ್ಥೆಯೊಂದು ಹುಟ್ಟಿಕೊಂಡಿತ್ತು. ಅದಕ್ಕೆ

(ಮುಂದಿನ ಪುಟಕ್ಕೆ)

ಕೊಟ್ಟಿದ್ದು 32 ಸಾವಿರ, ಬಂದದ್ದು 52 ರೂಪಾಯಿ!

ಹೊಗರೇಕಾನ್ ಅರಣ್ಯದಲ್ಲಿ ಗಣಿಗಾರಿಕೆಗೆ ಪರವಾನಗಿ ಕೊಟ್ಟ ಸರ್ಕಾರದ ಲಜ್ಜೆಗೇಡಿತನದ ವಿರುದ್ಧ ಚಿಕ್ಕಮಗಳೂರು ಜಿಲ್ಲಾದ್ಯಂತ ಮತ್ತೆ ಪ್ರತಿಭಟನೆ ಮೊಳಗತೊಡಗಿದೆ. ಈ ಬಾರಿ ರೈತಸಂಘ, ಸಿಪಿಐ, ದಲಿತ [illegible] ಸಮಿತಿ ಮತ್ತು ಕಾಂಗ್ರೆಸ್ಸು ಒಟ್ಟಾಗಿಯೇ ಹೋರಾಟ ರೂಪಿಸುತ್ತಿವೆ. ಇದು ಬೀರೂರು ಶಾಸಕ ಗಣಿಕಳ್ಳ ಧರ್ಮೇಗೌಡ, ಚಿಕ್ಕಮಗಳೂರಿನ ಸಿ.ಟಿ. ರವಿ ಮತ್ತು ಕಡೂರಿನ ಕೃಷ್ಣ [illegible] ಮುಳುವಾಗಲಿದೆ.



ಆಂಧ್ರದ ಅದಿರುಚೋರ ಮತ್ತು ವೆಂಕಯ್ಯನಾಯ್ಡುವಿನ [illegible] ಬಾಲಿಗುರುವಯ್ಯ, ಇದಕ್ಕೊಂದು ಯಡ್ಡಿಗೆ ಎರಡು [illegible] ಭಕ್ಷೀಸು ಕೊಟ್ಟಿದ್ದಾನಂತೆ. ಅದರಲ್ಲಿ ಯಡ್ಡಿ [illegible] ಕೋಟಿ ಸುರಿದು ತನ್ನ ಮಾನಸಪುತ್ರಿ ಶೋಭಾ ಕರಂದ್ಲಾಜೆಗೆ ಬಿ.ಡಿ.ಎ. ನಗರದಲ್ಲೊಂದು ಬಂಗಲೆ ಕೊಡಿಸಿ [illegible] ಮಾಡಿದ್ದಾನೆ!

ಒಮ್ಮೆ ಹೊಗರೇಕಾನ್‌ನಲ್ಲಿ ಗಣಿಗಾರಿಕೆ ಶುರುವಾಯಿತೆಂದರೆ ಮೂರು ತಾಲ್ಲೂಕುಗಳ ಅಂತರ್ಜಲ ಕುಸಿಯುತ್ತದೆ. ಸಾವಿರಾರು ಕೋಟಿಯ ಅಮೂಲ್ಯ ಭೂನಿಕ್ಷೇಪ ಕಳ್ಳಕಾರರ ಪಾಲಾಗುತ್ತದೆ. ಅದು ಜನರ ಸೊತ್ತು. ರೈತರ ಆತ್ಮಹತ್ಯೆ ತಡೆಗಟ್ಟಲೆಂದು ಆರು ಸಾವಿರ ಕೋಟಿಯ ಪ್ಯಾಕೇಜ್ ಕೊಡಿ ಎಂದು ಕೇಂದ್ರದ ಮುಂದೆ ಭಿಕ್ಷೆ ಬೇಡುವ ಕರ್ನಾಟಕ ಸರ್ಕಾರ ಆದಕ್ಕಿಂತಲೂ ಅಧಿಕ ಮೌಲ್ಯದ ತನ್ನದೇ ಭೂಸಂಪತ್ತನ್ನು ಕವಡೆ ಕಿಮ್ಮತ್ತಿಗೆ ಅದಿರುಗಳ್ಳರಿಗೆ ಧಾರೆಯೆರೆಯುತ್ತಿದೆ. ಹೊಗರೇಕಾನ್‌ನಲ್ಲಿ ಅದಿರು ದೋಚುವುದೇ ಆದಲ್ಲಿ ಸರ್ಕಾರ ಅದನ್ನು ತಾನೇ ಮಾಡಿ ಸರ್ಕಾರದ ಬೊಕ್ಕಸ ತುಂಬಿಸಬಹುದಿತ್ತು. ಇವತ್ತು ಚಿಕ್ಕನಾಯಕನಹಳ್ಳಿ, ಹೊಸದುರ್ಗ, ಗುಬ್ಬಿ ಮತ್ತು ಬಳ್ಳಾರಿ, ಸಂಡೂರು, ಹೊಸಪೇಟೆಗಳಿಂದ ಪೂರೈಸುತ್ತ ಚೈನಾಕ್ಕೆ ರಫ್ತಾಗುವ ಕಬ್ಬಿಣದ ಅದಿರಿಗೆ ಸರ್ಕಾರ ಇವತ್ತಿಗೂ ಮಾರುಕಟ್ಟೆ ದರವನ್ನು



ವಿಧಿಸುತ್ತಿಲ್ಲ. ಟನ್ ಅದಿರಿಗೆ 26 ರೂಪಾಯಿ ರಾಯಲ್ಟಿ ಕಟ್ಟಿಬಿಟ್ಟರೆ ಸಾಕು. ಎರಡು ಟನ್ ಅದಿರಿನಿಂದ ಒಂದು ಟನ್ ಕಬ್ಬಿಣದ ಉತ್ಪಾದನೆಯಾಗುತ್ತದೆ. ಅದೇ ಒಂದು ಟನ್ ಕಬ್ಬಿಣವನ್ನು ಸರ್ಕಾರ ಕೊಳ್ಳಬೇಕೆಂದರೆ ಅದಕ್ಕೆ ಮೂವತ್ತೈದು ಸಾವಿರ ರೂಪಾಯಿ ತೆರುತ್ತದೆ. ಸರ್ಕಾರ ತಾನೇ ಕಬ್ಬಿಣ ಉತ್ಪಾದಿಸಬಹುದು. ಅಥವಾ ಅದಿರನ್ನು ಮಾರುಕಟ್ಟೆ ದರಕ್ಕಾದರೂ ಮಾರಬಹುದು. ದುರಂತವೆಂದರೆ ಮೂವತ್ತೈದು ಸಾವಿರ ಬರಬೇಕಿದ್ದಲ್ಲಿ ಸರ್ಕಾರಕ್ಕೆ ಬರುವುದು ಬರೇ ಐವತ್ತೆರಡು ರೂಪಾಯಿ! ಅಂದರೆ ಕೇವಲ ಎರಡು ಟನ್ ಅದಿರು ಲೂಟಿಯಾದರೆ ಕರ್ನಾಟಕಕ್ಕಾಗುವ ನಷ್ಟ ಮೂರು ಸಾವಿರದ ನಾನೂರ ನಲವತ್ತೆಂಟು ರೂಪಾಯಿ!

ಸಮಾಜದ ಸೊತ್ತನ್ನು ಹೀಗೆ ಕವಡೆ ಕಿಮ್ಮತ್ತಿಗೆ ಕಳ್ಳಕಾಕರ ಬಾಯಿಗಿಕ್ಕುವ, ಸಮುದ್ರದ ನೆಂಟಕೆಯಿದ್ದೂ ಉಪ್ಪಿಗೆ ಪರದಾಡುವ, ಇದನ್ನು ಕಂಡೂ ಯಾವೊಬ್ಬ ಶಾಸಕನೂ ಸೊಲ್ಲೆತ್ತದೇ ಇರುವ ಮುಠ್ಠಾಳ ಸಮುದಾಯವೆಂದರೆ ಅದು ಕನ್ನಡಿಗರೇ ತಾನೆ?

ಗಣಿ ದುಡ್ಡಿನಿಂದಲೇ ನಮ್ಮ [illegible]

[illegible]

ಗೆಂದು ಉಳಿಸಬಹುದಾಗಿದ್ದ [illegible] ಈಗೇನಿದೆ? [illegible]!


ಬಿಜೆಪಿಯ ಅದಿರುಗಳ್ಳರು

(ಹಿಂದಿನ ಪುಟದಿಂದ)


ಎಮ್ಮೆಲ್ಲೆ ಧರ್ಮೇಗೌಡನ ತಮ್ಮ ಭೋಜೇಗೌಡ ಮತ್ತು ಲಕ್ಷ್ಮಣ್ ರಹಸ್ಯ ಪಾಲುದಾರರಾದರು. ರಾಜೇಶ್ ನಾಯಕ್‌ನ ಇನ್ನೂರು ಎಕರೆ ಸೇರಿದಂತೆ ಹೊಗ ರೇಕಾನ್‌ನ ಒಟ್ಟು ಮುನ್ನೂರು ಎಕರೆ ಭೂಮಿಯನ್ನು ಬಾಲಿಗುರುವಯ್ಯ ತನ್ನ ಹೆಸರಿಗೆ ಖರೀದಿಸಿಬಿಟ್ಟ. ಗಣಿಗಾರಿಕೆಗೆ ಪರವಾನಗಿ ಕೊಡುವಂತೆ ವೆಂಕಯ್ಯನಾಯ್ಡುವೇ ಮುಖ್ಯಮಂತ್ರಿಗೆ ಫೋನಾಯಿಸಿದ್ದ. ಸಾಲದ್ದಕ್ಕೆ ಡಿಸಿಎಂ ಯಡ್ಡಿಯೇ ಕುಮಾರಣ್ಣನ ಮನೆತನಕ ಬಂದು ಪೂಸಿ ಹೊಡೆದಿದ್ದಾರೆ. 2006 ರ ಫೆಬ್ರವರಿ 20 ರಂದು ಹನ್ನೆರಡು ಎಕರೆ ಭೂಮಿಯಲ್ಲಿ ಇಪ್ಪತ್ತು ವರ್ಷಗಳ ಕಾಲ ಗಣಿಗಾರಿಕೆ ನಡೆಸುವಂತೆ ಸರ್ಕಾರ ಶ್ರೀನಿವಾಸ ಮಿನರಲ್ಸ್ ಕಂಪನಿಗೆ ಲೈಸೆನ್ಸ್ ಕೊಟ್ಟಿದೆ. ಅದು ಕೆಮ್ಮಣ್ಣುಗುಂಡಿ ಪರಿಸರಕ್ಕೆ ಸರ್ಕಾರವೇ ಬರೆದ ಮರಣ ಶಾಸನ.

ಇಲ್ಲಿ ಸರ್ಕಾರವೇ ಎಂಥಾ ದ್ರೋಹಕ್ಕಿಳಿದಿದೆಯೆಂದರೆ ಹದಿನೈದು ಎಕರೆಗೂ ಮೇಲ್ಪಟ್ಟು ಗಣಿಗಾರಿಕೆ ಮಾಡಬೇಕೆಂದರೆ ಅದಕ್ಕೆ ಕೇಂದ್ರ ಸರ್ಕಾರದ ಪರವಾನಗಿ ಬೇಕು. ಅದನ್ನೇ ಹನ್ನೆರಡು ಎಕರೆಗೆಂದು ತೋರಿಸಿ ಕಂಡಾಪಟ್ಟೆ ಅದಿರು ದೋಚಬಹುದಲ್ಲ, ಒಮ್ಮೆ ಗಣಿಗಾರಿಕೆ ಶುರುವಾಯಿತೆಂದರೆ ಎಲ್ಲಿಂದ ಎಲ್ಲಿಗಾದರೂ ನೆಲ ಕೊರೆಯಬಹುದು. ಅಷ್ಟಕ್ಕೂ ಅದನ್ನು ಕಾಯಬೇಕಾದವರು ಗಣಿ ಇಲಾಖೆಯವರೆ. ಎಷ್ಟು ದೋಚಿದರೂ ಕೇಳುವವರ್ಯಾರು?

ಇದು ಯಡ್ಡಿ-ಬಾಲಿ ಜಂಟಿ ಹುನ್ನಾರ. ಮುನ್ನೂರು ಎಕರೆ ಕಬ್ಬಿಣದ ಅದಿರೆಂದರೆ ಸಾವಿರಾರು ಕೋಟಿಯ ಬಾಬತ್ತು. ದಿನವೊಂದಕ್ಕೆ ನೂರಕ್ಕೂ ಅಧಿಕ ಲಾರಿಗಳಂತೆ ತಿಂಗಳೊಂದಕ್ಕೆ ಹಲವು ಕೋಟಿ ಟನ್ ಅದಿರು ಸಾಗಿಸಬಹುದು. ಅದೂ ಕೋ-ಜಾ ಸರ್ಕಾರದ ಅವಧಿಯಲ್ಲೇ ದುಡಿದುಕೊಳ್ಳಬೇಕೆಂದರೆ ಹತ್ತಾರು ಕ್ರೇನುಗಳು, ಅಸಂಖ್ಯಾತ ಕೂಲಿಗಳು ಮತ್ತು ನೂರಾರು ಲಾರಿಗಳ ಭೀಕರ ಪರಿಸರ ಧ್ವಂಸಾಚರಣೆ. ಇದನ್ನು ಒಬ್ಬ ಜನಪರ ಶಾಸಕನೆಂದು ಪೋಜು ಕೊಡುವ ಶಾಸಕ ಸಿ.ಟಿ.ರವಿ ವಿರೋಧಿಸಬೇಕಿತ್ತು. ತಮ್ಮದೇ ಪಕ್ಷದ ನಾಯಕನೊಬ್ಬನ ಹಗಲುದರೋಡೆಯ ವಿರುದ್ಧ ಮಹಾನ್ ಪರಿಸರ ಪ್ರೇಮಿಗಳಾದ ಬಿಜೆಪಿಗಳು ಪ್ರತಿಭಟಿಸಬೇಕಿತ್ತು.







ಜನಾರ್ಧನ ರೆಡ್ಡಿ, ಚರಂತಿ ಮಠ ಮತ್ತು ಅನಿಲ್ ಲಾಡ್

ದುರಂತವೆಂದರೆ ಸರಿಸುಮಾರು ಅರ್ಧ ಡಜನ್ ಬಿಜೆಪಿ ಶಾಸಕರೇ ಅದಿರುಗಳ್ಳತನಕ್ಕೆ ಕೈಯಿಟ್ಟಿದ್ದಾರೆ. ನಿನ್ನೆ ಮೊನ್ನೆ ತನಕ ಇಳಕಲ್ ಸುತ್ತಮುತ್ತ ಗ್ರಾನೈಟ್ ಕದ್ದು ಸಾಗಿಸುತ್ತಿದ್ದ ಬಿಜೆಪಿಯ ಹುನಗುಂದದ ಶಾಸಕ ದೊಡ್ಡನಗೌಡ ಪಾಟೀಲನೇ ಈಗ ಅದಿರುಗಳ್ಳತನಕ್ಕಿಳಿದಿದ್ದಾನೆ. ತಾನೊಬ್ಬನೇ ಸಾಲದೆಂಬಂತೆ ತನ್ನ ಅದಿರುಗಳ್ಳ ದಂಧೆಗೆ ಪಾಲುದಾರನನ್ನಾಗಿ ಬಾಗಲಕೋಟೆಯ ಮತ್ತೊಬ್ಬ ಬಿಜೆಪಿ ಶಾಸಕ ವೀರಣ್ಣ ಚರಂತಿಮಠನ ಖಾಸಾ ತಮ್ಮ ಮಲ್ಲಣ್ಣ ಚರಂತಿಮಠನನ್ನು ಜೊತೆ ಹಾಕಿಕೊಂಡಿದ್ದಾನೆ. ಇಬ್ಬರೂ ಸೇರಿ ಬೇನಾಮಿ ಹೆಸರಲ್ಲಿ ಹೊಸಪೇಟೆಯ ಸಮೀಪದ ಸರ್ವೆ ನಂಬರ್ 86 ರ ಅರಣ್ಯ ಭೂಮಿಗೆ ಕನ್ನ ಕೊರೆದಿದ್ದಾರೆ.

ಬೀಳಗಿ ಬಿಜೆಪಿ ಶಾಸಕ ಮುರುಗೇಶ್ ನಿರಾನಿ ಹೇಳಿಕೇಳಿ ಯಡಿಯೂರಪ್ಪನವರ ಬಲಗೈ ಬಂಟ. ಸಕ್ಕರೆ ಕಾರ್ಖಾನೆ ಮಾಡಿಕೊಂಡಿದ್ದವನು ಈಗ ಸಂಡೂರು ಸುತ್ತಮುತ್ತ ಡಿಗ್ಗಿಂಗ್ ಶುರುಹಚ್ಚಿಕೊಂಡಿದ್ದಾನೆ. ಕದ್ದ ಮಾಲು ಯಾರೇ ಕೊಟ್ಟರೂ ಅಗದೀ ದರಕ್ಕೆ ಖರೀದಿಸುತ್ತಾನೆ. ಇವರಿಬ್ಬರಿಗಿಂತಲೂ ದೊಡ್ಡ ಮಟ್ಟದಲ್ಲಿ ಅದಿರು ಕದ್ದು ಸಾಗಿಸುವವನು ಕೂಡ್ಲಿಗಿಯ ಬಿಜೆಪಿ ಶಾಸಕ ಮುಖ್ಯಮಂತ್ರಿಯ ಪರಮಾಪ್ತ ಅನಿಲ್ ಲಾಡ್. ಈತನ ಅಣ್ಣ ಸಂತೋಷ್ ಲಾಡ್ ಸಂಡೂರಿನ ಜೆಡಿ(ಎಸ್) ಶಾಸಕ. ಪಕ್ಷ ಬೇರೆ ಬೇರೆಯಾದರೂ ಲೂಟಿಯಲ್ಲಿ ಮಾತ್ರ ಅಣ್ಣತಮ್ಮ ಒಂದೇ. ನಿನ್ನೆ ಮೊನ್ನೆಯ ತನಕ ಘೋರ್ಪಡೆ ಕಂಪನಿಯಲ್ಲಿ ಗುಮಾಸ್ತರಂತಿದ್ದ ಈ ಲಾಡ್ ಬ್ರದರ್‌ಗಳ ಪೈಕಿ ಬಿಜೆಪಿಯ ಅನಿಲ್ ಲಾಡ್ ಒಬ್ಬನೇ ಇವತ್ತು ಆರುನೂರು ಕೋಟಿಯ ಸರದಾರ. ವಿಎಸ್‌ಎಲ್ ಕಂಪನಿಯ ಹೆಸರಲ್ಲಿ ಸಂಡೂರಿನ ಕೃಷ್ಣಾನಗರ ಹರಿಶಂಕರ ಮೈನ್ಸ್‌ಗಳಲ್ಲಿ ಲೂಟಿಗಿಳಿದ ಲಾಡ್ ಬ್ರದರ್‌ಗಳು ಸದ್ಯ ಸಂಡೂರಿನಲ್ಲಿ ಎಚ್.ಆರ್. ಗವಿಯಪ್ಪನ ಗಣಿಯನ್ನೂ ಖರೀದಿಸಿದ್ದಾರೆ. ಈ ಗವಿಯಪ್ಪ ಸದ್ಯ ಹೊಸಪೇಟೆಯ ಕಾಂಗ್ರೆಸ್ ಶಾಸಕ. ಈತನಿಗೆ ಸಂಡೂರಿನಲ್ಲಿ ನೂರೆಕರೆಯ ಗಣಿಯಿದೆ. ಅದರ ಅರ್ಧ ಭಾಗ ಅರಣ್ಯಭೂಮಿ. ಹೇಗೂ ಕಾಂಗ್ರೆಸ್ ಸರ್ಕಾರವಿಲ್ಲವಾದ್ದರಿಂದ ಸರ್ಕಾರಿ ತಾಪತ್ರಯ ಎದುರಿಸಲಾಗದೇ ಗವಿಯಪ್ಪ ತನ್ನ ಗಣಿಯನ್ನು ಅನಿಲ್‌ಲಾಡ್‌ಗೆ ಗುತ್ತಿಗೆ ಕೊಟ್ಟಿದ್ದಾನೆ.


ಅದನ್ನು ಬೇಕಾಬಿಟ್ಟಿ ಸೂರೆಗೈಯುವ ವಿಎಸ್‌ಎಲ್ ಕಂಪನಿ ತಿಂಗಳೊಂದಕ್ಕೆ ಗವಿಯಪ್ಪನಿಗೆಂದು ಮೂರು ಕೋಟಿ ಕೊಡುತ್ತದೆ. ಅನಿಲ್‌ಲಾಡ್ ಸದ್ಯ ತುಂಗಭದ್ರಾ ಡ್ಯಾಂ ಬಳಿ ಆರುನೂರು ಎಕರೆಯ ಗ್ರೀನ್ ಹೌಸ್, ಪಕ್ಕದಲ್ಲೇ ಸ್ಪಾಂಜ್ ಐರನ್ ಫ್ಯಾಕ್ಟರಿ, ಮಗ್ಗುಲಿಗೇ ಹೆಲಿಪ್ಯಾಡ್, ಎಂಥ ಭೂಕಂಪವಾದರೂ ಬೀಳದಂಥ ಜಪಾನಿ ಮನೆ ಕಟ್ಟಿಸಿದ್ದಾನೆ. ನಿನ್ನೆ ಮೊನ್ನೆಯ ತನಕ ಯಡಿಯೂರಪ್ಪನವರ ಬಲಗೈ ಬಂಟನಂತಿದ್ದ ಈ ಅನಿಲ್‌ಲಾಡ್ ಸದ್ಯ ಮುಖ್ಯಮಂತ್ರಿ ಕುಮಾರಸ್ವಾಮಿಯರ ಕನ್ನಡ ಕಸ್ತೂರಿ ಟೀವಿ ಚಾನಲ್ಲಿಗೂ ಪಾಲುದಾರ!

ಒಂದೆಡೆ ಜೆಡಿ(ಎಸ್)ನ ಸೂರ್ಯನಾರಾಯಣ ರೆಡ್ಡಿ, ಸಂತೋಷ್ ಲಾಡ್‌ಗಳ ಮೈನಿಂಗ್, ಮತ್ತೊಂದೆಡೆ ಬಿಜೆಪಿಯಲ್ಲೇ ಇದ್ದು ಮುಖ್ಯಮಂತ್ರಿಯ ತೆಕ್ಕೆಗೆ ಹೋದ ಗಣಿದೈತ್ಯ ಅನಿಲ್ ಲಾಡನ ಐಷಾರಾಮ. ಇವರೆಲ್ಲರಿಗೂ ಮುಖ್ಯಮಂತ್ರಿಯದೇ ಶ್ರೀರಕ್ಷೆ. ಯಡ್ಡಿ- ಶೋಭಕ್ಕನ ಜಂಟಿ ಮೈನಿಂಗ್ ಭಕ್ಷಣೆ ಈ ಮಧ್ಯೆ ಬಳ್ಳಾರಿಯಲ್ಲಿ ಅದಿರು ಮಾಫಿಯಾಗಳಂತಿದ್ದ ಜನಾರ್ಧನ ರೆಡ್ಡಿ, ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲು ಗ್ಯಾಂಗಿಗೆ ಅಭದ್ರತೆ ಕಾಡಿದೆ. ಅವರ ಹಿತ್ತೈಷಿಗಳಂತಿದ್ದ ಪೊಲೀಸರು ಮತ್ತು ಗಣಿ ಅಧಿಕಾರಿಗಳನ್ನೆಲ್ಲ ಎತ್ತಂಗಡಿ ಮಾಡುತ್ತಿದ್ದರೆ, ಅದನ್ನು ಯಡ್ಡಿ ಗ್ಯಾಂಗ್ ನೋಡುತ್ತಾ ತೆಪ್ಪಗಿದ್ದರೆ ಜನಾರ್ಧನ ರೆಡ್ಡಿಗೆ ತಲೆ ಕೆಡದೇ ಇನ್ನೇನು?

ಬಿಜೆಪಿಯ ವಿರುದ್ಧ ಬಿಜೆಪಿಯೇ ಕಚ್ಚಾಟಕ್ಕಿಳಿಯಿತೆಂದರೆ ಅದು ಕೂಡ ಅದಿರುಗಳ್ಳತನದ ಮತ್ತೊಂದು ರೂಪವೇ! ●

ಅದಿರುಕೊಳ್ಳೆಯಲ್ಲಿ ಮರಿ ಕೇಸರಿಗಳು

ಕಾಂಗ್ರೆಸ್ಸು, ಜೆಡಿ(ಎಸ್)ಗಳಂತೆ ಬಳ್ಳಾರಿಯ ಬಿಜೆಪಿಯೂ ಗಣಿಕೊಚ್ಚೆಯಲ್ಲಿ ಬಿದ್ದು ನಾರುತ್ತಿದೆ. ಒಬ್ಬ ಜನಾರ್ಧನರೆಡ್ಡಿಯಷ್ಟೇ ಅಲ್ಲ; ಇಡೀ ಬಳ್ಳಾರಿಯ ಬಿಜೆಪಿಗೆ ಸದ್ಯ ವಿಟಮಿನ್ 'ಎಂ' ಸರಬರಾಜಾಗುತ್ತಿರುವುದು ಮೈನ್ಸ್ ಧಂದೆಯಿಂದಲೇ!



ನಾಗೇಂದ್ರ

ಬಳ್ಳಾರಿಯ ಲೋಕಸಭಾ ಸದಸ್ಯ ಕರುಣಾಕರರೆಡ್ಡಿ ಮತ್ತು ಮಂತ್ರಿ ಶ್ರೀರಾಮುಲು ಸೇರಿಕೊಂಡು ಕಮ್ಮಿಯೆಂದರೂ ಎಂಟು ಕಡೆ ಅರಣ್ಯಭೂಮಿಗೆ ಕನ್ನ ಹಾಕಿದ್ದಕ್ಕೆ ಸಾಕ್ಷ್ಯಾಧಾರಗಳಿವೆ. ಹಾಗಂಥ ಯಾವುದೂ ಅವರ ಹೆಸರಿಗಿಲ್ಲ, ದುಡ್ಡು ಮಾತ್ರ ಅವರ ಜೇಬು ಸೇರುತ್ತದೆ. ಎಲ್ಲವೂ ಬೇನಾಮಿ ವ್ಯವಹಾರ. ಇತ್ತೀಚೆಗೆ ಹೊಸಪೇಟೆ ಸಮೀಪದ ರಾಜಾಪುರದಲ್ಲಿ ಮೊಹಮ್ಮದ್ ಖಾಸಿಮ್ ಎಂಬಾತನ ಆಶಾ ಮೈನ್ಸ್‌ಗೆ ನುಗ್ಗಿದ ಮಂತ್ರಿ ಶ್ರೀರಾಮುಲು ರೌಡಿ ಪಡೆ ಸರಿಸುಮಾರು ಐದು ಲಕ್ಷ ಟನ್ ಕಬ್ಬಿಣದ ಅದಿರನ್ನು ಜಬರ್‌ದಸ್ತಿನಿಂದ ಕದ್ದು ಸಾಗಿಸಿದೆ. ಈ ಬಗ್ಗೆ ಖಾಸಿಮ್ ಮತ್ತವರ ಪುತ್ರ ಹಾರೂನ್ ಪೊಲೀಸರಿಗೆ ದೂರು ಕೊಟ್ಟರು. ಸರ್ಕಾರಕ್ಕೆ ಮನವಿ ಕೊಟ್ಟರು. ಏನೇನೂ ಪ್ರಯೋಜನವಾಗಲಿಲ್ಲ, ಖಾಸಿಮ್‌ನಿಂದ ಶ್ರೀರಾಮುಲು ಗ್ಯಾಂಗ್ ಕಿತ್ತುಕೊಂಡ ಅದಿರಿನ ಮೌಲ್ಯವೇ ಐವತ್ತು ಕೋಟಿ! ನಿಸ್ಸಹಾಯಕ ಖಾಸಿಂ ಕೋರ್ಟ್ ಮೊರೆ ಹೊಕ್ಕಿದ್ದಾರೆ. ಐವತ್ತು ಕೋಟಿ ಬರುತ್ತಾ? ಬರುವುದು ಯಾವ ಕಾಲಕ್ಕೋ?

ಹೊಸಪೇಟೆ ಸರ್ವೆ ನಂಬರ್ 86 ರಲ್ಲಿನ 16043.31 ಹೆಕ್ಟೇರ್ ಅರಣ್ಯಕ್ಕೆ ಮಂತ್ರಿ ಶ್ರೀರಾಮುಲು ಮತ್ತು ಸಂಸದ ಕರುಣಾಕರ ರೆಡ್ಡಿ ಸೇರಿ ಕನ್ನ ಕೊರೆದಿದ್ದಾರೆ. ಸರ್ವೆ ನಂಬರ್ 68 ರಲ್ಲಿನ 15443 ಹೆಕ್ಟೇರ್ ಅರಣ್ಯ ಪ್ರದೇಶಕ್ಕೂ ಇದೇ ಗ್ಯಾಂಗ್ ನುಗ್ಗಿ ಸರ್ಕಾರವನ್ನೂ ಲೆಕ್ಕಿಸದೇ ಅದಿರು ಸಾಗಿಸುತ್ತಿದೆ. ಗಣಿ ಇಲಾಖೆಯ ಅಧಿಕಾರಿ ಬಿ.ಡಿ. ನಾರಾಯಣಮೂರ್ತಿಯವರ ಪ್ರಕಾರ ಸರ್ಕಾರ ಇಂಥ ನೂರಿಪ್ಪತ್ತು ಅಕ್ರಮ ಗಣಿ ಲೂಟಿ ಪ್ರಕರಣ ಪತ್ತೆಹಚ್ಚಿ ಕೇಸು ಹಾಕಿದೆ. ಕೇಸೇನೋ ಕೋರ್ಟಿನಲ್ಲಿ ನಡೆಯುತ್ತಿದೆಯಾದರೂ ಅದಿರು ಲೂಟಿ ಮಾತ್ರ ನಿರಾತಂಕ. ಸರ್ಕಾರ, ಕೋರ್ಟು, ಸಂವಿಧಾನ, ಪೊಲೀಸು ಯಾವುದೂ ಇವರಿಗೆ ಲೆಕ್ಕಕ್ಕಿಲ್ಲ.

ಬಿಜೆಪಿಯ ನಾಯಕರೇ ಹೀಗಾದ ಮೇಲೆ ಇನ್ನು ಹುಡಿಪುಡಿ ನಾಯಕರು ಸುಮ್ಮನಿರುತ್ತಾರಾ? ಸಂಡೂರು ತಾಲ್ಲೂಕು ಬಿಜೆಪಿ ಅಧ್ಯಕ್ಷ ಶ್ರೀನಿವಾಸುಲು, ಕಳೆದ ಚುನಾವಣೆಯಲ್ಲಿ ಸಂಡೂರಿಗೆ ಬಿಜೆಪಿ ಅಭ್ಯರ್ಥಿಯಾಗಿದ್ದ ಪ್ರತಿಭಾ ಕೊಟ್ರಪ್ಪ, ಭುಜಂಗನಗರದ ಬಿಜೆಪಿ ನಾಯಕ ಕಾಶೀನಾಥ್ ಮತ್ತವನ ಪತ್ನಿ, ಸಂಡೂರಿನ ಬಿಜೆಪಿ ಯುವ ಮೋರ್ಛಾ ನಾಯಕ ಷಣ್ಮುಖ, ಕೂಡ್ಲಿಗಿಯ ಬಿಜೆಪಿಯ ನಾಯಕ ಎನ್.ಟಿ. ಬೊಮ್ಮಣ್ಣ, ಬಳ್ಳಾರಿ ಜಿಲ್ಲಾ ಪಂಚಾಯ್ತಿಯ ಮಾಜಿ ಅಧ್ಯಕ್ಷ ಜಿ. ಉಮೇಶ್, ಮುಂತಾದ ಕರುಣಾಕರರೆಡ್ಡಿಯ ಶಿಷ್ಯರೆಲ್ಲ ಸದ್ಯ ಗಣಿ ಧಂದೆಗೆ ಕೈಯಿಟ್ಟವರೆ.

ಯಾರದೋ ಜಮೀನಿಗೆ ನುಗ್ಗಿ ಡಿಗ್ಗಿಂಗ್ ಮಾಡಿ ಬಂದಷ್ಟು ಅದಿರು ದೋಚಿ ಅದನ್ನು ತಿಮಿಂಗಿಲಗಳಿಗೆ ಮಾರುವುದು ಇಂಥ ಮರಿ ಪುಡಾರಿಗಳ ಧಂದೆ.

ಕೊಟ್ಟೂರಿನ ಮಾಜಿ ಮಂತ್ರಿ ಸದ್ಯೋಜ್ಯಾತಯ್ಯನ ಮಗ ಮಾಜಿ ಪಟ್ಟಣ ಪಂಚಾಯ್ತಿ ಅಧ್ಯಕ್ಷ ಎಂ.ಎಂ.ಜೆ. ಹರ್ಷವರ್ಧನ್ ಹಿಂದೆ ಎಂ.ಪಿ. ಪ್ರಕಾಶ್ ಶಿಷ್ಯನಾಗಿದ್ದ. ಈತ ಕರುಣಾಕರ ರೆಡ್ಡಿಯ ತೆಕ್ಕೆಗೆ ಜಾರಿ ಬಿಜೆಪಿ ಸೇರಿದ್ದು ಇತ್ತೀಚೆಗಾದರೂ, ಇವರಿಬ್ಬರ ಮಧ್ಯೆ ಅದಿರುಗಳ್ಳತನದ ಬೆಸುಗೆಯಿದೆ. ಈ ಹಿಂದೆ ರೈಲ್ವೆಗೆ ಇದ್ದಿಲು ಕಂಟ್ರಾಕ್ಟರ್ ಆಗಿದ್ದ ಹೊಸಪೇಟೆ ತಾಲ್ಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ವರ ರೆಡ್ಡಿ ಕೂಡಾ ರಾಜಾಪುರ ಸಮೀಪದ ಎಂಟೆಕರೆ ಸರ್ಕಾರಿ ಭೂಮಿಯಲ್ಲಿ ಅದಿರು ದೋಚುತ್ತಿದ್ದಾನೆ. ಬಿಜೆಪಿಯ ಮತ್ತೊಬ್ಬ ಯುವ ನಾಯಕ ಕರುಣಾಕರ ರೆಡ್ಡಿಯ ಬಲಗೈ ಬಂಟ ನಾಗೇಂದ್ರನೂ ಇದೇ ರಾಜಾಪುರದಲ್ಲಿ ಅದಿರು ಕೊಳ್ಳೆಗಿಳಿದಿದ್ದಾನೆ.

ಕಾಂಗ್ರೆಸ್-ದಳದವರಿಗಿಂತಲೂ ಬಿಜೆಪಿಯ ಅದಿರುಕೊಳ್ಳೆ ಪಸಂದಾಗಿದೆ. ಮುನ್ನುಗ್ಗುತ್ತಿದೆ. ●

ಶೋಭಾ ಬನ್‌ಗಯೀ....

(10 ನೇ ಪುಟದಿಂದ)

ಮಾಡಿರುವ ಆಸ್ತಿ ಎಷ್ಟು?

ಕೋ-ಜಾ ಸರ್ಕಾರ ಅಧಿಕಾರದಲ್ಲಿರುವಷ್ಟು ದಿನ ಎಷ್ಟು ಸಾಧ್ಯವೋ ಅಷ್ಟು ಹಣ ಮಾಡಲು ನಿರ್ಧರಿಸಿರುವ ಕರಂದ್ಲಾಜೆ, ವರ್ಗಾವಣೆ ಧಂದೆ, ಎಲ್.ಓ.ಸಿ. ಬಿಡುಗಡೆಯುಲ್ಲದೆ ಅಬಕಾರಿ ಲಾಬಿಯಿಂದಲೂ ವಸೂಲಿಗಿಳಿದಿದ್ದಾರೆ. ಹೀಗೆ ಎಲ್ಲಾ ಮೂಲಗಳಿಂದಲೂ ಎತ್ತುವಳಿ ಶುರುವಿಟ್ಟುಕೊಂಡೇ ಈಕೆ ಈಗ ಹತ್ತಿರತ್ತಿರ 20 ಕೋಟಿ ಆಸು-ಪಾಸಿಗಿರುವುದನ್ನು ಕಂಡು ಬಿಜೆಪಿಯ ಚೆಡ್ಡಿಗಳ ತೊಡೆಯಲ್ಲಿ ನಡುಕ ಶುರುವಾಗಿದೆ.

ಧರಂಸಿಂಗ್ ಅವಧಿಯಲ್ಲಿ ಎಚ್.ಎಸ್.ಆರ್. ಬಡಾವಣೆಯಲ್ಲಿ ಪಡೆದ ನಿವೇಶನವನ್ನು ಮಾರಾಟ ಮಾಡಿದ ಕರಂದ್ಲಾಜೆ ಸದ್ಯಕ್ಕೆ ಕುಮಾರಣ್ಣನ ಮುಂದೆ ಮತ್ತೊಂದು ಬಿಡಿಎ ಸೈಟಿಗಾಗಿ ಕ್ಯೂನಲ್ಲಿ ನಿಂತಿದ್ದಾರೆ. ಅಷ್ಟೇ ಅಲ್ಲ, ಈ ಹಿಂದೆ ತಾನು ಬಿಡಿಎನಿಂದ ಸೈಟು ಪಡೆದಿಲ್ಲ ಎಂಬ ಸುಳ್ಳು ಪ್ರಮಾಣ ಪತ್ರವನ್ನೂ ನೀಡಿದ್ದಾರಂತೆ. ಜನಾರ್ಧನ ರೆಡ್ಡಿಯ 'ಗಣಿಕಪ್ಪ'ದ ಪಂಚ್‌ನಿಂದ ಕಂಗಾಲಾಗಿರುವ ಕುಮಾರಣ್ಣ ಸದ್ಯಕ್ಕೆ ಇದನ್ನು ಪಕ್ಕಕ್ಕಿಟ್ಟಿದ್ದರೂ, ಯಡಿಯೂರಪ್ಪನವರ ಪ್ರಭಾವ ಕೆಲಸ ಮಾಡುತ್ತದೆ ಎಂಬುದು ಕರಂದ್ಲಾಜೆಯ ನಂಬಿಕೆ.

ಈಗಾಗಲೇ ಕುಮಾರಕೃಪ ಗೆಸ್ಟ್‌ಹೌಸ್ ಹಿಂಭಾಗದ ಅಪಾರ್ಟ್‌ಮೆಂಟ್‌ನಲ್ಲಿ 45 ಲಕ್ಷ ಕೊಟ್ಟು ಫ್ಲಾಟ್ ಖರೀದಿಸಿರುವ ಈಕೆ ಮಂಗಳೂರಿನಲ್ಲಿ ಸುರತ್ಕಲ್ ಶಾಸಕ ಕೃಷ್ಣ ಪಾಳೇಮಾರ್‌ರ 'ಲ್ಯಾಂಡ್ ಲಿಂಕ್ ಲಿಮಿಟೆಡ್' ಟೌನ್‌ಷಿಪ್‌ನಲ್ಲಿ 50x80 ವಿಸ್ತೀರ್ಣದ ಎರಡು ನಿವೇಶನ ಖರೀದಿಸಿದ್ದಾರೆ. ಈ ಟೌನ್‌ಶಿಪ್‌ನಲ್ಲಿ ತಲಾ ನಿವೇಶನದ ಬೆಲೆಯೇ ಹತ್ತಿರತ್ತಿರ 20 ಲಕ್ಷ ರೂಪಾಯಿ.

ತನ್ನ ಹುಟ್ಟೂರು ಪುತ್ತೂರು ಬಳಿಯ ಸವಣೂರಿನಲ್ಲಿ 30 ಲಕ್ಷ ರೂಪಾಯಿ ಮೌಲ್ಯದ ಬೃಹತ್ ಬಂಗಲೆ ಕಟ್ಟಿಸುತ್ತಿರುವ ಈಕೆಯ ತಾಕತ್ತು ನೋಡಿ ಪುತ್ತೂರಿನ ಚೆಡ್ಡಿಗಳು, 'ಎಂಥಾ ಮಾರಾಯ್ರೆ, ಈಕೆಗೆ ಇಷ್ಟೊಂದು ಹಣ ಬಂದಿದ್ದು ಹ್ಯಾಗೆ' ಎಂದು ಮಂಡೆ ಬಿಸಿ ಮಾಡಿಕೊಂಡಿದ್ದಾರೆ.

ಇದಲ್ಲದೆ ಮಾಲೂರಿನ ನೆಲಗಳ್ಳ ಶಾಸಕ ಕೃಷ್ಣಯ್ಯಶೆಟ್ಟಿಯೊಂದಿಗೆ ರಿಯಲ್ ಎಸ್ಟೇಟ್ ಧಂದೆಗೂ ಇಳಿದಿರುವ ಕರಂದ್ಲಾಜೆ, ನೆಲಮಂಗಲದ ಬಳಿ ತ್ಯಾಮಗೊಂಡ್ಲು ಸೋಮನಹಳ್ಳಿ ಸುತ್ತ ಬೇನಾಮಿ ಹೆಸರಿನಲ್ಲಿ ಹತ್ತಾರು ಎಕರೆ ಭೂಮಿ ಖರೀದಿಸಿರುವ ಗುಲ್ಲು ಬಿಜೆಪಿಯ ಭಿನ್ನಮತೀಯ ಪಾಳೆಯದಿಂದ ಹೊರಬೀಳುತ್ತಿದೆ.

ಗಣಿಗಾರಿಕೆಗೆ ಅರ್ಜಿ!

ಯಡಿಯೂರಪ್ಪ ಉಪಮುಖ್ಯಮಂತ್ರಿಯಾದ ನಂತರ ಕೋಟಿ-ಕೋಟಿ ಹಣ ಮಾಡಿದ ಕರಂದ್ಲಾಜೆ ಆ ಗಂಟನ್ನು ಕೈಯಲ್ಲಿಡಿದು ಬಳ್ಳಾರಿಯ 125 ಎಕರೆ ಸರ್ಕಾರಿ ಜಮೀನಿನಲ್ಲಿ ಗಣಿಗಾರಿಕೆ ನಡೆಸಲು ಕೃಷ್ಣಯ್ಯಶೆಟ್ಟಿಯೊಂದಿಗೆ ಕುಮಾರಣ್ಣನ ಬಳಿ ಅರ್ಜಿ ಹಿಡಿದು ಹೋಗಿದ್ದಾರೆ.

ಈ ವೇಳೆಗಾಗಲೇ ಈಕೆಯ ಮಹಾತ್ಮೆಯಿಂದ ಕೋ-ಜಾ ಸರ್ಕಾರಕ್ಕೆ ಬಂದಿರುವ ಕೆಟ್ಟ ಇಮೇಜ್‌ನಿಂದ ರೋಸಿ ಹೋಗಿದ್ದ ಕುಮಾರಸ್ವಾಮಿ ಈಕೆಗೆ ಎಕ್ಕಾ-ಮಕ್ಕಾ ಉಗಿದು ಆಚೆ ದೂಡಿದ್ದಾರೆ. ಜೊತೆಗೆ ಯಡಿಯೂರಪ್ಪನವರಿಗೂ ಏಕಾಂತದಲ್ಲಿ ಈಕೆಯನ್ನು ದೂರವಿಡುವಂತೆ ತಾಕೀತು ಮಾಡಿದ್ದಾರೆ.

ಪಾಪ! ಕುಮಾರಣ್ಣನ ಮಾತು ಕೇಳಿ ಈಕೆಯನ್ನು ದೂರವಿಟ್ಟರೆ ಈಕೆ ಹರಕೆ ಹೊತ್ತಿರುವ ರಕ್ತಕಾಳೇಶ್ವರಿ, ಡಾಕಿನಿ-ಮಾಕಿನಿ- ಯಕ್ಷಿಣಿರ ಶಾಪಕ್ಕೆ ಎಲ್ಲಿ ಬಲಿಯಾಗುತ್ತೇನೋ ಎಂದು ಯಡ್ಡಿ ಚೆಡ್ಡಿಯೊಳಗೆ ಬೆವರುತ್ತಿದ್ದಾರೆ. ■

ಯಡ್ಡಿ ಮನೆ ಕರಂದ್ಲಾಜೆಯ ಅಧಿಕೃತ ನಿವಾಸವೇ!

ಮೇಲ್ಮನೆ ಸದಸ್ಯೆ ಬಿಜೆಪಿಯ ಫ್ರಂಟ್‌ಲೈನ್ ನಾಯಕಿ ಶೋಭಾ ಕರಂದ್ಲಾಜೆಯವರ ಅಧಿಕೃತ ನಿವಾಸದ ವಿಳಾಸ ಗೊತ್ತೇ.... ಇದೋ ಇಲ್ಲಿದೆ ನೋಡಿ.

ನಂ. 18, ಶ್ರೀಕಂಠಯ್ಯ ಲೇ-ಔಟ್, ಕ್ರೆಸೆಂಟ್ ರೋಡ್, ಹೈಗ್ರೌಂಡ್ಸ್, ಬೆಂಗಳೂರು-1.

ಇದೇನಿದು, ಉಪಮುಖ್ಯಮಂತ್ರಿ ಯಡ್ಡಿಯ ಸರ್ಕಾರಿ ಬಂಗಲೆಯ ವಿಳಾಸ ನೀಡಿ, ಕರಂದ್ಲಾಜೆ ಮೇಡಮ್ಮರ ಮನೆ ವಿಳಾಸವೆಂದು ದಾರಿ ತಪ್ಪಿಸುತ್ತೀರಾ?

ಮಾನ್ಯ ಶೋಭಾ ಕರಂದ್ಲಾಜೆಯವರ ಮೊಬೈಲ್ ನಂಬರ್ 94480-87039ಕ್ಕೆ 'ಲಂಕೇಶ್' ವರದಿಗಾರ ಕರೆ ಮಾಡಿ, ತಮ್ಮದೊಂದು ಪುಟ್ಟ ಸಂದರ್ಶನ ಮಾಡಬೇಕು ಮನೆಯ ವಿಳಾಸ ನೀಡಿ ಎಂದಿದ್ದಕ್ಕೆ ಶೋಭಾ ಮೇಡಮ್ಮೇ ನೀಡಿದ ವಿಳಾಸವಿದು.

ಉಪಮುಖ್ಯಮಂತ್ರಿಯವರ ಅಧಿಕೃತ ನಿವಾಸವನ್ನೇ ತನ್ನ ನಿವಾಸವೆಂದು ಬಹಿರಂಗ ಸತ್ಯ ಹೇಳುವ ಶೋಭಾ ಮತ್ತು ಉಪಮುಖ್ಯಮಂತ್ರಿ ಯಡ್ಡಿಯ ಸಂಬಂಧ ಅದೆಷ್ಟು ಗಾಢವಾಗಿರಬಹುದು.

ನೀವೇ ಯೋಚಿಸಿನೋಡಿ....



ಬಿಜೆಪಿ ತಿಪ್ಪರಲಾಗ

ಭ್ರಷ್ಟರಿಗೆ ಶರಣಾದ ದುಷ್ಟರು

ರಾಜ್ಯ ಬಿಜೆಪಿ ನಾಚಿಕೆ, ಮಾನ, ಮರ್ಯಾದೆ ಮೂರನ್ನು ಬಿಟ್ಟು ನಿಂತಿದೆ. ಅಧಿಕಾರ ಉಳಿಸಿಕೊಳ್ಳುವ ಸರ್ಕಸ್‌ನಲ್ಲಿ ಗಣಿ ಲಂಚ ಪ್ರಕರಣವನ್ನು ತಿಪ್ಪೆ ಸಾರಿಸಿ ಮುಕ್ತಾಯಗೊಳಿಸಲು ಅದು ಹೆಣಗಾಡುತ್ತಿದೆ. ಆದರೆ ಈ ವಿಸೆಯಲ್ಲಿ ಬಂಡುಕೋರ ನಾಯಕ ಜನಾರ್ಧನ ರೆಡ್ಡಿಗೆ ಕಡಿವಾಣ ಹಾಕುವ ಚಡ್ಡಿಗಳ ಇನ್ನೊಂದು ಪ್ರಯತ್ನ ವಿಫಲವಾಗಿದೆ.

ದೆಹಲಿಯಿಂದ ಸುಷ್ಮಾ ಸ್ವರಾಜ್ ಬಂದು ಬಳ್ಳಾರಿಯಲ್ಲಿ ವರಮಹಾಲಕ್ಷ್ಮಿಯ ನಾಟಕೀಯ ಪೂಜೆ ಮುಗಿಸಿ ಹೊರಡುವ ಮುನ್ನ 'ಮುಖ್ಯಮಂತ್ರಿ ಕುಮಾರಸ್ವಾಮಿ ವಿರುದ್ಧ ರೆಡ್ಡಿ ಹಾಕಿರುವ ಭ್ರಷ್ಟಾಚಾರದ ಹಾಗೂ ಮಾನಹಾನಿ ಕೇಸ್ ವಾಪಸ್ ತೆಗೆದುಕೊಳ್ಳುತ್ತಾರೆ' ಎಂದು ಹೇಳಿ ನಿರ್ಗಮಿಸಿದ್ದರು. ಅದ್ಯಾವ ಧೈರ್ಯದ ಮೇಲೆ ಸುಷ್ಮಾ ಹಾಗೆಂದಿದ್ದರೋ, ರೆಡ್ಡಿ ಆಕೆಯೊಂದಿಗೆ ಅದೇನು ಚರ್ಚಿಸಿದ್ದರೋ ಏನೋ ಆಕೆ ಅತ್ತ ವಾಪಸ್ ಹೊರಟಾಗ "ಯಾವ ಕಾರಣಕ್ಕೂ ಕೇಸ್ ವಾಪಸ್ ತೆಗೆಯೋಲ್ಲ" ಎಂದು ರೆಡ್ಡಿ ಮತ್ತೆ ಗುಡುಗಿದ್ದಾರೆ.

ಜನಾರ್ಧನ ರೆಡ್ಡಿಯವರ ಈ ನಿಲುವು ಅನಿರೀಕ್ಷಿತವೇನಾಗಿರಲಿಲ್ಲ. ಜುಲೈ 7 ನೇ ತಾರೀಖು `150 ಕೋಟಿಯ ಬಳ್ಳಾರಿ ಗಣಿ ಲಂಚ ಪ್ರಕರಣವನ್ನು' ಮೊದಲ ಬಾರಿಗೆ ಸ್ಫೋಟಿಸಿದ್ದ ರೆಡ್ಡಿ ಕಳೆದ ಒಂದು ತಿಂಗಳಿಂದಲೂ ತಮ್ಮ ಹೇಳಿಕೆ ಹಾಗೂ ನಿಲುವಿಗೆ ಬದ್ಧರಾಗೇ ಇದ್ದಾರೆ. ಆದರೆ ತೋಣಚಿ ಹೊಕ್ಕಂತೆ ಆಡುತ್ತಿರುವುದು ಬಿಜೆಪಿ ಪಾರ್ಟಿ ಮಾತ್ರ. ಇದೇ ಮೊದಲ ಬಾರಿಗೆ ದಕ್ಷಿಣ ಭಾರತದಲ್ಲಿ ಅಧಿಕಾರ ಪಡೆದಿರುವ ಬಿಜೆಪಿಗಳಿಗೆ ಹೇಗಾದರೂ ಮಾಡಿ ಗಣಿ ಲಂಚ ಪ್ರಕರಣಕ್ಕೆ ತೆರೆಯೆಳೆದು ಅಧಿಕಾರದಲ್ಲಿ ಮುಂದುವರೆಯುವ ಬಯಕೆ. ಅದಕ್ಕಾಗಿ ಬಿಜೆಪಿಗಳು ಮಾಡದ ಪ್ರಯತ್ನಗಳಿಲ್ಲ, ತ್ಯಾಪೇದಾರಿ ಕೆಲಸಗಳಿಲ್ಲ.

ಜುಲೈ 7 ರಂದು ರೆಡ್ಡಿ ಮೊದಲ ಬಾರಿಗೆ ಕುಮಾರಸ್ವಾಮಿ, ಚೆನ್ನಿಗಪ್ಪ ಹಾಗೂ ಎಂ.ಪಿ. ಪ್ರಕಾಶ್ ವಿರುದ್ಧ ಲಂಚದ ಆರೋಪ ಮಾಡಿದಾಗ ಅದಕ್ಕೆ ರಾಜ್ಯ ಬಿಜೆಪಿಯ ಆಕ್ಷೇಪಣೆ ಇರಲಿಲ್ಲ. ಪಾರ್ಟಿ ರಾಜ್ಯಾಧ್ಯಕ್ಷ ಸದಾನಂದ ಗೌಡರ ಅನುಮತಿ ಪಡೆದೇ ರೆಡ್ಡಿ ಈ ಬಾಂಬ್ ಸ್ಫೋಟಿಸಿದ್ದರು. ಆದರೆ ರೆಡ್ಡಿ ಲಂಚದ ಆರೋಪ ಮಾಡಿದಾಗ ರಾಜ್ಯ ರಾಜಕೀಯದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿತ್ತು. ತಕ್ಷಣ ಇದರಲ್ಲಿ ತಲೆಹಾಕಿದ ಬಿಜೆಪಿ ಸಚಿವ ಆರ್. ಅಶೋಕ್, ರೆಡ್ಡಿ ಹಾಗೂ ಕುಮಾರಸ್ವಾಮಿ ನಡುವೆ ರಾಜಿ ಮಾಡಿಸಲು ಮುಂದಾಗಿದ್ದರು. ಆದರೆ ರೆಡ್ಡಿಯ ಸಿರ್ಧಾರ-ಸಾಮರ್ಥ್ಯದೆದುರು ಇನ್ನೂ ಬಚ್ಚಾ ಆಗಿದ್ದ ಅಶೋಕ ಮಾತಿಗೆ ಬೆಲೆ ಸಿಗಲಿಲ್ಲ.

ಅವತ್ತೇ ರೆಡ್ಡಿ ವಿರುದ್ಧ ಮಾನಹಾನಿ ಕೇಸ್ ಹಾಕುವುದಾಗಿ ಕುಮಾರಸ್ವಾಮಿ ಬೆದರಿಸಿದರಾದರೂ ಅದಕ್ಕೂ ಸೊಪ್ಪು ಹಾಕಲಿಲ್ಲ ಈ ಗಟ್ಟಿ ರೆಡ್ಡಿ. ಈ ಮಧ್ಯೆ ಶೋಭಾ ಕರಂದ್ಲಾಜೆಯ ಕಾಳಜಿಯ ಮೇರೆಗೆ ಕೇರಳದ ತಲಚ್ಚೇರಿ ರಕ್ತೇಶ್ವರಿ ದೇವಿಯ ಪೂಜೆಯಲ್ಲಿ ಮುಳುಗಿಹೋಗಿದ್ದ ಯಡಿಯೂರಪ್ಪ ಕುಮಾರಸ್ವಾಮಿ ರಕ್ಷಣೆಗೆ ನಿಂತರು. ಯಡ್ಡಿ ಪ್ರಕಾರ 'ರೆಡ್ಡಿ ಹೇಳಿಕೆಯನ್ನು ಮಾಧ್ಯಮಗಳು ತಿರುಚಿವೆ. ಮುಖ್ಯಮಂತ್ರಿ ಹೆಸರಿನಲ್ಲಿ ಬೇರೆ ಯಾರೋ ವಸೂಲಿ ನಡೆಸುತ್ತಿದ್ದಾರೆಂದು' ಮಾತ್ರ ರೆಡ್ಡಿ ಹೇಳಿದ್ದಾರೆಂದು ತಾವೇ ರೆಡ್ಡಿಯ ವಕ್ತಾರರಂತೆ ಹೇಳಿಕೆ ನೀಡಿಬಿಟ್ಟರು. ಈ ಮಧ್ಯೆ ರೆಡ್ಡಿಯನ್ನು ದೆಹಲಿಗೆ ಕರೆಸಿಕೊಂಡ ಬಿಜೆಪಿ ರಾಷ್ಟ್ರೀಯ ನಾಯಕರು 'ರೆಡ್ಡಿ ಬಾಯಿ ಮುಚ್ಚಿಕೊಳ್ಳುವಂತೆ' ಗದರಿಸಿ ಕಳುಹಿಸಿದ್ದರು. ಇದರ ಹಿಂದೆಯೇ ಜುಲೈ 15 ರಂದು ರೆಡ್ಡಿಯನ್ನು ಬಲವಂತವಾಗಿ ಕರೆಸಿ ಪತ್ರಿಕಾಗೋಷ್ಠಿ ನಡೆಸಿದ ರಾಜ್ಯ ಬಿಜೆಪಿ ಲೀಡರಗಳು "ಮುಖ್ಯಮಂತ್ರಿ ವಿರುದ್ಧ ರೆಡ್ಡಿ ಲಂಚದ ಆರೋಪ ಮಾಡಿಲ್ಲ" ಎಂದುಬಿಟ್ಟರು. ಅವತ್ತು ರೆಡ್ಡಿಗೆ ಮಾತನಾಡಲೂ ಬಿಡದೆ ಕುತ್ತಿಗೆಗೇ ಕೈಹಾಕಿ ದಬ್ಬಿಕೊಂಡು ಹೋಗಿದ್ದರು. ಈ ಪತ್ರಿಕಾಗೋಷ್ಠಿಗೂ ಮೊದಲು ರೆಡ್ಡಿಯನ್ನು ಮಾತನಾಡಿಸಿದ ಯಡ್ಡಿಗೆ 'ನೀವ್ಯಾರ್ರಿ ನನಗೆ ಹೇಳಲು' ಎಂದು ರೆಡ್ಡಿಯೇ ಬೈಯ್ದಿದ್ದರು.

ಇವೆಲ್ಲಾ ಕ್ಲೈಮ್ಯಾಕ್ಸ್ ತಲುಪಿದ್ದು ಜುಲೈ 20 ರಂದು. ಅವತ್ತು ವಿಧಾನಸಭಾ ಅಧಿವೇಶನದಲ್ಲೇ ಮತ್ತೆ ಮುಖ್ಯಮಂತ್ರಿ ವಿರುದ್ಧ ಲಂಚದ ಆರೋಪ ಮಾಡಿಬಿಟ್ಟರು ರೆಡ್ಡಿ. ಹೀಗೆ ಭ್ರಷ್ಟಾಚಾರದ ವಿರುದ್ಧ ಮತ್ತೆ ಗುಡುಗಿದ ರೆಡ್ಡಿಗೆ ಶಿಸ್ತಿನ, ಪ್ರಾಮಾಣಿಕರ ಪಕ್ಷವೆಂದು ಹೇಳಿಕೊಳ್ಳುವ ಬಿಜೆಪಿಯಿಂದ ಸಿಕ್ಕ ಪ್ರತಿಕ್ರಿಯೆ... ಅಮಾನತ್ತು ಶಿಕ್ಷೆ!.....



ಈ ಗಣಿ ಲಂಚದ ಬೆನ್ನ ಹಿಂದೆಯೇ 'ಲಂಕೇಶ್' ಸ್ಫೋಟಿಸಿದ ಗೌಡರ ಫ್ಯಾಮಿಲಿಯ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯ ಅಕ್ರಮಗಳು ಮುಖ್ಯಮಂತ್ರಿ ಕುಟುಂಬದವರ 85 ಕೋಟಿ ರೂ. ಅಕ್ರಮ ಆಸ್ತಿ ಖರೀದಿ ಹಗರಣಗಳೂ ಬಯಲಾದವು.

ಆದರೆ ತನ್ನ ಮಿತ್ರ ಪಕ್ಷವಾದ ಜೆಡಿಎಸ್ ಬಗ್ಗೆ ಬಿಜೆಪಿ ನಿಲುವು ಈಗಲೂ ಬದಲಾಗಿಲ್ಲ. ಬದಲಾಗಿ ಯಡ್ಡಿ ನಾಯಕತ್ವದ ಬಿಜೆಪಿ ಕೋ-ಜಾ ಬಣ ಗೌಡರ ಫ್ಯಾಮಿಲಿಯ ಭ್ರಷ್ಟ ವ್ಯವಹಾರಗಳ ರಕ್ಷಣೆಗೆ ನಿಂತಿದೆ ಯಾಕೆ.

...... ಅಧಿಕಾರಕ್ಕಾಗಿ ತಾನೆ!

ಬಿಜೆಪಿ ವಿರೋಧ ಪಕ್ಷವಾಗಿದಿದ್ದರೆ ಹೀಗೇ ಇರುತ್ತಿತ್ತಾ?

ಶಿಸ್ತಿನ ಪಕ್ಷ A party with the difference ಎಂದು ಸದಾ ತನ್ನ ಬಗ್ಗೆಯೇ ಹೊಗಳಿಕೊಳ್ಳುವ ಬಿಜೆಪಿಗೆ ಕರ್ನಾಟಕದ ಜನತೆ ಕೆಲ ಪ್ರಶ್ನೆಗಳನ್ನು ಕೇಳಲೇಬೇಕಾಗಿದೆ.

* ಗೌಡರ ಕುಟುಂಬದ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯ ಅಕ್ರಮ ಅದಿರು ಸಾಗಾಣಿಕೆ ಧಂದೆಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ?
* ಬಿಜೆಪಿ ಶಾಸಕ ಜನಾರ್ಧನ ರೆಡ್ಡಿಯೇ ಗಣಿ ಲಂಚ ಪ್ರಕರಣ ಬಯಲಿಗೆಳೆದರೆ ಅದನ್ನು ತನಿಖೆ ಮಾಡಿಸುವ ಬದಲಾಗಿ ರೆಡ್ಡಿಯನ್ನೇ ಪಕ್ಷದಿಂದ ಸಸ್ಪೆಂಡ್ ಮಾಡಿದ್ದು ಏಕೆ?
* ಕೇಸ್ ವಾಪಸ್ ತೆಗೆಸುವಂತೆ ರೆಡ್ಡಿಯ ಮೇಲೆ ಒತ್ತಡ ತರುತ್ತಿರುವುದೇಕೆ?
* ಮುಖ್ಯಮಂತ್ರಿ ಕುಟುಂಬ ವೈಟ್‌ಫೀಲ್ಡ್ ಬಳಿ ಖರೀದಿಸಿರುವ ಬಹುಕೋಟಿ ಆಸ್ತಿ ವ್ಯವಹಾರವು ಕಾನೂನುಬಾಹಿರ ಎಂಬುದು ಸಾಬೀತಾದ ನಂತರವೂ ಬಿಜೆಪಿ ಮೌನವಾಗಿರುವುದೇಕೆ?
* ಗಣಿ ಲಂಚ ನಿಜ ಎಂದು ರೆಡ್ಡಿ ಪದೇಪದೇ ಹೇಳುತ್ತಿದ್ದರೂ ಬಿಜೆಪಿ ಯಾಕೆ 'ಸುಳ್ಳು' ಎನ್ನುತ್ತಿದೆ? ರೆಡ್ಡಿ 'ಕೇಸ್ ವಾಪಸ್ ತೆಗೆಯಲ್ಲ' ಎಂದು ಸಾರಿ ಸಾರಿ ಹೇಳುತ್ತಿದ್ದರೂ 'ಅವರು ಕೇಸ್ ವಾಪಸ್ ತೆಗೆಸುತ್ತಾರೆ' ಎಂದು ಬಿಜೆಪಿಗಳೇ ರೆಡ್ಡಿಯ ವಕ್ತಾರರಂತೆ ಆತುರಾತುರದಿಂದ ಹೇಳಿಕೆ ನೀಡುತ್ತಿರುವುದೇಕೆ?

'ಬಾಂಬೆ ಬ್ಲಾಸ್ಟ್ ಆರೋಪಿ. ಬಾಗಲಕೋಟೆಯಲ್ಲಿ ಅರೆಸ್ಟ್'

ಬಾಂಬೆ ಬ್ಲಾಸ್ಟ್‌ನ ಶಂಕಿತ ಆರೋಪಿ. ಬಾಗಲಕೋಟೆ ಪೊಲೀಸರಿಂದ ಫೈಸಲ್ ಉಲ್ ಹಸನ್ ಸೂರಿಯ ಬಂಧನ!

ಇದು 'ವಿಜಯ ಕರ್ನಾಟಕ' ಎಂಬ ಪಕ್ಕಾ ಚಡ್ಡಿ ಪತ್ರಿಕೆಯ ಮುಖಪುಟದ ಹೆಡ್ಡಿಂಗು!! ಸಂಪೂರ್ಣ ಕಪೋಲಕಲ್ಪಿತ ವರದಿ!

ಇದೇ ಜುಲೈ 29 ರ ಬಾಗಲಕೋಟೆ ಆವೃತ್ತಿಯಲ್ಲಿ ಇಂತಹ ಒಂದು ಸುಳ್ಳು ವರದಿ ಮುಖಪುಟ ವರದಿಯಾಗಿ ಬಂದು, ಪುಂಡರುಗಳನ್ನೆಲ್ಲ ಗಲಭೆಗೆ ಉತ್ತೇಜಿಸುವ ಸಮಾಜದ್ರೋಹಿ ಕೆಲಸ ಮಾಡಲಾಗಿದೆ.

ವಿ.ಕ.ದ ಪ್ರಕಾರ "ಬಂಧನಕ್ಕೊಳಗಾದ" ವ್ಯಕ್ತಿ ಆಗಸ್ಟ್ 1 ರಂದು ಪತ್ರಿಕಾಗೋಷ್ಠಿ ನಡೆಸಿ 'ತನ್ನನ್ನು ಯಾವನೂ ಅರೆಸ್ಟ್ ಮಾಡಿಲ್ಲ, ತಾನು ನಿರಪರಾಧಿ' ಎಂಬುದನ್ನು ಹಾದುಹಗಲೇ ದೃಢಪಡಿಸಿಬಿಟ್ಟ.

ಕೋಮು ಸೌಹಾರ್ದ ಬಯಸುವ ಬಾದಾಮಿ ತಾಲ್ಲೂಕು ಕೆರೂರು ಗ್ರಾಮದ ನಿವಾಸಿ ಫೈಸಲ್ ಉಲ್‌ಹಸನ್ ಸೂರಿಯ ಪರ ನಿಂತ ಹಿಂದೂ-ಮುಸ್ಲಿಮರೆಲ್ಲರೂ 'ವಿಜಯ ಕರ್ನಾಟಕ'ದ ವಿರುದ್ಧ ಕೆರೂರು ಠಾಣೆಯಲ್ಲಿ ದೂರು ದಾಖಲಿಸುವ ಮೂಲಕ ಕೆರೂರು ಜನತೆ ಕೋಮು ಸೌಹಾರ್ದಿಗಳೆಂದು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ.

ಚೆಡ್ಡಿ ವಿ.ಕ.ದ ವಿಕೃತ ವರದಿ

'ವಿಜಯ ಕರ್ನಾಟಕ'ದ ಕೋಮುವಾದಿ ಬುದ್ಧಿ ಗೊತ್ತಿದ್ದೂ ಚಡ್ಡಿ ಶಾಸಕ ವೀರಣ್ಣ ಚರಂತಿಮಠ, ಒಂದಿಬ್ಬರು ಚಡ್ಡಿ ಸ್ವಾಮಿಗಳ ಜೊತೆ ಸೇರಿ "ಈ ಪ್ರದೇಶದಲ್ಲಿ ಲಷ್ಕರ್-ಇ-ತೊಯಿಬಾದ ಚಟುವಟಿಕೆ ಹೆಚ್ಚುತ್ತಿದೆ. ಇದನ್ನು ತಡೆಯಿರಿ" ಎಂದು ಡಿ.ಸಿ.ಗೆ ಮನವಿ ಸಲ್ಲಿಸಿ ಮಂಗಗಳಾಗಿ ಹೋದರು.

ವಿ.ಕ.ದಲ್ಲೊಬ್ಬ ಪಕ್ಕಾ ಚೆಡ್ಡಿ!

ಇಷ್ಟಕ್ಕೆಲ್ಲಾ ಕಾರಣ ವಿ.ಕ.ದ ಸ್ಥಾನಿಕ ಸಂಪಾದಕನಾಗಿರುವ ಯತಿರಾಜ್ ಎಂಬುವವನು. 2002 ರಲ್ಲಿ ಕೆರೂರಿನಲ್ಲಿ ಕೋಮುಗಲಭೆಯಾದಾಗ ಫೈಸಲ್ ಉಲ್ ಹಸನ್ ಕೋಮು ಸೌಹಾರ್ದತೆಗಾಗಿ ಶ್ರಮಿಸಿ, ಹಿಂದೂ ಮುಸ್ಲಿಮರೆಲ್ಲರ ಪ್ರೀತಿಗೆ ಪಾತ್ರನಾಗುತ್ತಾ ಬಂದಿದ್ದ. ಇದೆಲ್ಲ ಯತಿರಾಜನಂತಹ ಚಡ್ಡಿಗಳಿಗೆ ಕೋಪ ತಂದಿತ್ತು. ಸಮಯಕ್ಕಾಗಿ ಕಾಯುತ್ತಿದ್ದ ಯತಿರಾಜ್ 29 ನೇ ತಾರೀಖು ತನ್ನ ಕುತಂತ್ರ ಬುದ್ಧಿ ತೋರಿಸಿಬಿಟ್ಟ.

ಫೈಸಲ್‌ನಿಗೆ ಲಷ್ಕರ್-ಇ-ತೊಯಿಬಾದ ಸಂಪರ್ಕ ಇರುವುದಾಗಿಯೂ, ಬಾಂಬೆ ಬ್ಲಾಸ್ಟ್‌ನಲ್ಲಿ ಆತ ಆರೋಪಿ ಆಗಿರುವುದರಿಂದ ಆತನ ಅರೆಸ್ಟ್ ಮಾಡಲಾಗಿದೆ ಎಂದು ಪುಟ್ಟಾಪೂರಾ ಸುಳ್ಳು ಬರೆದುಬಿಟ್ಟ ಈ ಯತಿರಾಜ ಎಂಬ ಪೆದ್ದ.

ಆಗಸ್ಟ್ 1 ರ ಫೈಸಲ್ ಪತ್ರಿಕಾಗೋಷ್ಠಿಯ ವಿವರಗಳು ಎಲ್ಲಾ ದಿನಪತ್ರಿಕೆಗಳಲ್ಲಿ ಪ್ರಕಟವಾಗಿ ಜನ ವಿ.ಕ.ಕ್ಕೆ ಚಡ್ಡಿ ಎಂಎಲ್‌ಎ ಗ್ಯಾಂಗ್‌ಗೆ ಬಯ್ಯತೊಡಗಿದ್ದಾರೆ. ವಿ.ಕ. ಮಾತ್ರ ಏನೂ ಪ್ರಕಟಿಸದೇ 'ತಿಕ' ಮುಚ್ಚಿಕೊಂಡು ಕುಳಿತಿದೆಯಷ್ಟೇ. ವಿ.ಕ.ದ ವಿಕೃತ ವರದಿಗಳ ಕುರಿತು ಎಚ್ಚರವಿರಲಿ. ಶಾಂತಿ ಕದಡುವ ಇಂತಹ ಪತ್ರಿಕೆಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳಬೇಕಲ್ಲವೆ?

ಬಾಗಲಕೋಟೆಯ ಪೊಲೀಸರು ವಿ.ಕ.ದಷ್ಟೇ ಮಾನಗೇಡಿಗಳಾಗಿದ್ದಾರೆ. ಬಾಗಲಕೋಟೆ ಮೊದಲೇ ಸೂಕ್ಷ್ಮ ಪ್ರದೇಶ ಎಂಬುದನ್ನು ಪೊಲೀಸರು ನೆನಪಿಡಲಿ.

-ಮಲ್ಲಿ

ಈ ಲಾಯರ್ ಮಾನಹಾನಿ ಕೇಸ್ ಗೆದ್ದಿಲ್ಲ

ಜನಾರ್ಧನ್ ರೆಡ್ಡಿ ವಿರುದ್ಧ ಸರ್ಕಾರ ಹಾಕಿರುವ ಮಾನಹಾನಿ ಕೇಸ್ ಅನ್ನು ನಡೆಸುವ ಜವಾಬ್ದಾರಿಯನ್ನು ಗಾಂಧಿನಗರದಲ್ಲಿರುವ ಸಿ.ಎಚ್. ಹನುಮಂತರಾಯ ಎಂಬ ವಕೀಲರಿಗೆ ವಹಿಸಿದೆ ಕುಮಾರಸ್ವಾಮಿ ಸರ್ಕಾರ. ಆದರೆ ಇವರಿಗೆ ಮಾನಹಾನಿ ಕೇಸ್‌ಗಳನ್ನು ಗೆದ್ದಿರುವ ಟ್ರಾಕ್ ರೆಕಾರ್ಡ್ ಇಲ್ಲ ಎನ್ನುತ್ತಿದೆ ವಕೀಲ ಸಮುದಾಯ. ಹನುಮಂತರಾಯರು ಕೆಲವು ಕೊಲೆ ಆರೋಪಿಗಳು, ದರೋಡೆ ಮತ್ತು ಕ್ರಿಮಿನಲ್ ಕೇಸ್‌ಗಳನ್ನು ಗೆದ್ದಿರುವುದು ನಿಜವಾದರೂ, ಭಾರಿ ಸುದ್ದಿಯಾಗಿದ್ದ ಶಂಕರ ಬಿದರಿ ಕೊಲೆ ಕೇಸಿನಲ್ಲಿ ಆರೋಪಿಯಾಗಿದ್ದ ಶ್ರದ್ಧಾನಂದನ ಪರ ವಾದಿಸಿ ಸೋತಿದ್ದಾರೆ. ಇವರ ಎದುರಾಳಿಯಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದ ವಕೀಲ ಸಿ.ಪಿ. ನಾಗೇಶ್‌ರವರೇ ಬುದ್ಧಿವಂತ ಲಾಯರ್ ಎಂಬುದು ಆ ಕೇಸ್‌ನಲ್ಲಿ ಸಾಬೀತಾಗಿತ್ತು.

ಬೇರೆ ಸಂದರ್ಭದಲ್ಲಿ ಮಾನಹಾನಿ ಕೇಸ್ ಎದುರಿಸುತ್ತಿರುವ ಕೆಲ ಪತ್ರಕರ್ತರ ಪರವಾಗಿ ಇದೇ ವಕೀಲ ಹನುಮಂತರಾಯರು ವಾದಿಸಿ ಈಗಾಗಲೇ ಸೋತಿದ್ದಾರೆ. ಹೀಗಿರುವಾಗ ಕುಮಾರಸ್ವಾಮಿ ಹಾಗೂ ಎಂ.ಪಿ. ಪ್ರಕಾಶರ ಮಾನಹಾನಿ ಕೇಸ್ ನಿಜಕ್ಕೂ ದಡ ಸೇರುತ್ತದಾ ಎಂಬುದೇ ಬಹುತೇಕರ ಅನುಮಾನ.



ಇನ್ನೂ ಮೇಲಾಗಿ ಈ ಕೇಸಿನ ಕಾನೂನು ಬದ್ಧತೆಯ ಬಗ್ಗೆಯೂ ಕೆಲವರಿಗೆ ಅನುಮಾನಗಳಿವೆ. ಏಕೆಂದರೆ ಸಿಆರ್‌ಪಿಸಿ ಸೆಕ್ಷನ್ 199(2)ರ ಪ್ರಕಾರ ಪ್ರಧಾನಿ, ಮುಖ್ಯಮಂತ್ರಿಯಂತವರ ಪರವಾಗಿ ಸ್ವತಃ ಸರ್ಕಾರವೇ ಮಾನಹಾನಿ ಕೇಸ್ ಹಾಕಬೇಕೆಂದರೆ ಅದು `in respect of in discharge of his duty' ಎಂಬ ಪೂರ್ವ ಷರತ್ತಿಗೆ ಒಳಪಟ್ಟಿರುತ್ತದೆ. ಆದರೆ ರೆಡ್ಡಿ ಮಾಡಿರುವ ಆರೋಪ ವೈಯುಕ್ತಿಕವಾದದ್ದು, ಮುಖ್ಯಮಂತ್ರಿ ಹಾಗೂ ಪ್ರಕಾಶ್ ಕರ್ತವ್ಯ ನಿರ್ವಹಿಸುವಾಗಿನ ಘಟನೆಗೆ ನೇರವಾಗಿ ಸಂಬಂಧಿಸಿಲ್ಲದಿರುವಂತದ್ದು.

ಅಂದಹಾಗೆ, ರಾಜ್ಯದ ಮುಖ್ಯಮಂತ್ರಿ ಮಾನನಷ್ಟ ಮೊಕದ್ದಮೆ ಹಾಕಿರುವುದು ಇದೇ ಮೊದಲಲ್ಲ. ಹಿಂದೊಮ್ಮೆ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಸುಬ್ರಹ್ಮಣ್ಯ ಸ್ವಾಮಿ ವಿರುದ್ಧ ಮಾನನಷ್ಟ ದಾವೆ ಹೂಡಿದ್ದರು. ಆದರೆ ಅದನ್ನು ಕರ್ನಾಟಕದ ನ್ಯಾಯಾಲಯದ ಮುಂದೆ ಹೂಡುವ ಬದಲಾಗಿ ಮುಂಬೈನಲ್ಲಿ ಹಾಕಿದ್ದರು. ಯಾಕೆಂದರೆ ಕರ್ನಾಟಕದಲ್ಲಿ ಸಿವಿಲ್ ಕೇಸ್ ಹಾಕಬೇಕಾದರೆ ಮಾನನಷ್ಟವಾಗಿದೆ ಎಂದು ಕೋರಿ ಹೂಡುವ ದಾವೆಯ ಶೇ. 15 ರಷ್ಟು ಹಣವನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಆದರೆ ಮಹಾರಾಷ್ಟ್ರದಲ್ಲಿ ಇಂತಹ ನಿರ್ಬಂಧಗಳಿಲ್ಲ. ಕೊನೆಗೆ ಸುಬ್ರಹ್ಮಣ್ಯ ಸ್ವಾಮಿ ಮತ್ತು ಹೆಗಡೆ ರಾಜಿಸೂತ್ರ ಮಾಡಿಕೊಂಡು ಕೇಸ್ ಅನ್ನು ವಾಪಸ್ಸು ಪಡೆದಿದ್ದರು.


ಇಲ್ಲಿ ಇಂದಿನ ಮುಖ್ಯಮಂತ್ರಿ ತನಗೇ ಮಾನನಷ್ಟ ಆಗಿದೆಯೆಂದು ಖಾಸಗಿ ವಕೀಲರನ್ನು ಪಡೆದು, ನ್ಯಾಯಾಲಯಕ್ಕೆ ಹಣವನ್ನು ಸಲ್ಲಿಸಿ, ಕೇಸಿಗೆ ತಗಲುವ ವೆಚ್ಚವನ್ನು ತನ್ನ ಜೇಬಿನಿಂದ ಭರಿಸುವ ಬದಲಾಗಿ ಹನುಮಂತರಾಯರನ್ನು ವಿಶೇಷ ಪ್ರಾಸಿಕ್ಯೂಟರ್ ಎಂದು ನೇಮಿಸಿ ಸರ್ಕಾರದ ಖಜಾನೆಯಿಂದ ಅವರ ಫೀ ಕಟ್ಟುತ್ತಿದ್ದಾರೆ.



ಮಾನನಷ್ಟ ಆಗಿದ್ದರೆ ಅದು ಕುಮಾರಸ್ವಾಮಿಯವರಿಗೆ ಹೊರತು ಕರ್ನಾಟಕದ ಮಾನವಲ್ಲ ಎಂದು ಇವರಿಗ್ಯಾಗ ಹೇಳುವವರ್ಯಾರು?

ಪಾಂಡಿತ್ಯವುಳ್ಳವರು ಬಹಳ ಮಂದಿ, ಆದರೆ ಬುದ್ಧಿ ವಿವೇಕವುಳ್ಳವರು ಬಹಳ ಕಡಿಮೆ -ಡೆಮಾಕ್ರಿಟಸ್

ನಾವು ಗೆಳೆಯರೆಲ್ಲ ಶರಭಿ ಎಂದೇ ಕರೆಯುತ್ತಿದ್ದ ಡಾ. ಬಿ. ಎಂ. ಶರಭೇಂದ್ರಯ್ಯ ದೊಡ್ಡ 01.08.2006ರ ...ಗಳವಾರ ಬೆಳಗ್ಗೆ ಹೃದಯಾಘಾತದಿಂದ ನಮ್ಮನ್ನಗಲಿದ. ...ತ್ನಿ, ಮಗು, ಮಗಳು ರಚನಾ ಹಾಗೂ ಅಪಾರವಾದ ...ಗೆಳೆಯರ ಬಳಗವನ್ನು ಆತ ಬಿಟ್ಟು ಹೋದ. ಶರಭಿಗೆ 4? ವರುಷವಾಗಿತ್ತು ಅಷ್ಟೆ. ಆತ ಹುಟ್ಟಿದ್ದು ಜಗಳೂರು ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿ. ಚಿತ್ರದುರ್ಗದಲ್ಲಿ ಪದವಿ ಶಿಕ್ಷಣ ಮುಗಿಸಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 1987ರಲ್ಲಿ ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದಿದ್ದ. 1991ರಿಂದ 1996ರವರೆಗೆ ಮೈಸೂರು ವಿಶ್ವವಿದ್ಯಾ...ಲಯದಲ್ಲಿ ಯುಜಿಸಿ ಫೆಲೊಶಿಪ್ ನೆರವಿನಲ್ಲಿ ಸಂಶೋಧನೆ ...ನಡೆಸಿದ. 'ಸ್ವಾತಂತ್ರ್ಯೋತ್ತರ ಕನ್ನಡ ನಾಟಕಗಳು : ಪೌರಾಣಿಕ, ಚಾರಿತ್ರಿಕ ಮತ್ತು ಜಾನಪದೀಯ ನೆಲೆಗಳ ಅಧ್ಯಯನ' ಎಂಬ ವಿಷಯ ಕುರಿತು ಡಾ. ಕುಮಾರ ಚಲ್ಯ ಅವರ



ಆನಂದದ ಅರಿವಿನ ಶರಭಿ

ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಮಹಾಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾನಿಲಯದಿಂದ 2005ರಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದ.

ಮೈಸೂರಿನಲ್ಲಿದ್ದಾಗ ಶರಭಿ, ಆಕರ್ಷಕ ಮುಖದ ತುಂಬ ಗಡ್ಡ ಬಿಟ್ಟುಕೊಂಡು, ಹೊಳೆವ ಕಣ್ಣುಗಳೊಂದಿಗೆ ಸ್ಲಿಮ್ ಆಗಿ ಪಾದರಸದಂತಿದ್ದ. 1996ರಲ್ಲಿ ಚಿತ್ರದುರ್ಗದ ಸರ್ಕಾರಿ ಪ್ರಥಮ ದರ್ಜೆ ಸೈನ್ಸ್ ಕಾಲೇಜಿನಲ್ಲಿ ಅಧ್ಯಾಪಕನಾದ. ನಂತರ ಆತನ ಶರೀರ ದಪ್ಪವಾಗುತ್ತ ಹೋಯಿತು. ಕಳೆದ ಒಂದು ವರುಷದಿಂದ ಮತ್ತೆ ಆ ದಪ್ಪ ದೇಹ ಸ್ವಲ್ಪ ಸಣ್ಣಗಾಗಿತ್ತು. ಶರಭಿಯ ನಗುವಿನಲ್ಲಿ ನಿರಂತರವಾಗಿ ಉತ್ಸಾಹ ಚಿಮ್ಮುತ್ತಿತ್ತು. ಮಾತುಗಾರಿಕೆಯಲ್ಲಿ ಹಸಿದವರ, ನೊಂದವರ, ಅಸಹಾಯಕರ ಪರವಾದ ಧ್ವನಿಯಿತ್ತು. ಸಾಮಾಜಿಕವಾಗಿ ಬಂಡಾಯಗಾರನಾಗಿದ್ದ ಆತನೊಳಗೆ ಶೋಷಿತರ ದುಃಖ-ದುಮ್ಮಾನಗಳಿಗೆ ತಟ್ಟನೆ ಮಿಡಿಯುವ ಮಾತೃ ಹೃದಯವಿತ್ತು.

ಆರ್ಥಿಕ ಅಸಮಾನತೆಯ ವ್ಯವಸ್ಥೆಯು ಬಡತನವನ್ನು ಶರಭಿಯ ಬೆನ್ನಿಗೆ ಕಟ್ಟಿತ್ತು. ಶರಭಿ ತನ್ನ ಜೀವನದುದ್ದಕ್ಕೂ ಇದರ ವಿರುದ್ಧ ಹೋರಾಡುತ್ತಲೇ ಬಂದಿದ್ದ. ಆತನ ಈ ಪರಿಸ್ಥಿತಿಯೆ ಆತನೊಳಗೆ ಒಬ್ಬ ಸಾತ್ವಿಕ ಬಂಡಾಯಗಾರನನ್ನು ಹುಟ್ಟಿಸಿತ್ತು. ಕೆಳಜಾತಿಯವರು ತಮ್ಮ ಸಮುದಾಯದ ಸಂಪ್ರದಾಯಗಳನ್ನು ಬಿಟ್ಟರೆ ಅದನ್ನು ಅವರ ಸಂಪ್ರದಾಯಸ್ಥರು ವಿರೋಧಿಸುತ್ತಾರೆ. ಮೇಲುಜಾತಿಯವರು ತಮ್ಮ ಸಮುದಾಯದ ಸಂಪ್ರದಾಯಗಳನ್ನು ಬಿಟ್ಟರೆ ಅದನ್ನು ಅವರ ಸಂಪ್ರದಾಯಸ್ಥರು ಅಪಮಾನಿಸುತ್ತಾರೆ. ಶರಭಿ ಇಂತಹ ಅಪಮಾನಗಳ ವಿರುದ್ಧ ತನ್ನ ಬದುಕನ್ನು ರೂಪಿಸಿಕೊಂಡಿದ್ದ. ಸಂಪ್ರದಾಯಸ್ಥ ಸಮಾಜ ಕೆಲವೊಮ್ಮೆ ಶರಭಿಯನ್ನು ಒಂದು ಬಗೆಯ ಉಪೇಕ್ಷೆಯಿಂದಲೂ ನೋಡಿತ್ತು. ಹಾಗಾಗಿಯೆ ಆತನಿಗೆ ನಾದಿನಾದ್ಯಂತ ಜಾತ್ಯತೀತ ಗೆಳೆಯರಿದ್ದರು. ಶರಭಿ ಇಲ್ಲವಾದಾಗ ಆತನ ಅಪಾರ ಗೆಳೆಯರ ಹೃದಯಗಳು ಭಾರವಾಗಿದ್ದವು; ಕಣ್ಣುಗಳು ತೇವಗೊಂಡಿದ್ದವು.

ಶರಭಿ 1988ರಲ್ಲೆ ವೈಚಾರಿಕ ಮತ್ತು ವಿಮರ್ಶಾ ಬರವಣಿಗೆಯನ್ನು ಶುರುಮಾಡಿದ್ದ. 88ರಿಂದ 93ರವರೆಗೆ ಆತ ಬರೆದ 12 ಲೇಖನಗಳನ್ನು ಸೇರಿಸಿ 1993ರಲ್ಲಿ 'ಆನಂದ ಮತ್ತು ಅರಿವು' ಎಂಬ ವಿಮರ್ಶಾ ಸಂಕಲನವನ್ನು ಪ್ರಕಟಿಸಿದ. ಎಂ.ಎ. ಮುಗಿಸಿದ ತಕ್ಷಣ ಲೇಖನ ಬರೆಯಲು, ಪುಸ್ತಕ ಪ್ರಕಟಿಸಲು ಅಕಾಡೆಮಿಕ್ ವಲಯದ ಯಜಮಾನಿಕೆ ಕೀಳರಿಮೆಯನ್ನು ಹುಟ್ಟುಹಾಕಿದೆ. ಹೊಸದಾಗಿ ಬರೆಯುವವರ ಧೈರ್ಯವನ್ನು ಕಿತ್ತುಕೊಂಡಿದೆ. ವಿಶೇಷವೆಂದರೆ ಶರಭಿ ಎಂ.ಎ. ಮುಗಿಸಿದ ತಕ್ಷಣ ವಿಮರ್ಶೆ ಬರೆದು, ನಾನೂ ಬರೆಯಬಲ್ಲೆ ನೋಡಿ ಎಂದು ಆ ಯಜಮಾನಿಕೆಯ ವಿರುದ್ಧ ಸೆಡ್ಡು ಹೊಡೆದಿದ್ದ. ಈ ಸ್ವಾಭಿಮಾನಿ ಪ್ರತಿರೋಧವೇ ಆತನಿಗೆ ಸ್ವತಂತ್ರವಾಗಿ ಆಲೋಚನೆ ಮಾಡುವುದನ್ನು ಕಲಿಸಿತ್ತು. ಔಪಚಾರಿಕ ಶಿಕ್ಷಣದ ಸರಕಾರಿ ತಿಳುವಳಿಕೆ ಬರಿ ಬೋಗಸ್ ಎಂಬುದನ್ನು ತಿಳಿಸಿತ್ತು. ಎಂ.ಎ. ಮುಗಿಸಿದವರು ಈ ಛಲ ತೊಡಬೇಕೆಂಬುದನ್ನು ಶರಭಿಯ ಬರವಣಿಗೆ ಪರೋಕ್ಷವಾಗಿ ಒತ್ತಾಯಿಸಿತ್ತು.

ಆನಂದ ಮತ್ತು ಅರಿವಿಗೆ ಇರುವ ಸಂಬಂಧವನ್ನು ವೈಚಾರಿಕವಾಗಿ ವಿಶ್ಲೇಷಿಸಿಕೊಂಡು, ಅದರ ಮೂಲಕ ಇಡೀ ಕನ್ನಡ ಸಾಹಿತ್ಯದ ಶ್ರೇಣೀಕೃತ ಪರಂಪರೆಗಳನ್ನು ಆತ ಮೌಲ್ಯಮಾಪನ ಮಾಡಿದ್ದ. ಈ ಸಂಕಲನದಲ್ಲಿ 'ಒಂದು ಪ್ರಾಯೋಗಿಕ ವಿಮರ್ಶೆ' ಎಂಬ ಲೇಖನವಿದೆ. ಅದರಲ್ಲಿ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಗುತ್ತಿ ಊಟ ಮಾಡುವಾಗ ಹುಲಿಯಾ ಅದನ್ನು ನೋಡುತ್ತಿದ್ದ ಒಂದು ಸನ್ನಿವೇಶದ (ಸುಮಾರು ಮುಕ್ಕಾಲು ಪುಟದ) ಬಗ್ಗೆ ಆರು ಪುಟಗಳ ಸೂಕ್ಷ್ಮಾತಿಸೂಕ್ಷ್ಮ ಒಳನೋಟಗಳುಳ್ಳ ಗಟ್ಟಿ ವಿಮರ್ಶೆಯನ್ನು ಶರಭಿ ಬರೆದಿದ್ದಾನೆ. ಒಂದು ಸಾಧಾರಣ ಸನ್ನಿವೇಶವನ್ನು ಮತ್ತು ಬೃಹತ್ ಕಾದಂಬರಿಯನ್ನು ಅಸಾಧಾರಣ ಗ್ರಹಿಕೆಯಿಂದ ಹಾಗೂ ವಿವಿಧ ಸಾಮಾಜಿಕ ದೃಷ್ಟಿಕೋನಗಳಿಂದ ಹೇಗೆ ನೋಡಬಹುದು ಎಂಬುದಕ್ಕೆ ಅದೊಂದು 'ಅತ್ಯುತ್ತಮ ಉದಾಹರಣೆ. ಈ ಚೊಚ್ಚಲ ಬರವಣಿಗೆಯಲ್ಲೆ ಶರಭಿಯು, ವಸ್ತು ವಿಷಯದ ಆಳವಾದ ಗ್ರಹಿಕೆ, ವಿಸ್ತಾರವಾದ ಆಲೋಚನೆ ಮತ್ತು ಖಚಿತವಾದ ಮಂಡನೆಗಳನ್ನು ರೂಢಿಸಿಕೊಂಡಿದ್ದ. ಸಾಹಿತ್ಯ ವಿಮರ್ಶೆಯಲ್ಲಿ ಸಿದ್ಧ ಮಾದರಿಯ ಗ್ರಹಿಕೆ ಮತ್ತು ರೆಡಿಮೇಡ್ ಹೇಳಿಕೆಗಳ ವಿರುದ್ಧ ವೈಚಾರಿಕ ಪ್ರತಿರೋಧ ಒಡ್ಡಿದ್ದ. ಶೋಷಿತರ ಮತ್ತು ಅಪಮಾನಿತರ ನೆಲೆಯಿಂದ ವಿಮರ್ಶೆಯ ಮಾನದಂಡಗಳು ಹುಟ್ಟಬೇಕೆಂಬ ದಾರಿಯಲ್ಲಿ ನಡೆದಿದ್ದ. ಹಾಗಾಗಿಯೆ ಸಾಹಿತಿಗೂ – ಆತನ ಸಾಹಿತ್ಯಕ್ಕೂ ಇರುವ ಸಂಬಂಧ ಮತ್ತು ದಲಿತರಿಗೂ – ದಲಿತ ಸಾಹಿತ್ಯಕ್ಕೂ ಇರುವ ಸಂಬಂಧಗಳನ್ನು ಸಮಾಜವಾದಿ ನೆಲೆಯಿಂದ ಗ್ರಹಿಸಿದ್ದ. ಶರಭಿ ಒಬ್ಬ ಪ್ರಬುದ್ಧ ಸಮಾಜವಾದಿ ವಿಮರ್ಶಕನಾಗುವ ಪ್ರಬಲವಾದ ಸೂಚನೆಗಳನ್ನು ಆ ಸಂಕಲನದಲ್ಲಿ ತೋರಿಸಿದ್ದ.


ಇದಾದ ನಂತರ ಎಂಟು ವರುಷಗಳವರೆಗೆ ಶರಭಿ ಏನನ್ನೂ ಪ್ರಕಟಿಸಿದಂತೆ ಕಾಣುವುದಿಲ್ಲ. ಅನಂತರ 'ಸುಮ್ಮಲ್ಲರ ಭಾರತಿ' ನಾಟಕ (2001), 'ಮುಗಿಲಾದರೂ ಮುನಿಸು ಬಿಟ್ಟಿಲ್ಲ' ಕವನ ಸಂಕಲನ (2003), 'ಕೆಂಡದ ಮಳೆ ಮತ್ತು ಉದಕ' ವಿಮರ್ಶೆ (2003), 'ಬಲ್ಲಿದರೊಡನೆ ಬವರ ವಿಚಾರ' ವಿಮರ್ಶೆ (2004), 'ಸುಳಿಯೊಡೆದ ಬೆಳೆ' (1998), 'ನಿಮ್ಮ ಚಮ್ಮಾವುಗೆಯ ಬಂಟ' ಸಂಪಾದನೆ (2002). – ಈ ಬರವಣಿಗೆಗಳಲ್ಲಿ ಶರಭಿಯ ಚೊಚ್ಚಲ



ಕೃತಿಯಲ್ಲಿರುವ ಆಳವಾದ ಮತ್ತು ಖಚಿತವಾದ ಗ್ರಹಿಕೆಯು ಸ್ವಲ್ಪ ಸಡಿಲಗೊಂಡಿರುವಂತೆ, ಉದಾರಗೊಂಡಿರುವಂತೆ ಕಾಣುತ್ತದೆ. ಪ್ರಾಯಶಃ ಶರಭಿಯ ಬದುಕಿನಲ್ಲಿಯ ಭೌತಿಕ ಪಲ್ಲಟಗಳು ಆತನ ಆಲೋಚನೆಗಳನ್ನು ಹೀಗೆ ಪ್ರಭಾವಿಸಿರಬಹುದೆ ಎಂದು ಅನಿಸುತ್ತದೆ.

2004ರ ಡಿಸೆಂಬರಿನಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಕನ್ನಡ ಸಾಹಿತ್ಯದ ರಿಫ್ರೆಶರ್ ಕೋರ್ಸಿನಲ್ಲಿ ಶರಭಿ ಅಭ್ಯರ್ಥಿಯಾಗಿ ಭಾಗವಹಿಸಿದ್ದ. ಆಗ ಈತನ ಜೊತೆಗೆ ರಾಜಪ್ಪ ದಳವಾಯಿ ಮತ್ತು ಭೂಮಿಗೌಡ ಒಳ್ಳೆಯ ಕಂಪನಿಯಾಗಿದ್ದರು. ತಮ್ಮ ನೇರ ಸಂವಾದಗಳ ಮೂಲಕ ಇಡೀ ಕೋರ್ಸನ್ನು ಬೆಚ್ಚಗಿಟ್ಟದ್ದರು.


ಪದವಿ ಮತ್ತು ಸ್ನಾತಕ ತರಗತಿಗಳಲ್ಲಿ ಎರಡು ವಿಧದ ಅಧ್ಯಾಪಕರಿರುತ್ತಾರೆ. ಒಂದು ಮನೋಧರ್ಮದವರು ವಿದ್ಯಾರ್ಥಿಗಳನ್ನು ಕೇವಲ ಎಜುಕೇಟ್ ಮಾಡುತ್ತಾರೆ. ಮತ್ತೊಂದು ಮನೋಧರ್ಮದವರು ವಿದ್ಯಾರ್ಥಿಗಳನ್ನು ಓರಿಯೆಂಟ್ ಮಾಡುತ್ತಾರೆ. ಶರಭಿ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಓರಿಯೆಂಟ್ ಮಾಡುತ್ತಿದ್ದ. ಸಮಾಜದ ಎಲ್ಲ ಬಗೆಯ ಶೋಷಣೆ, ಅಸಮಾನತೆ ಹಾಗೂ ಅನ್ಯಾಯಗಳ ವಿರುದ್ಧ ರಾಜಿರಹಿತವಾಗಿ ಆಲೋಚಿಸುವಂತೆ ಮತ್ತು ಹೋರಾಡುವಂತೆ ಅವರನ್ನು ಎಚ್ಚರಗೊಳಿಸುತ್ತಿದ್ದ. ವಿಶ್ವವಿದ್ಯಾಲಯಗಳಲ್ಲೇ ಹೀಗೆ ಓರಿಯೆಂಟ್ ಮಾಡುವ ಅಧ್ಯಾಪಕರ ಕೊರತೆ ಇರುವಾಗ, ಶರಭಿ ಪದವಿ ತರಗತಿಗಳಲ್ಲೇ ಇದನ್ನು ಮಾಡುತ್ತಿದ್ದ ಎಂಬುದು ಬಹಳ ಮುಖ್ಯ. ಶೋಷಿತರನ್ನು ಶೋಷಣೆಯ ವಿರುದ್ಧ ಓರಿಯೆಂಟ್ ಮಾಡುವ ಧೋರಣೆಯನ್ನು ಶರಭಿ ಚಿಂತಕರಿಗೆ, ಸಾಹಿತಿಗಳಿಗೆ ಹಾಗೂ ಅಧ್ಯಾಪಕ ವಲಯಕ್ಕೆ ಬಿಟ್ಟುಹೋಗಿದ್ದಾನೆ. ಅದನ್ನು ಮುಂದುವರಿಸುವುದೇ ಆತನಿಗೆ ನಾವು ಸಲ್ಲಿಸಬೇಕಾಗಿರುವ ನಮನ.



ಶರಭಿ, ನಗು ಮತ್ತು ಮಾತುಗಳನ್ನು ಬೆರೆಸುತ್ತಿದ್ದ ನಿನ್ನ ನಗು ಮುಖದ ಭಾವ ನಮಗೆ ಇನ್ನೂ ಹಸಿರಾಗಿದೆ. ಶರಭಿ, ಹೋಗಿ ಬಾ. ನಮಸ್ಕಾರ.

ಡಾ. ಬಿ.ಎಂ. ಪುಟ್ಟಯ್ಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶರಭಿಗೆ ಶರಣು



ಹದಿನೆಂಟು ವರ್ಷಗಳ ಹಿಂದೆ ಡಾ. ಶರಭೇಂದ್ರಯ್ಯ ಚಿತ್ರದುರ್ಗ ಸೀಮೆಯ ಎಲ್ಲ ಲಕ್ಷಣಗಳನ್ನು ಹೊತ್ತು ಮಾನಸ ಗಂಗೋತ್ರಿಗೆ ಎಂ.ಎ. ಮಾಡಲು ಬಂದಾಗ ನಾನು ಅವನ ಸಹಪಾಠಿ ...ಷ್ಟೇ ಅಲ್ಲ, ಹಾಸ್ಟೆಲ್‌ನಲ್ಲಿ ರೂಮ್‌ಮೇಟ್ ...ೂಡ ಆಗಿದ್ದೆ. ಅಲ್ಲಿಂದ ಅವನ ಸಾವಿ... ...ನಕ ನಮ್ಮ ಸಂಬಂಧ, ಒಡನಾಟ ಎಂದೂ ಕೆಟ್ಟಿರಲಿಲ್ಲ. ಹದಿನೆಂಟು ವರ್ಷದ ಗೆಳೆಯ... ...ೊಬ್ಬನ ಸಾವು ನನ್ನ ಜೀವಂತಿಕೆಯನ್ನು ...ಪ್ರಶ್ನಿಸುತ್ತಿದೆ.

ಮುರುಘಾಮಠದ ಪ್ರಭಾವದಿಂದ ಬಂದ... ಶರ... ...ಂದೆ ಆ ಮಠಕ್ಕೆ ಉತ್ತರಾಧಿಕಾರಿಯಾಗುವ... ...ಅರ್ಹತೆ, ಜನಪ್ರಿಯತೆಗಳನ್ನು ಸಂಪಾದಿಸಿದ್ದ. ಆದರೆ ಮೈಸೂರಿನ ಮಾನಸಗಂಗೋತ್ರಿಯ ಅಧ್ಯಯನ ಸಂಸ್ಥೆಯ... ವಾತಾವರಣ ಅವನ ದಿಕ್ಕನ್ನು ಬದಲಿಸಿ ಸಾಹಿತ್ಯದ... ಕಡೆಗೆ ಸೆಳೆಯಿತು. ಮಠ ಮಾನ್ಯರ ಪರಂಪರೆ ಮತ್ತು ವೈಚಾರಿಕತೆ ಎನ್ನುವ ಎರಡು ವಿರುದ್ಧ ಧ್ರುವಗಳಲ್ಲಿ ತನ್ನ ಆಯ್ಕೆ ಯಾವುದು ಎನ್ನುವ ತೀರ್ಮಾನಕ್ಕೆ ಮೊದಲೇ ಅವನು ಸಾಹಿತ್ಯದ ಬರವಣಿಗೆಯನ್ನು ಪ್ರಾರಂಭಿಸಿದ್ದ... ಕನ್ನಡ ಸಾಹಿತ್ಯಕ್ಕೆ ಎಂಟು ಕೃತಿಗಳನ್ನು ಕೊಟ್ಟ ಶರೂವಿನ ಎಲ್ಲಾ ಕೃತಿಗಳಲ್ಲೂ ಈ ದ್ವಂದ್ವ ಎದ್ದು ಕಾಣುತ್ತದೆ... 'ಕೆಂಡದ ಮಳೆ...' ಎಂದು ಶೀರ್ಷಿಕೆ ಕೊಟ್ಟು ವಿಮರ್ಶೆ... ಯನ್ನು ಬರೆಯುವ ಶರೂ 'ನಿಮ್ಮ ಚಮ್ಮಾವುಗೆಯ ಬಂಟ ನಾನು' ಎಂದು ಸ್ವಾಮಿಗಳ ಕುರಿತು ಪುಸ್ತಕ... ಬರೆಯುತ್ತಿದ್ದ. ಅಪಾರ ಮನುಷ್ಯ ಪ್ರೀತಿ ತೋರುತ್ತಿದ್ದ... ಶರೂ ತುಂಬಾ ಸ್ನೇಹಿತರನ್ನು ಸಂಪಾದಿಸಿದ್ದ. ಒಳ್ಳೆಯ... ವಾಗ್ಮಿಯಾಗಿದ್ದ. ಅಪಾರ ವಿದ್ಯಾರ್ಥಿಗಳ ಪ್ರೀತಿಪಾತ್ರ... ಗುರುವಾಗಿದ್ದ. ಆದರೆ, ಬರವಣಿಗೆಯಲ್ಲಿ ತನ್ನ ವ್ಯಕ್ತಿತ್ವಕ್ಕೆ ವಿರೋಧವಾದ ಕೆಟ್ಟ ವಿಡಂಬನೆಯ ಗುಣವನ್ನು... ತೋರುತ್ತಿದ್ದ. ಇತ್ತೀಚೆಗೆ ಅವನು ಗೋಷ್ಠಿಗಳಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗ ಬರೆದ... 'ಫೆಲೋಶಿಪ್ ಪದ್ಯಗಳು' (ಅಪ್ರಕಟಿತ) ಓದುತ್ತಿದ್ದ. ಆ... ಕವಿತೆಗಳ ಮುಖ್ಯ ಧೋರಣೆ ಗ್ರಾಮಾಂತರ ಪ್ರದೇಶದಿಂದ... ಮಾನಸ ಗಂಗೋತ್ರಿಗೆ ಸಂಶೋಧನೆಗಾಗಿ ಬರುವ... ವಿದ್ಯಾರ್ಥಿಗಳು ಸಂಶೋಧನೆಯೊಂದನ್ನು ಬಿಟ್ಟು ಉಳಿದೆಲ್ಲ... ಕೆಲಸ ಮಾಡುತ್ತಾರೆ; ವಿಷಯ ಲಂಪಟರಾಗಿದ್ದಾರೆ ಎಂಬುದನ್ನು ರೂಪಕಗಳಲ್ಲಿ ಕಟ್ಟಿಕೊಳ್ಳುತ್ತಿದ್ದ. ಆದರೆ... ತಾನು ಅದಕ್ಕೆ ಹೊರತಾಗಿರಲಿಲ್ಲ ಎಂದು ತನ್ನನ್ನು... ಪ್ರಶ್ನಿಸಿಕೊಳ್ಳಲಿಲ್ಲ.

ಅವನು ರೂಮಿನಲ್ಲಿ ಎಂದೂ ಗಂಭೀರ... ವಾಗಿ ಕುಳಿತು ಓದುವುದನ್ನು ನಾನು ಕಾಣಲೇ... ಇಲ್ಲ. ಆದರೆ, ಅವನು ಎಂ.ಎ. ಪದವಿಯಲ್ಲಿ... ಶೂನ್ಯ ಸಂಪಾದನೆ ಪತ್ರಿಕೆಯಲ್ಲಿ ಗೋಲ್ಡ್ ಮೆಡಲ್ ಪಡೆದ. ತುಂಬ ಸೂಕ್ಷ್ಮಮತಿಯೆಂದು... ಹೆಸರುಗಳಿಸಿದ್ದ. ಎಲ್ಲಾ ಒತ್ತಡಗಳ ನಡುವೆ ಪಿಎಚ್.ಡಿ ಪದವಿಯನ್ನೂ ಪಡೆದ. ಅವನ... ಮೊದಲ ಕೃತಿ 'ಆನಂದ ಮತ್ತು ಅರಿವು'ನಲ್ಲಿ... ಅವೆರಡನ್ನು ನಮಗೆ ಕೊಟ್ಟು, ಆದರೆ ಅವನೇ... ಇಲ್ಲವಾದ. ನಮ್ಮ ಶತಮಾನದ ಗೆಳೆಯರ... ಪ್ರೀತಿಪಾತ್ರನಾದ ಶರೂವೇ ಸಾವಿನ ಖಾತೆಯನ್ನು ಮೊದಲು... ತೆರೆಯುತ್ತಾನೆ ಎಂಬುದು ಅವನು ಬದುಕಿದ್ದಾಗ ನಮಗೆ... ತಿಳಿಯಲಿಲ್ಲ. ಶರಭಿ ನಿನಗೆ ಶರಣು.

–ಡಾ. ವೆಂಕಟೇಶ್ ಇಂದ್ವಾಡಿ...

ಶಾಲೆ-ಕಾಲೇಜು ಮಂಜೂರು ಬೇಕು ಬೇಕಾದಲ್ಲಿಗೆ ಸಿಂಹಪಾಲು!

ವಿಕಾವಿಕಿ ರಾಜ್ಯ ಸರ್ಕಾರ ಒಂದೇ ಏಟಿಗೆ 340 ಪ್ರೌಢಶಾಲೆ, 194 ಪದವಿಪೂರ್ವ ಕಾಲೇಜುಗಳನ್ನು ಬೇಕು ಬೇಕಾದ ಸ್ಥಳಗಳಿಗೆ ಹಂಚಿಬಿಟ್ಟಿದೆ. ಹಿಂದುಳಿದ ಪ್ರದೇಶಗಳಲ್ಲಿ ಹೊಸ ಶಾಲೆ, ಕಾಲೇಜುಗಳ ಸ್ಥಾಪನೆ ತುರ್ತಾಗಿ ಆಗಬೇಕಿದೆ ಎನ್ನುವ ನಂಜುಂಡಪ್ಪ ವರದಿಯ ಆಶಯಗಳನ್ನು ಈ ಸರ್ಕಾರ ತಯ್ಯಾರಾಗಿಬಿಟ್ಟಿದೆಯಾ? ಚೆಕ್ ಮಾಡಿ ನೋಡಿದರೆ ಖಂಡಿತ ನಿರಾಶೆಯಾಗುತ್ತದೆ. ಏಕೆಂದರೆ ಇಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಿಗೆ ನ್ಯಾಯವೂ ಸಿಕ್ಕಿಲ್ಲ ಲಾಭವೂ ಆಗಿಲ್ಲ. ಸರ್ಕಾರದ ಕೆಲವೇ ಕೆಲವು ಪ್ರಭಾವಿಗಳ ಪ್ರದೇಶಗಳಿಗೆ ಬಹುತೇಕ ಶಾಲೆ-ಕಾಲೇಜುಗಳನ್ನು ನೀಡುವ ಮೂಲಕ ಕೋ-ಜಾ ಸರ್ಕಾರ ತನ್ನ ತಾರತಮ್ಯ ಬುದ್ಧಿಯನ್ನು ಮತ್ತೊಮ್ಮೆ ಜಗಜ್ಜಾಹೀರುಗೊಳಿಸಿದೆ.

ಶೇ. 90 ರಷ್ಟು ಶಾಲೆ-ಕಾಲೇಜುಗಳನ್ನು ಆಡಳಿತದ ಪಾಲುದಾರ ಪಕ್ಷಗಳ ಪ್ರಭಾವಿಗಳ ಕ್ಷೇತ್ರಗಳಿಗೇ ಮಂಜೂರು ಮಾಡಲಾಗಿದೆ.



ಧ್ರುವನಾರಾಯಣ್

ಹಿಂದುಳಿದ ಚಾಮರಾಜನಗರ ಪ್ರದೇಶವನ್ನು ಅಲಕ್ಷಿಸಿ ಹೊಳೆನರಸಿಪುರ ಮತ್ತು ರಾಮನಗರಗಳಿಗೆ ಗರಿಷ್ಠ ಶಾಲಾ-ಕಾಲೇಜುಗಳನ್ನು ಮಂಜೂರು ಮಾಡುವ ಮೂಲಕ ಕುಮಾರಸ್ವಾಮಿ, ರೇವಣ್ಣರ ಬೆಂಬಲಿಗರನ್ನು ತೃಪ್ತಿಗೊಳಿಸುವ ಕೆಲಸ ಮಾಡಲಾಗಿದೆ.

ಹೋಗಲಿ, ಈ ಹೊಸ ಸರ್ಕಾರಿ ಪ್ರೌಢಶಾಲೆಗಳಿಗೆ ಸರ್ಕಾರ ಒದಗಿಸಲಿರುವ ಬೋಧನಾ ಸಿಬ್ಬಂದಿಯಾದರೂ ಎಷ್ಟು?


ಒಂದು ಶಾಲೆಗೆ ಒಬ್ಬ ಮುಖ್ಯೋಪಾಧ್ಯಾಯ, ಇಬ್ಬರು ಸಹಶಿಕ್ಷಕರು ಮತ್ತು ಒಬ್ಬ ಗ್ರೂಪ್-ಡಿ ನೌಕರ ಮಾತ್ರವಂತೆ! ಆರ್ಥಿಕ ಇಲಾಖೆಯ ನಿರ್ಬಂಧಗಳು ನೂರಾರು ಇವೆ. ಹಾಸನ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗಂತೂ ಮ್ಯಾಕ್ಸಿಮಮ್ ಸ್ಕೂಲ್-ಕಾಲೇಜುಗಳನ್ನು ನೀಡಿ ಕೃತಾರ್ಥವಾಗಿದೆ ಈ ಸರ್ಕಾರ. ಯಾವ ಹೊಸ ಹುದ್ದೆಗಳನ್ನು ಸೃಷ್ಟಿಸದೇ, ಲಭ್ಯವಿರುವ ಬೋಧನಾ ಸಿಬ್ಬಂದಿಯಲ್ಲೇ ಹೊಸ ಶಾಲಾ-ಕಾಲೇಜುಗಳ... ಬೋಧನಾ ಸಿಬ್ಬಂದಿ ವ್ಯವಸ್ಥೆ ಮಾಡುತ್ತಾರಂತೆ!

ಈಗಿರುವ ಶಾಲಾ-ಕಾಲೇಜುಗಳಿಗೆ ಸರಿಯಾದ ಮೂಲ ಸೌಕರ್ಯಗಳಿಲ್ಲ, ಸರಿಯಾದ ಬೋಧನಾ ಸಿಬ್ಬಂದಿಯಿಲ್ಲ. ಹಿಂದುಳಿದ ಪ್ರದೇಶಗಳನ್ನು ಅಲಕ್ಷಿಸಿ ಈಗ ಮಂಜೂರು ಮಾಡಿರುವುದನ್ನು ಹಿಂದುಳಿದ ಪ್ರದೇಶವಾದ ಸಂತೆಮಾರನಹಳ್ಳಿ ತಾಲ್ಲೂಕಿನ ಎಂಎಲ್‌ಎ ಧ್ರುವನಾರಾಯಣ್ ವಿರೋಧಿಸಿ ರಾಜ್ಯಪಾಲರ ಮೊರೆ ಹೋಗಿದ್ದಾರೆ. ನ್ಯಾಯ ಸಿಕ್ಕುವುದಾ?

ಬೆತ್ತಲೆ ಪ್ರಕರಣದ ಆರೋಪಿ ಈಗ ನಗರಸಭಾ ಸದಸ್ಯ

ಉಡುಪಿ

ಕಳೆದ ವರ್ಷ, ಅಂದರೆ 2005 ಮಾರ್ಚ್ 13, ಭಾನುವಾರ, ಮುಸ್ಸಂಜೆಯ ಹೊತ್ತಿಗೆ ಉಡುಪಿಯ ಹೊರವಲಯದ ಆದಿ ಉಡುಪಿ ಎಂಬಲ್ಲಿ ಒಂದು ಪೈಶಾಚಿಕ ಕೃತ್ಯ ನಡೆಯಿತು. 'ಹಿಂದೂ ಯುವ ಸೇನೆ' ಎಂಬ ಸಂಘಟನೆಗೆ ಸೇರಿದ ಕೆಲವರು 60 ವರ್ಷದ ಹಾಜಬ್ಬ ಮತ್ತು ಅವರ ಮಗ ಹಸನಬ್ಬರನ್ನು ದನಕರು ಸಾಗಿಸುತ್ತಿದ್ದರು ಎಂಬ ಕಾರಣಕ್ಕೆ ಸಂಪೂರ್ಣ ಬೆತ್ತಲೆಗೊಳಿಸಿ, ಎರಡು ಗಂಟೆಗಳಷ್ಟು ಕಾಲ ಸತತವಾಗಿ ಅವರನ್ನು ಹಿಂಸಿಸಿದರು. ಅದೊಂದು ಕ್ರೀಡೆಯೋ ಎಂಬಂತೆ ನೂರಾರು ಜನ ಈ ಭೀಬತ್ಸವನ್ನು ನಿಂತು ನೋಡಿದರು. ಮಾರನೆಯ ದಿನ ಹಾಜಬ್ಬ, ಹಸನಬ್ಬರ ಬೆತ್ತಲೆ ಫೋಟೋ ಪತ್ರಿಕೆಗಳಲ್ಲಿ ಪ್ರಕಟವಾಗಿ ವಿಧಾನಸಭೆಯಲ್ಲಿ ದೊಡ್ಡ ಕೋಲಾಹಲವಾಯಿತು.



ಯಶಪಾಲ್ ಸುವರ್ಣ

ಈಗ ಈ ಘಟನೆಯ ಪ್ರಮುಖ ಆರೋಪಿ ಹಾಗೂ ಹಿಂದೂ ಯುವಸೇನೆಯ ಪದಾಧಿಕಾರಿ ಯಶಪಾಲ್ ಸುವರ್ಣ ಅವರನ್ನು ಸರಕಾರ ಉಡುಪಿ ನಗರ ಸಭೆಗೆ ನಾಮಕರಣ ಸದಸ್ಯರನ್ನಾಗಿ ನೇಮಿಸಿದೆ! ಈ ನೇಮಕಾತಿ, ಶಾಸಕ ರಘುಪತಿಭಟ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ವಿ.ಎಸ್. ಆಚಾರ್ಯ (ಬಿಜೆಪಿ)ರ ಶಿಫಾರಸ್ಸಿನ ಮೇರೆಗೆ ನಡೆದಿದೆ. ಉಡುಪಿಗೆ ಏನು ಸೇವೆ ಸಲ್ಲಿಸಿದ್ದಾರೆ ಎಂದು ಯಶಪಾಲ್ ಸುವರ್ಣರಿಗೆ ಈ ಹುದ್ದೆ? ಅಥವಾ ಈ ಊರಿಗೆ ಶಾಶ್ವತ ಕಳಂಕವಾಗಿರುವ ಹಾಗೂ ಮನುಷ್ಯ ಮಾತ್ರನಾದವನು ನಾಚಿ ತಲೆತಗ್ಗಿಸುವ ಘಟನೆಯೊಂದಕ್ಕೆ ಕಾರಣಕರ್ತರಾದದ್ದೇ ಅವರು ಮಾಡಿದ ಸೇವೆಯೋ?

ಉಡುಪಿಯ ಹಾಲೀ ಶಾಸಕರು ಮತ್ತು ಉಸ್ತುವಾರಿ ಸಚಿವರ ನ್ಯಾಯಪ್ರಜ್ಞೆ ಯಾವ ಮಟ್ಟದ್ದು ಎಂದು ತಿಳಿಯಲು ಇದೊಂದೇ ನಿದರ್ಶನ ಸಾಕು. ಸದರಿ ಸಚಿವರ ಮಗ, ಡಾ. ಕಿರಣ ಆಚಾರ್ಯ, ಇತ್ತೀಚೆಗೆ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಉಡುಪಿಯ ಇಬ್ಬರು ಪತ್ರಕರ್ತರ ಮೇಲೆ ದಾಳಿ ನಡೆಸಿದ್ದರು. ಪ್ರಕರಣದ ಬಗ್ಗೆ ಎರಡು ಕಡೆಯವರೂ ಪರಸ್ಪರರ ವಿರುದ್ಧ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಈ ಬಗ್ಗೆ ಶಾಸಕರು ಮತ್ತು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಂಧಾನ ಸಭೆಯಲ್ಲಿ ಉಸ್ತುವಾರಿ ಸಚಿವ ಆಚಾರ್ಯ, ಆದಿ ಉಡುಪಿ ಘಟನೆಯ ಫೋಟೋ ತೆಗೆದ ಪತ್ರಕರ್ತ ಉಮೇಶ್ ಮಾರ್ಪಳ್ಳಿಯವರನ್ನು "ಬೆತ್ತಲೆ ಫೋಟೋ ತೆಗೆಯುವ ಫೋಟೋಗ್ರಾಫರ್" ಎಂದು ಹೀಯಾಳಿಸಿದರು. ಆದಿ ಉಡುಪಿಯಲ್ಲಿ ನಡೆದದ್ದು ಸೆಕ್ಸ್ ಶೋ ಅಲ್ಲ, ಅದು ಮಾನ-ಘನತೆಯ ಮೇಲೆ ನಡೆದ ಹಲ್ಲೆ, ಆದರೆ ಆಚಾರ್ಯ ಥರದವರಿಗೆ ಇದೆಲ್ಲ ಹೇಗೆ ಅರ್ಥ ಆಗಬೇಕು? ಉಡುಪಿಯ ಶಾಸಕರದ್ದೂ ಅದೇ ಲೆವೆಲ್. ಹಿಂದೂ ಧರ್ಮದ ಹೆಸರಿನಲ್ಲಿ ಇಬ್ಬರು ಗಂಡಸರನ್ನು ನೂರಾರು ಜನರ ಎದುರು ಬೆತ್ತಲುಗೊಳಿಸಿ ಹೊಡೆಯುವುದು ಇವರಿಗೆ ಅನ್ಯಾಯವೆಂದು ತೋರುವುದಿಲ್ಲ; ಆದರೆ ಆ ಘಟನೆಯ ಫೋಟೋ 'ಅಶ್ಲೀಲ'ವಂತೆ! ಇದೂ ಸಾಲದು ಎಂಬಂತೆ ಈಗ ಇವರು ಈ ಘಟನೆಯ ರೂವಾರಿಗೆ ನಗರಸಭಾ ಸದಸ್ಯತ್ವವನ್ನೂ ದಯಪಾಲಿಸಿ ಉಡುಪಿ ನಗರ ಸಭೆಯನ್ನು ಕೌರವರ ಆಸ್ಥಾನವನ್ನಾಗಿ ಮಾರ್ಪಡಿಸಿದ್ದಾರೆ. ಇವರು ಅಧಿಕಾರದಲ್ಲಿರುವಷ್ಟು ಕಾಲ ಹಾಜಬ್ಬ, ಹಸನಬ್ಬರಿಗೆ ನ್ಯಾಯ ಸಿಗುವುದಿಲ್ಲ, ಆದರೆ ಉಡುಪಿಯಲ್ಲಿ ಈ ಬಗ್ಗೆ ಶಾಸಕ ಹಾಗೂ ಉಸ್ತುವಾರಿ ಸಚಿವರನ್ನು ಯಾರೂ ಪ್ರಶ್ನಿಸುವ ಧೈರ್ಯ ಸಹ ತೋರಿಸುತ್ತಿಲ್ಲ, ಬಿಜೆಪಿ ಮತ್ತು ಸಂಘಪರಿವಾರ ಇಲ್ಲಿ ಅಂತಹ ಭಯದ ವಾತಾವರಣವನ್ನು ನಿರ್ಮಿಸಿದೆ.

ದೇವೇಗೌಡರಿಗೆ ಪಂಚೆ ಕೊಡಿ!



ಹಾಜಬ್ಬ ಮತ್ತು ಹಸನಬ್ಬ

ಕಳೆದ ವರ್ಷ ಈ ಬೆತ್ತಲೆ ಪ್ರಕರಣ ನಡೆದ ಕೆಲ ದಿನಗಳ ನಂತರ ಮಣ್ಣಿನ ಮಗ ದೇವೇಗೌಡರ ಸವಾರಿ ಉಡುಪಿಗೆ ಚಿತ್ತೈಸಿತ್ತು. ನೆನಪಿಡಿ. ಆಗ ಅವರು ಬಿಜೆಪಿಯ ಶತ್ರುಪಾಳಯದಲ್ಲಿದ್ದರು. ಉಡುಪಿಯ ಒಂದು ಪತ್ರಿಕಾಗೋಷ್ಠಿಯಲ್ಲಿ ಅವರು "ಇಲ್ಲಿ ಮೊನ್ನೆ ಕೆಲವರ ಬಟ್ಟೆ ಬಿಚ್ಚಿದ್ದಾರಂತೆ; ಆದರೆ ನಾನು ಪಂಚೆ ಗಟ್ಟಿ ಕಟ್ಟಿಕೊಂಡು ಬಂದಿದ್ದೇನೆ" ಎಂದರು; ಗೌಡರ ನಗೆಹನಿ! ಈಗ ಮಣ್ಣಿನ ಮೊಮ್ಮಗ ಅರ್ಥಾತ್ ಅವರ ಕುಮಾರ ಕಂಠೀರವನ ಸರ್ಕಾರವೇ ಉಡುಪಿಯಲ್ಲಿ ಬೆತ್ತಲು ಮಾಡಿದವರನ್ನು ಪುರಸ್ಕರಿಸಿದೆ. ಪಾಪ, ದೇವೇಗೌಡರು ಈ ಬಗ್ಗೆ ಏನು ಹೇಳಿಯಾರು? ಅವರೇ ಜನರೆದುರು ಬೆತ್ತಲೆ ನಿಂತಿದ್ದಾರೆ.

ಯಾರಾದರೂ ದಯವಿಟ್ಟು ದೇವೇಗೌಡರಿಗೆ ಒಂದು ಪಂಚೆ ಕೊಡಿ.

-ಜಿ. ರಾಜಶೇಖರ

ಕೈ ಎತ್ತಿ ನಿಂತ ವಿನಿವಿಂಕ್ ಶಾಸ್ತ್ರಿಯ ಶಿಷ್ಯ!

ರಾಯಚೂರು

ವಿನಿವಿಂಕ್ ಶಾಸ್ತ್ರಿಯ ಶಿಷ್ಯ ಯದುನಾಥ ಜನರಿಗೆ ನಾಮ ಹಾಕಿದ್ದು 5 ಕೋಟಿಯಾ, 8 ಕೋಟಿಯಾ ಇಲ್ಲಾ ಬರೋಬ್ಬರಿ 14 ಕೋಟಿಯಾ?

ಲೆಕ್ಕವೇ ಸಿಗುತ್ತಿಲ್ಲ ರಾಯಚೂರಿನ ಜನಕ್ಕೆ. ವಿನಿವಿಂಕ್ ಒಂದೇ ಸಂಸ್ಥೆಯ ವಿರುದ್ಧ ಈಗ ಜಿಲ್ಲಾ ಗ್ರಾಹಕ ನ್ಯಾಯಾಲಯದಲ್ಲಿ ಒಬ್ಬರೇ ವಕೀಲರು 116 ಪ್ರಕರಣಗಳ ಕುರಿತು ವಾದಿಸುತ್ತಿರುವುದೂ ಗಿನ್ನಿಸ್ ದಾಖಲೆಯಾಗುವುದೇನೋ? ಆ ಪರಿ ಜನ ಮುಗಿಬಿದ್ದಿದ್ದಾರೆ ಗ್ರಾಹಕರ ನ್ಯಾಯಾಲಯಕ್ಕೆ. ಈಗಾಗಲೇ 56 ಪ್ರಕರಣಗಳಲ್ಲಿ ತೀರ್ಪು ಬಂದಿದ್ದು ವಿನಿವಿಂಕ್ ಶಾಸ್ತ್ರಿ ಹಣ ಮರಳಿ ನೀಡಬೇಕಾಗಿದೆ. ಇಲ್ಲಾ ಇನ್ನೊಂದಿಷ್ಟು ಜೈಲು ಶಿಕ್ಷೆ ಅನುಭವಿಸಬೇಕಿದೆ.

ಟೈಮ್ಸ್ ಆಫ್ ಇಂಡಿಯಾ ವರದಿಗಾರ, ವಕೀಲ ಶ್ರೀಪಾದರ ಹೋರಾಟದಿಂದ ಮೋಸ ಹೋದವರಿಗೆ ಒಂದಿಷ್ಟು ನ್ಯಾಯ ಸಿಗುತ್ತಿದೆ. ಈ ಕಾರಣಕ್ಕಾಗಿ ಶ್ರೀಪಾದ ವಕೀಲರ ಹೆಸರು ಗಿನ್ನಿಸ್ ರೆಕಾರ್ಡ್ ಸೇರುತ್ತಿದೆ!

ಯಾವನಿವನೀ ಯದುನಾಥ?

ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ (SBH)ನ ಪಿಗ್ಮಿ ಏಜಂಟ್ ಆಗಿದ್ದ ಈ ಯದುನಾಥ್ ಜಿಲ್ಲೆಯಲ್ಲಿ ವಿನಿವಿಂಕ್ ಪರವಾಗಿ ದುಡ್ಡು ಕಲೆಕ್ಟ್ ಮಾಡಿದ್ದ. ಶಾಸ್ತ್ರಿ ಓಡಿ ಹೋಗುವ ಮುನ್ಸೂಚನೆ ಪಡೆದಿದ್ದ ಯದುನಾಥ್ ತನ್ನ ವಾಸವಿನಗರದ ಮನೆಯನ್ನು ಹೆಂಡ್ತಿ ಹೆಸರಿಗೆ ವರ್ಗಾಯಿಸಿ, ಹೆಂಡ್ತಿ-ಮಕ್ಕಳ ಸಮೇತ 2 ತಿಂಗಳು ಎಲ್ಲೋ ಓಡಿಹೋಗಿಬಿಟ್ಟಿದ್ದ. ಈಗ ಪ್ರತ್ಯಕ್ಷನಾಗಿರುವ ಯದುನಾಥ್ ಬಗಲೆತ್ತಿ ಬಿಟ್ಟಿದ್ದಾನೆ. ವಿನಿವಿಂಕ್ ಹೆಸರಲ್ಲಿ ಎಲ್ಲಾ ಹಣ ಗುಳುಂ ಮಾಡಿ ಕುಳಿತಿದ್ದಾನೆ.

ಜಿಲ್ಲಾ ಗ್ರಾಹಕರ ನ್ಯಾಯಾಲಯದಿಂದ ಎಷ್ಟು ಜನರಿಗೆ ದುಡ್ಡು ವಾಪಸ್ ಬರುತ್ತದೋ ಎನ್ನುವುದನ್ನು ತಿರುಪತಿ ತಿಮ್ಮಪ್ಪನೇ ಬಲ್ಲ!

-ನೀಮಕರ್

ಪಾತಕಿ ಬಸಪ್ಪ ಹರಿಜನ ಸಿಕ್ಕ!

ಕಿರಾತಕ ಭಾಗಪ್ಪ ಎಲ್ಲಿ?

ಗುಲ್ಬರ್ಗಾ

ಕೊನೆಗೂ ಕಲ್ಬುರ್ಗಿ ಪೊಲೀಸರು ಭೀಮಾತೀರದ ಹಂತಕ ಬಸಪ್ಪ ಹರಿಜನನನ್ನು ಹಿಡಿದುಕೊಂಡು ಬಂದಿದ್ದಾರೆ....!

ಭೀಮಾ ತೀರದ ಸುಪಾರಿ ಹಂತಕನಾಗಿದ್ದ ಚಂದಪ್ಪ ಹರಿಜನನ ಕಿರಿಯ ಸಹೋದರನಾಗಿರುವ ಬಸಪ್ಪ ಶರಣಪ್ಪ ಹರಿಜನ ಕಳೆದ ಹನ್ನೊಂದು ವರ್ಷಗಳಿಂದ ಪೊಲೀಸರ ಕೈಗೆ ಸಿಗದೇ ಅವರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ. ತನ್ನ ಸಹೋದರ ಚಂದಪ್ಪ ಹರಿಜನ ಹಾಗೂ ಕೇಶಪ್ಪತಾವರಖೇಡ ಜೊತೆಗೂಡಿ ನಡೆಸಿದ ಅನೇಕ ಕೊಲೆ, ಸುಲಿಗೆ ಅಪಹರಣ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಬಸಪ್ಪನನ್ನು ಪೊಲೀಸರು ಕಳೆದ 11 ವರ್ಷಗಳಿಂದ ಹುಡುಕುತ್ತಿದ್ದರು.

ಪಾತಕ ಲೋಕಕ್ಕೆ....

ಬಸಪ್ಪ ಪಾತಕಲೋಕಕ್ಕೆ ಮೊಟ್ಟಮೊದಲ ಬಾರಿಗೆ ಎಂಟ್ರಿ ಪಡೆದಾಗ ಈತನಿಗೆ ಹದಿನೆಂಟರ ಹದಿಹರೆಯದ ವಯಸ್ಸು....!


ಮೊದಲ ಬಾರಿಗೆ ಈತ ಅಫಜಲಪುರ ತಾಲ್ಲೂಕಿನ ಬಳೂರ್ಗಿ ಗ್ರಾಮದ ಸಮಾಜಕಂಟಕನಾಗಿದ್ದ ಬಾಬು ಗುತ್ತೇದಾರನ ದೌರ್ಜನ್ಯದ ವಿರುದ್ಧ ಸೆಟೆದು ನಿಂತು ಆತನನ್ನು ಕತ್ತರಿಸಿ ಹಾಕಿದ.

ಈ ಪ್ರಕರಣದಲ್ಲಿ ಬಂಧಿತನಾಗಿ ಜೇಲು ಕಂಡ ಬಸಪ್ಪ ಕೆಲ ದಿನಗಳ ನಂತರ ಜಾಮೀನು ಪಡೆದು ಹೊರಬಂದವನು ಆನಂತರ ಪೊಲೀಸರ ಕೈಗೆ ಸಿಗಲೇ ಇಲ್ಲ.

ಹನ್ನೊಂದು ವರ್ಷಗಳ ಹಿಂದೆ ಅಂದರೆ 1995ರ [illegible] ದಿನ ಸೊನ್ನ ಗ್ರಾಮದಲ್ಲಿ [illegible] ಬಸಪ್ಪ ಹರಿಜನ ಅಲ್ಲಿನ್ನ ಚಂದ್ರಕಾಂತ ಜಮಾದಾರ [illegible]ವನನ್ನು ಊರ ಮಧ್ಯೆಯೇ ಕೊಂದುಹಾಕಿ ಪರಾರಿಯಾದ. ನಂತರ ಚಂದಪ್ಪ ಹರಿಜನ ಹಾಗೂ ಕೇಶಪ್ಪ ತಾವರಖೇಡ ಜೊತೆಗೂಡಿ ಅನೇಕ ಕೊಲೆ, ಸುಲಿಗೆ, ಅಪಹರಣಗಳಲ್ಲಿ ಪಾಲ್ಗೊಂಡಿದ್ದರು.

ಕಳೆದ ಹನ್ನೊಂದು ವರ್ಷಗಳಿಂದ ತಲೆ ಮರೆಸಿಕೊಂಡು ಪೊಲೀಸರಿಗೆ ಚಳ್ಳೆಹಣ್ಣು ತಿನಿಸುತ್ತಿದ್ದ ಹಂತಕ [illegible] ಹರಿಜನ ಸಿಂದಗಿ ತಾಲ್ಲೂಕಿನ ಆಲಮೇಲ್‌ಕ್ಕೆ [illegible] ಬರುವ ಮೆಸೇಜ್ ಪೊಲೀಸರಿಗೆ ದೊರಕಿದೆ.

ಅಫ್ಜಲಪುರ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಡಿ. ಗಜಕೋಶ ಅವರು ಮಾಹಿತಿಯನ್ನು ಖಚಿತ ಪಡಿಸಿಕೊಂಡು ತಮ್ಮ ಸಿಬ್ಬಂದಿಗಳೊಂದಿಗೆ 29.7.2006 ರ ಶುಕ್ರವಾರ ಆಲಮೇಲ್‌ಗೆ ಬಂದು ಬಸಪ್ಪನಿಗಾಗಿ ಹೊಂಚುಹಾಕಿ ಕುಳಿತಿದ್ದಾರೆ. ಮಧ್ಯಾಹ್ನ ಬಜಾರದಲ್ಲಿ ಬಸಪ್ಪನ ಮುಖ ಕಾಣುತ್ತಿದ್ದಂತೆಯೇ ಪೊಲೀಸರು ಈತನ ಮೇಲೆ ಮುಗಿಬಿದ್ದು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಭಾಗಪ್ಪ ಹರಿಜನ

ಭಾಗಪ್ಪ ಎಲ್ಲಿ....?

ಕಲ್ಬುರ್ಗಿ ಪೊಲೀಸರು ಬಸಪ್ಪ ಹರಿಜನನ್ನು ಬಂಧಿಸಿ ತಂದ ಮೇಲೆ ಈಗ ಚಂದಪ್ಪ ಹರಿಜನನ ಸಹಚರ ನಟೋರಿಯಸ್ ಕಿಲ್ಲರ್ ಭಾಗಪ್ಪ ಹರಿಜನನ ಬೆನ್ನು ಬಿದ್ದಿದ್ದಾರೆ.

ಭೀಮಾ ತೀರದ ಸುಪಾರಿ ಹಂತಕ ಚಂದಪ್ಪ ಹರಿಜನ ತಂಡದ ಕೊನೆಯ ಕೊಂಡಿಯಾಗಿರುವ ಭಾಗಪ್ಪನ ತಲೆಯ [illegible] ಪಲು ಸುಪಾರಿ ಕೊಲೆಗಳು ಸೇರಿದಂತೆ ದರೋಡೆ, ಅಪಹರಣ ಹಾಗೂ ಸುಲಿಗೆಯ ಅನೇಕ ಪ್ರಕರಣಗಳಿವೆ. ಕಲ್ಬುರ್ಗಿ, ವಿಜಾಪೂರ, ಬೀದರ್ ಹಾಗೂ ಮಹಾರಾಷ್ಟ್ರದ ಸೋಲಾಪುರ ಈ ನಾಲ್ಕು ಜಿಲ್ಲೆಗಳ ಪೊಲೀಸರು ವರ್ಷಾನುಗಟ್ಟಲೇ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಭಾಗಪ್ಪನಿಗಾಗಿ ಹುಡುಕಾಡುತ್ತಿದ್ದಾರೆ.

ಕಳೆದ ಒಂದು ದಶಕದಿಂದಲೂ ತನ್ನ ಇರುವಿಕೆಯ ಗುಟ್ಟು ಯಾರಿಗೂ ಬಿಟ್ಟುಕೊಡದೇ ಸ್ಥಳ ಬದಲಾಯಿಸುತ್ತ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿರುವ ಭಾಗಪ್ಪ ಈ ಹಿಂದೆ ಎರಡು ಬಾರಿ ಪೊಲೀಸರ ಮೇಲೆ ಗುಂಡುಹಾರಿಸಿ ತಪ್ಪಿಸಿಕೊಂಡವನು ಈವರೆಗೂ ಪೊಲೀಸರ ಕೈಗೆ ಸಿಕ್ಕೇ ಇಲ್ಲ...!

ಬ್ಯಾಡಗಿಹಾಳದವ.....

ಭೀಮಾನದಿ ದಂಡೆಯ ಬ್ಯಾಡಗಿ ಹಾಳದವನಾದ ಭಾಗಪ್ಪ ಹರಿಜನ ಮೊದಲ ಬಾರಿಗೆ ಪಾತಕ ಲೋಕಕ್ಕೆ ಕಾಲಿಟ್ಟಾಗ ಆತನಿಗೆ ಇಪ್ಪತ್ತರ ಹರೆಯ. ತನ್ನೂರಿನ ಭೂಮಾಲೀಕನೊಬ್ಬ ತನ್ನದೇ ಜಾತಿಯ ಹೆಣ್ಣುಮಗಳೊಬ್ಬಳ ಮೇಲೆ ಬಲಾತ್ಕಾರ ಮಾಡಿದಾಗ ಭಾಗಪ್ಪ [illegible] ಅದೊಂದು ದಿನ ಮಾನಭಂಗ ಮಾಡಿದ [illegible] ಎಲ್ಲರೆದುರು ಕತ್ತರಿಸಿ ಹಾಕಿದ. ಕೊಂದ ಮೇಲೆ ಈತ ನೇರವಾಗಿ ಹೋಗಿದ್ದು ಚಂದಪ್ಪ ಹರಿಜನನ ಹತ್ತಿರ.

ನಂತರ 4.9.1997 ರಲ್ಲಿ ಆಲಮೇಲ್ ಮನೆಯೊಂದರ ಮೇಲೆ ದಾಳಿ ಮಾಡಿ ಢಕಾಯಿತಿ ನಡೆಸುವ ಮೂಲಕ ಲಕ್ಷಾಂತರ ರೂಪಾಯಿ ಹಣ ಲೂಟಿ ಮಾಡಿದ. ಇದಾದ ಐದು ತಿಂಗಳ ನಂತರ ಅಂದರೆ 18.2.1998 ರಂದು ಮತ್ತೆ ಆಲಮೇಲ್‌ಗೆ ಬಂದು ದಳಪತಿ ಮಗನನ್ನು ಪಿಸ್ತೂಲ್‌ನಿಂದ ಕೊಂದು ಹಾಕಿದ.

1999 ರಲ್ಲಿ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರ ಮಠವೊಂದರಲ್ಲಿ ಚಂದಪ್ಪ ಹಾಗೂ ಭಾಗಪ್ಪ ಇರುವ ಮಾಹಿತಿ ಪೊಲೀಸರಿಗೆ ದೊರಕಿತು. ಸಿಕ್ಕ ಮಾಹಿತಿಯಂತೆ ಪೊಲೀಸರು ಮಠದ ಮೇಲೆ ದಾಳಿ ಮಾಡಿದಾಗ ಚಂದಪ್ಪ ಹಾಗೂ ಭಾಗಪ್ಪ ಇಬ್ಬರೂ ಪೊಲೀಸರ ಮೇಲೆ ಗುಂಡು ಹಾರಿಸುತ್ತಲೇ ಪರಾರಿಯಾದರು.

ಚಂದಪ್ಪ ಹರಿಜನನ ಬೆನ್ನುಬಿದ್ದಿದ್ದ ಕಲ್ಬುರ್ಗಿ ಪೊಲೀಸರು 12.5.2000 ರಂದು ಸೋಲಾಪುರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ವಳಸಂಗ ಗ್ರಾಮದ ಮೇಲೆ ದಾಳಿ ನಡೆಸಿದಾಗ ಭಾಗಪ್ಪ ಪ್ರತಿ ಗುಂಡು ಹಾರಿಸುತ್ತ ಪರಾರಿಯಾದ. ಆದರೆ ಪೊಲೀಸರ ಗುಂಡಿಗೆ ಈತನ ಗುರು ಚಂದಪ್ಪ ಬಲಿಯಾದ.

ನಂತರ 2003 ರಲ್ಲಿ ಅಫಜಲಪುರ ತಾಲ್ಲೂಕಿನ ಶಿರವಾಳ ಗ್ರಾಮದಲ್ಲಿ [illegible] ಭಾಗಪ್ಪ ನಾಲ್ವರನ್ನು ಗುಂಡಿಕ್ಕಿ ಕೊಂದು ಪರಾರಿಯಾದವನು ಇವತ್ತಿಗೂ ಎಲ್ಲಿದ್ದಾನೆಂದು ಯಾರಿಗೂ ಗೊತ್ತಿಲ್ಲ.

ಈಗ [illegible]

ಚಳಿಗಾಲದಲ್ಲಿ ಕೌದಿಯನ್ನು ಮೈಮೇಲೆ ಎಳೆದು ಕೊಂಡಾಗೆಲ್ಲಾ ಅದು ಗೋಡೆಯ ಮೇಲೆ ಆನೆಯಂತೆ ತೊನೆಯುವ ನೆರಳನ್ನು ಕಾಣಿಸಿದಾಗೆಲ್ಲಾ ನನ್ನ ಮನಸ್ಸು ಮರುಹಾದ ಗುಹೆ ಥಟ್ಟನೆ ಧಾವಿಸಿ ಅಲೆದಾಡಲು ತೊಡಗುತ್ತೆ. ಅಲೆಅಲೆಯಾಗಿ ಒತ್ತರಿಸಿ ಬರುವ ನೆನಪುಗಳೆಂದರೆ!

ನನ್ನ ಕೌದಿಯ ಬಗ್ಗೆ ರಮ್ಯ ಕಥೆಯೊಂದನ್ನು ಹೇಳಲು ಹೊರಟವಳಲ್ಲ. ಕೌದಿಯೊಂದಿಗೆ ರಮ್ಯಕಥೆಯೊಂದು ತಳುಕು ಹಾಕಿಕೊಂಡಿರಬಲ್ಲದು ಎಂದೂ ಅನ್ನಿಸಿಲ್ಲ. ಸಾಧಾರಣ ಕಂಬಳಿಯೊಂದು ಕೌದಿಯಷ್ಟು ಬೆಚ್ಚಗನ್ನಿಸಲಾರದು ನಿಜ. ಆದರೂ ಗೋಡೆಯ ಮೇಲಿನ ಅದರ ನೆರಳು ಈ ಕೌದಿಯ ತೂಗಿ ತೊನೆಯುವ ಕಪ್ಪು ನೆರಳಂತೆ ಹೆದರಿಕೆ ಹುಟ್ಟಿಸುವುದಿಲ್ಲ. ನನ್ನ ಅಣ್ಣತಮ್ಮಂದಿರ ಮತ್ತವರ ಸ್ನೇಹಿತರ ಜೊತೆ ಗುದ್ದಾಡಿಕೊಂಡು ಕಳೆಯುತ್ತಿದ್ದ ಚಿಕ್ಕಂದಿನ ದಿನಗಳ ಕಥೆ ಇದು. ಯಾಕಷ್ಟು ಜಗಳಗಂಟಿಯಾಗಿದ್ದೆನೋ. ಬೇರೆ ಹೆಣ್ಣುಮಕ್ಕಳು ಆದಷ್ಟೂ ಅಭಿಮಾನಿಗಳನ್ನು ಗಳಿಸುವ ಪ್ರಯತ್ನದಲ್ಲಿ ನಿರತರಾಗಿದ್ದಾಗ ನಾನು ಸಿಕ್ಕವರ ಜೊತೆಯೆಲ್ಲಾ ಕಚ್ಚಾಡುವುದರಲ್ಲಿ, ಚಪ್ಪಲಿಗಳನ್ನು ಬೀಸಿ ಎಸೆಯುವುದರಲ್ಲಿ ಮಗ್ನಳಾಗಿದ್ದೆ.


ಅದಕ್ಕೇ ಏನೋ, ನನ್ನ ಅಮ್ಮ ಆಗ್ರಾಗೆ ಹೋಗುವಾಗ ನನ್ನನ್ನು ಅವಳ ಆತ್ಮೀಯ ಗೆಳತಿಯ ರಕ್ಷಣೆಯಲ್ಲಿ ಬಿಟ್ಟುಹೋಗಿದ್ದರು. ಮಕ್ಕಳೇನು, ನನ್ನ ಜೊತೆ ಜಗಳವಾಡಲು ಅಲ್ಲೊಂದು ಇಲಿಯೂ ಇರಲಿಲ್ಲ. ಎಂಥಾ ಶಿಕ್ಷೆ! ನಾನು ಬೇಗಮ್ ಜಾನಳ ಸುಪರ್ದಿಗೆ ಬಂದದ್ದು ಹೀಗೆ. ಬೇಗಂ ಜಾನ್! ಅವಳ ಕೌದಿ ಅಂತೂ ನನ್ನ ಮನಸ್ಸಲ್ಲಿ ಕಾಯಿಸಿ ಬರೆ ಇಟ್ಟಂತಹ ನೆನಪನ್ನು ಬಿಟ್ಟು ಹೋಗಿದೆ! ಅವಳ ಗಂಡ ನವಾಬ ಸಾಹೇಬ 'ಸ್ವಲ್ಪ ಮಾಗಿದವನಂತೆ' ಕಂಡರೇನಾಯಿತು? ಬೇಗಂ ಸಾಹೇಬಳ ಬಡ ಅಪ್ಪ ಅಮ್ಮಂದಿರು ಅವನ ಸಾತ್ವಿಕ ಗುಣವನ್ನು ಮೆಚ್ಚಿ ಮಗಳನ್ನು ಧಾರೆಯೆರೆದಿದ್ದರು. ಅಂತಿಂಥಾ ಲುಚ್ಚಾ ಹೆಂಗಸರು ನವಾಬನ ಮನೆಯಲ್ಲಿ ಕಾಣಸಿಗುವುದಿಲ್ಲ ಬಿಡಿ. ಸ್ವತಃ ಹಜ್ ಯಾತ್ರೆ ಮಾಡಿದ್ದ ನವಾಬ ಬೇರೆಯವರಿಗೂ ಈ ಪವಿತ್ರ ಕಾರ್ಯ ನಿರ್ವಹಿಸುವುದಕ್ಕೆ ಸಹಾಯ ಮಾಡಿದ್ದ.

ಹೇಗೋ ಏನೋ, ನವಾಬನಿಗೆ ವಿಚಿತ್ರ ಚಾಳಿ ಒಂದಿತ್ತು. ಕೆಲವು ಗಂಡಸರಿಗೆ ಪಾರಿವಾಳಗಳ ಹುಚ್ಚು ಇನ್ನೂ ಕೆಲವರಿಗೆ ಹುಂಜಗಳ ಜಗಳದಲ್ಲಿ ಆಸಕ್ತಿ. ನವಾಬನಿಗೆ ಅಂಥಾ ಅಬ್ಬೇಪಾರಿ ಅಭ್ಯಾಸಗಳನ್ನು ಕಂಡರಾಗದು. ಅವನ ಮನೆಯಲ್ಲಿದ್ದದ್ದು ಎಳೆಯ ವಯಸ್ಸಿನ ಹುಡುಗರು. ತೆಳ್ಳಗಿನ ಸೊಂಟದ ಬೆಳ್ಳಗಿನ ಹುಡುಗರು! ಅವರ ಊಟ, ವಸತಿ, ವಿದ್ಯಾಭ್ಯಾಸದ ಖರ್ಚೆಲ್ಲವೂ ನವಾಬನದೇ.

ಬೇಗಂ ಜಾನಳನ್ನು ಮದುವೆಯಾಗಿ ಮನೆಯ ಇತರ ಸಾಮಗ್ರಿಗಳೊಂದಿಗೆ ಪ್ರತಿಷ್ಠಾಪಿಸಿದ್ದೇ, ನವಾಬ ಅವಳನ್ನು ಮರೆತೇಬಿಟ್ಟಿದ್ದ. ತೆಳ್ಳಗಿನ ಕೋಮಲ ಬೇಗಂ ಒಂಟಿತನದ ಬೇಗುದಿಯಲ್ಲಿ ನವೆಯಹತ್ತಿದಳು.

ಬೇಗಂ ಜಾನಳ ಬವಣೆ ಶುರುವಾದದ್ದು ಎಲ್ಲಿ ಎಂದು ಹೇಳುವುದು ಕಷ್ಟ. ಈ ಪ್ರಪಂಚಕ್ಕೆ ಕಾಲಿಡುವ ತಪ್ಪು ಮಾಡಿದಾಗಲೋ, ಅಥವಾ ನವಾಬನನ್ನು ಮದುವೆಯಾಗಿ ಅವನ ಮಂಚಕ್ಕೆ ಅಲಂಕಾರವಾಗಿ ಒದಗಿ ಬಂದಾಗಲೋ? ಅಥವಾ ನವಾಬನ ಬದುಕನ್ನು ಆಕ್ರಮಿಸಿಕೊಂಡ ನುಣುಪಾದ ಸೊಂಟದ, ಬಿಗಿ ಮಂಡಿಯ ಎಳೆಯ ಹುಡುಗರು ತೆಳ್ಳಗಿನ ಕುರ್ತಾ, ಮೈಗಂಟಿಕೊಳ್ಳುವ ಚೂಡಿದಾರ ತೊಟ್ಟು ಡೈನಿಂಗ್ ಟೇಬಲ್ ಸುತ್ತ ಕುಳಿತು ರುಚಿಯಾದ ಭಕ್ಷ್ಯಗಳನ್ನು ಮೆಲ್ಲುವ ದೃಶ್ಯವನ್ನು ಅವಳು ಪರದೆಯ ಹಿಂದಿನಿಂದ ನೋಡಿ ಕೆಂಡದ ಹಾಸಿಗೆಯ ಮೇಲೆ ಬಿದ್ದಂತೆ ಹೊರಳಾಡಿದಾಗಿಂದಲೋ... ಅಥವಾ ಕಣ್ಣೀರು, ಪ್ರಾರ್ಥನೆ, ಒನಪು, ವೈಯ್ಯಾರ, ರಾತ್ರಿಯಿಡೀ ಕಾದ ಪಹರೆ ಎಲ್ಲವೂ ವ್ಯರ್ಥವಾಗಿ ಹೈರಾಣಾದ ಗಳಿಗೆಯಿಂದಲೋ? ಜಿಗಣೆಗಳು ಎಂದಾದರೂ ಕಲ್ಲಿಗೆ ಅತುಕೊಳ್ಳುತ್ತವೆಯೆ? ನವಾಬ ಒಂದಿಷ್ಟೂ ಕದಲಲಿಲ್ಲ. ಕೈಚೆಲ್ಲಿದ ಬೇಗಂ ಓದುವುದರಲ್ಲಿ ಸಾಂತ್ವನ ಕಂಡುಕೊಳ್ಳಲು ಪ್ರಯತ್ನಿಸಿದಳು. ಅದೂ ವ್ಯರ್ಥ. ಪ್ರಣಯದ ಕಾದಂಬರಿಗಳು, ಭಾವನಾತ್ಮಕ ಕಾವ್ಯ ಅವಳ ಮನಸ್ಸಿನ ವ್ಯಾಕುಲತೆಯನ್ನು ಇನ್ನಷ್ಟು ಹೆಚ್ಚಿಸಿದವು. ರಾತ್ರಿಯ ನಿದ್ದೆ ಯಾವಾಗಲೋ ಕೈಕೊಟ್ಟಿತ್ತು, ಬಯಕೆ ಮತ್ತು ಹತಾಶೆಗಳ ಮೂಟೆಯಾಗಿ ನರಳಿದಳು.

ನೋಡುವವರೇ ಇಲ್ಲದ ಮೇಲೆ ವಸ್ತ್ರ ಒಡವೆ, ವೈಯ್ಯಾರ ಕಟ್ಟಿಕೊಂಡೇನು ಬಂತು? ಬೆಂಕಿ ಬೀಳಲಿ ಅವಕ್ಕೆಲ್ಲ! ಹುಡುಗರ ನಡುವೆ ಮೈ ಮರೆತಿದ್ದ ನವಾಬನಿಗೆ ಅವಳನ್ನು ನೋಡಲೂ ಪುರುಸೊತ್ತಿರುತ್ತಿರಲಿಲ್ಲ. ಬೇರೆಯವರನ್ನು ಅವಳು ಹೋಗಿ ಭೇಟಿಯಾಗಲೂ ಅನುಮತಿ ಇರಲಿಲ್ಲ. ಅವಳ ಮದುವೆಯಾದ ಮೇಲೆ ನೆಂಟರೆನ್ನಿಸಿಕೊಂಡವರು ಬಂದು ತಿಂಗಳುಗಟ್ಟಲೆ ಇದ್ದು ಹೋಗುತ್ತಿದ್ದದ್ದೇನೋ ನಿಜ. ಪಾಪದ ಈ ಹೆಂಗುಸಿಗೆ ಮಾತ್ರ ಮನೆ ಬಿಟ್ಟು ಕದಲುವ ಅದೃಷ್ಟವಿರಲಿಲ್ಲ. ಆ ನೆಂಟರೆನ್ನಿಸಿಕೊಂಡವರನ್ನು ಕಂಡರೇ ಮೈಯೆಲ್ಲ ಬೆಂಕಿಯಾಗುತ್ತಿತ್ತು. ಬಿಟ್ಟಿ ಮಜಾ ಉಡಾಯಿಸಲು ಬಂದವರೇ. ತಿಂದು, ತೇಗಿ, ನವಾಬ ಕೊಟ್ಟ ಬೆಚ್ಚಗಿನ ಬಟ್ಟೆಗಳನ್ನು ಒಯ್ಯುತ್ತಿದ್ದರು. ಅವಳು ಮಾತ್ರ ಹದವಾದ ಹೊಸ ಹತ್ತಿಯನ್ನು ತುಂಬಿ ಮಾಡಿದ ಬೆಚ್ಚಗಿನ ಕೌದಿಯನ್ನು ಹೊದ್ದೂ ಸಹ ಚಳಿಯಿಂದ



ಕೌದಿ

ಯಾವುದೋ ಒಂದು ಹೊತ್ತಿನಲ್ಲಿ ವಿಚಿತ್ರ ಭಯ ಆವರಿಸಿ ಥಟ್ಟನೆ ಎದ್ದು ಕೂತೆ. ಕೋಣೆಯ ತುಂಬ ಕತ್ತಲು. ಕತ್ತಲೆಯಲ್ಲಿ ಬೇಗಂ ಜಾನಳ ಕೌದಿಯೊಳಗೆ ಆನೆಯೊಂದು ಸೇರಿಕೊಂಡಂತೆ ಉರುಳಾಡುತ್ತಿತ್ತು.

ಮರಗಟ್ಟಿದಳು. ಹೊರಳಾಡಿದಂತೆಲ್ಲಾ ಕೌದಿ ಗೋಡೆಯ ಮೇಲೆ ನೆರಳುಗಳ ಚಿತ್ತಾರವನ್ನು ಬಿಡಿಸುತ್ತಿತ್ತು. ಯಾವ ನೆರಳೂ ಅವಳಿಗೆ ನಂಬಿಕೆ ಸಮಾಧಾನವನ್ನು ಕೊಡುವಂತಿರಲಿಲ್ಲ. ಬದುಕಿಗೆ ಅರ್ಥವಿದೆಯೆ? ಬದುಕಬೇಕು ಯಾಕೆ? ಯಾಕೆಂದರೆ ಉಸಿರು ಇರುವತನಕ ಬದುಕಿರಬೇಕು, ಅದಕ್ಕೆ. ಬದುಕಬೇಕೆಂದು ಅವಳ ಹಣೆಯಲ್ಲಿ ಬರೆದಿತ್ತು, ಬದುಕುತ್ತಿದ್ದಳು.

ಪ್ರಪಾತದ ಅಂಚಿನಲ್ಲಿದ್ದವಳನ್ನು ಈಚೆ ಎಳೆದವಳು ರಬ್ಬೊ. ಥಟ್ಟನೆ ಬೇಗಂ ಜಾನಳ ಕಂದಿದ ದೇಹ ತುಂಬಿಕೊಂಡು, ಕೆನ್ನೆಗಳು ಹೊಳೆಯಲಾರಂಭಿಸಿ, ಅವಳಲ್ಲಿದ್ದ ಸೌಂದರ್ಯ ಅರಳಲಾರಂಭಿಸಿತು. ನಿಗೂಢ ರೀತಿಯ ಎಣ್ಣೆಯಿಂದ ಮಸಾಜ್ ಮಾಡಿದ್ದೇ ಮಾಡಿದ್ದು, ಅವಳ ಜೀವ ಕಳೆ ಹಿಂತಿರುಗಿ ಬಂದಂತಿತ್ತು. ಎಂಥಾ ಉತ್ತಮ ವೈದ್ಯಕೀಯ ಸಂಚಿಕೆಗಳೂ ಈ ಎಣ್ಣೆಯ ಬಗ್ಗೆ ಮಾಹಿತಿ ಕೊಡಲಾರವು. ನನ್ನಾಣೆ.

....

ನಾನು ಬೇಗಂ ಜಾನಳನ್ನು ನೋಡಿದಾಗ ಅವಳ ವಯಸ್ಸು ನಲ್ವತ್ತೋ, ನಲ್ವತ್ತೆರಡೋ ಇದ್ದಿರಬಹುದು. ಒರಗು ಹಾಸಿಗೆಯಲ್ಲಿ ಕುಳಿತಿದ್ದವಳು ಎಂಥ ಚೆಂದ ಕಂಡಳಪ್ಪ! ಪಕ್ಕದಲ್ಲಿಯೇ ಕೂತು ಅವಳ ಬೆನ್ನಿಗೆ, ಮೈಯ್ಯಿಗೆ ಎಣ್ಣೆ ತಿಕ್ಕುತ್ತಿದ್ದ ರಬ್ಬೊ! ನೇರಳೆ ಬಣ್ಣದ ಶಾಲೊಂದನ್ನು ಕಾಲ ಮೇಲೆ ಚೆಲ್ಲಿ ಕೂತಿದ್ದ ಬೇಗಂ ರಾಣಿಯಂತೆ ಕಂಡಳು. ಅವಳ ಸೌಂದರ್ಯ ನನ್ನನ್ನು ಮುಗ್ಧಗೊಳಿಸಿತ್ತು, ಹತ್ತಿರ ಕೂತು ಗಂಟೆಗಟ್ಟಲೆ ಅವಳನ್ನು ನೋಡುತ್ತಿರುವುದೇ ಒಂದು ಚೆಂದ ಅಂತನ್ನಿಸಿತ್ತು. ಸಮೃದ್ಧವಾಗಿ ಎಣ್ಣೆ ತುಂಬಿದ ಅವಳ ಕಪ್ಪು ಕೂದಲು ಎಷ್ಟು ಚೊಕ್ಕವಾಗಿ ವಿಭಾಗಿಸಲ್ಪಟ್ಟಿತ್ತೆಂದರೆ ಕೂದಲ ಒಂದೇ ಒಂದು ಎಳೆಯೂ ಆಚೀಚೆ ಆಡುತ್ತಿರಲಿಲ್ಲ. ಕಪ್ಪನೆಯ ಕಣ್ಣುಗಳು. ಬಿಲ್ಲಿನ ಆಕಾರಕ್ಕೆ ಕತ್ತರಿಸಲ್ಪಟ್ಟ ತಿದ್ದಿದ ಹುಬ್ಬುಗಳು. ಭಾರವಾದ ಕಣ್ರೆಪ್ಪೆಗಳ ಮತ್ತು ಒತ್ತಾಗಿ ನೀಳವಾಗಿದ್ದ ರೆಪ್ಪೆಗಳ ನಡುವೆ ಕಣ್ಣುಗಳು ಸ್ವಲ್ಪ ಉಬ್ಬಿದಂತಿದ್ದವು. ಅತ್ಯಂತ ಸುಂದರವಾದದ್ದೆಂದರೆ ಅವಳ ಕೆಂಪಗಿನ ತುಟಿಗಳು. ಸ್ವಲ್ಪವೇ ಸ್ವಲ್ಪ ಇಳಿಬಿದ್ದಂತಿದ್ದ ಮೇಲ್ತುಟಿ ಮೀಸೆಯೊಂದರ ಅಸ್ಪಷ್ಟ ಸೂಚನೆ ಕೊಡುವಂತಿತ್ತು. ಕಪೋಲದಿಂದ ಇಳಿಬಿದ್ದ ಉದ್ದ ಕೂದಲು. ಕೆಲವೊಮ್ಮೆ ಅವಳನ್ನು ನೋಡುವಾಗ ಹುಡುಗನೊಬ್ಬನ ಎಳಸು ಮುಖವನ್ನು ನೋಡಿದಂತೆ ಭಾಸವಾಗುತ್ತಿತ್ತು.

ಅವಳದು ದೇಹಕ್ಕೆ ಅಂಟಿದಂತೆ ಸೇರಿಸಿ ಬಿಗಿಯಾಗಿ ಹೊಲಿದಂತ ನುಣುಪಾದ ಬೆಳ್ಳನೆಯ ಚರ್ಮ. ಹಲವೊಮ್ಮೆ ಮಂಡಿಯ ಕೆಳಗಿನ ಹೊದಿಕೆಯನ್ನು ಸರಿಸಿ ಚರ್ಮವನ್ನು ಕೆರೆಯುವಾಗ ಹೊಳೆಯುತ್ತಿದ್ದ ಕಾಲುಗಳನ್ನು ಕದ್ದು ನೋಡುತ್ತಿದ್ದೆ. ಎತ್ತರದ ಆಕಾರ ಅವಳದು. ಮೈಕೈ ತುಂಬಿಕೊಂಡು, ಉಟ್ಟೂ ತೊಟ್ಟೂ ಧೀಮಂತವಾಗಿ ಕಾಣಿಸುತ್ತಿದ್ದಳು. ಕೆತ್ತಿದಂತ ಅಂಗಸೌಷ್ಠವ. ಬೆಳ್ಳಗೆ, ನುಣುಪಾಗಿ, ಹರವಾಗಿದ್ದ ಕೈಗಳು ಮತ್ತು ತುಂಬಿದಂತ ಸೊಂಟ.... ಸರಿ, ವಿಷಯಕ್ಕೆ ಬರುತ್ತೇನೆ. ರಬ್ಬೊ ಹತ್ತಿರ ಕೂತಿರುತ್ತಿದ್ದಳು ಎಂದು ಹೇಳುತ್ತಿದ್ದೆನಲ್ಲ...ಯಾವಾಗಲೂ ಬೆನ್ನು ತಿಕ್ಕುತ್ತಾ ಕೂತಿರುತ್ತಿದ್ದಳು. ಗಂಟೆಗಟ್ಟಲೆ...ಬೆನ್ನು ತಿಕ್ಕುವುದೇ ಬದುಕಿನ ಒಂದು ಅತ್ಯಂತ ಅವಶ್ಯಕತೆ ಎಂಬಂತೆ...ಅದಕ್ಕಿಂತ ಇನ್ನೊಂದಿಲ್ಲ ಎಂಬಂತೆ...

ರಬ್ಬೊಗೆ ಬೆನ್ನು ತಿಕ್ಕುವುದು ಬಿಟ್ಟು ಬೇರೆ ಕೆಲಸ ಇರಲಿಲ್ಲ. ಒರಗು ಹಾಸಿಗೆಯಲ್ಲಿ ಕೂತು ಸದಾ ಕೈಯನ್ನೋ, ಕಾಲನ್ನೊ, ಬೆನ್ನನ್ನೋ ಏನೋ ಒಂದನ್ನು ತಿಕ್ಕುತ್ತಿರುವುದೇ ಕೆಲಸ. ಈ ತರದ ಕೊನೆಯಿಲ್ಲದ ಕೆರೆತ, ಮಸೆತ ನನಗೆ ಕೆಲವೊಮ್ಮೆ ಕೋಪ ಬರಿಸುತ್ತಿತ್ತು. ಬೇರೆಯವರಿಗೆ ಹೇಗೋ ಏನೋ, ಯಾರಾದರು ನನ್ನನ್ನು ಹಾಗೆ ತಿಕ್ಕಿದ್ದರೆ ನನ್ನ ದೇಹ ಬಾಡಿ ಬೆಂಡಾಗಿ ಬಿದ್ದೇ ಹೋಗುತ್ತಿತ್ತೋ ಏನೋ ಅನ್ನಿಸುತ್ತಿತ್ತು. ನಿತ್ಯದ ಈ ಮಸೆತ ಬೇಗಂ ಜಾನಳ ಸ್ನಾನಕ್ಕೆ ಮುಂಚೆ ಇನ್ನಷ್ಟು ವಿಸ್ತರಣೆ ಆಗುತ್ತಿತ್ತು. ಅಯ್ಯಮ್ಮ ದೇವರೇ! ನೆನಸಿಕೊಂಡರೇ ಸುಸ್ತಾಗುತ್ತದೆ! ಸ್ನಾನ ಮಾಡುವ ಎರಡು ಗಂಟೆ ಮುಂಚೆ ರಬ್ಬೊ ಬೇಗಂ ಜಾನಳ ದೇಹಕ್ಕೆ ಎಂತೆಂಥದೋ ಎಣ್ಣೆ ಸುಗಂಧ ದ್ರವ್ಯ ಪೂಸಿ ತಿಕ್ಕುತ್ತಿದ್ದಳು. ಇದು ಎಷ್ಟು ಹೊತ್ತು ನಡೆಯುತ್ತಿತ್ತೆಂದರೆ ನನ್ನ ಕಲ್ಪನಾಶಕ್ತಿ ನಾಗಾಲೋಟದಿಂದ ನೆಗೆಯುವಷ್ಟು. ಮುಚ್ಚಿದ ಬಾಗಿಲಿನ ಹಿಂದೆ ಅಗ್ಗಿಷ್ಟಿಕೆಯನ್ನು ಹತ್ತಿಸಿ ಮಸಾಜ್ ಶುರುವಾಗುತ್ತಿತ್ತು. ರಬ್ಬೊ ಒಬ್ಬಳಿಗೆ ಮಾತ್ರ ಅಲ್ಲಿರಲು ಅವಕಾಶ. ಉಳಿದ ಹೆಂಗುಸರು ಹೊರಗೇ ನಿಂತು ಪಿಸಿಪಿಸಿ ಅನ್ನುತ್ತಾ ಕೇಳಿದ್ದನ್ನು ಸರಬರಾಜು ಮಾಡುತ್ತಿದ್ದರು.

ಸತ್ಯಸಂಗತಿ ಏನೆಂದರೆ ಬೇಗಂ ಜಾನಳಿಗೆ ಕೊನೆಯಿಲ್ಲದ ನವೆಯೊಂದು ಬಾಧಿಸುತ್ತಿತ್ತಂತೆ. ನೂರಾರು ರೀತಿಯ ಎಣ್ಣೆ ಮುಲಾಮುಗಳನ್ನು ಹಚ್ಚಿದರೂ ಪಾಪದ ಹೆಂಗುಸಿಗೆ ವಾಸಿಯಾಗಲಿಲ್ಲವಂತೆ. ಡಾಕ್ಟರರಿಗೆ, ಹಕೀಮರಿಗೆ ನವೆಯ ಮೂಲವನ್ನು ಪತ್ತೆ ಹಚ್ಚಲಿಕ್ಕೇ ಆಗಲಿಲ್ಲವಂತೆ. ಮೇಲ್ಪದರದಲ್ಲಂತೂ ಚರ್ಮ ಒಂದೂ ಕಲೆಯಿಲ್ಲದೆ ಹೊಳೆಯುತ್ತಿತ್ತಲ್ಲ! ಚರ್ಮದ ಒಳಗೆ ಏನಾದರೂ ಇದ್ದಿರಬಹುದೆ? ಕಂಡು ಹಿಡಿಯುವುದು ಹೇಗೆ? 'ಈ ಡಾಕ್ಟರ್ಗಳ ಮನೆ ಹಾಳು ಬೀಳ! ಎಲ್ಲೋ ಹುಚ್ಚು ಹಿಡಿದಿರಬೇಕು ಅವರಿಗೆ. ಎಲ್ಲಾ ಬಿಟ್ಟು ನಿಮಗೆ ಖಾಯಿಲೆ ಅಂದ್ರೆ ಯಾರಾದ್ರೂ ನಂಬ್ತಾರ್ಯೆ? ನಿಮ್ಮ ರಕ್ತಕ್ಕೆ ಸ್ವಲ್ಪ ಉಷ್ಣವಾಗಿದೆ ಅಷ್ಟೇ.' ರಬ್ಬೊ ನಗುತ್ತಾ ಕಣ್ಣನ್ನು ಒಂದು ರಂಧ್ರದಷ್ಟು ಕಿರಿದುಗೊಳಿಸಿ ಬೇಗಂ ಜಾನಳ ಕಡೆ ನೋಡುತ್ತಿದ್ದಳು. ಈ ರಬ್ಬೊ ಇದಾಳಲ್ಲ! ಬೇಗಂ ಜಾನ್ ಬೆಳ್ಳಗಿದ್ದಷ್ಟೇ ಇವಳು ಕಪ್ಪು, ಅವಳ ಮುಖ ಹಿಮದಷ್ಟು ಬೆಳ್ಳಗಿದ್ದರೆ ಇವಳದು ಕೆಂಪು. ಕೆಂಪಗೆ ಕಾದ ಕಬ್ಬಿಣದಂತೆ ಹೊಳೆಯುತ್ತಿದ್ದಳು. ಮುಖದಲ್ಲಿ ಅಲ್ಲಲ್ಲಿ ತೆಳ್ಳಗಿನ ಸಿಡುಬಿನ ಕಲೆ. ಕಟ್ಟುಮಸ್ತಾದ ದೇಹ. ಚುರುಕಾದ ಸಣ್ಣ ಕೈಗಳು. ಬಿಗಿದ ಸಣ್ಣ ಹೊಟ್ಟೆ. ಸದಾ ಒದ್ದೆಯಾಗಿರುತ್ತಿದ್ದ ದಪ್ಪ ತುಟಿಗಳು. ವಿಚಲಿತಗೊಳಿಸುವಂಥ ಅವಳ ದೇಹದ ವಾಸನೆ. ಅವಳ ದುಂಡಗಿನ ಸಣ್ಣ ಕೈಗಳ ಚುರುಕೆಂದರೆ! ಇದೇ ಈಗ ಬೇಗಂ ಜಾನಳ ಸೊಂಟವನ್ನು ತಿಕ್ಕುತ್ತಿದ್ದವಲ್ಲ, ಅರೆ ಕ್ಷಣದಲ್ಲಿ ಅವಳ ತೊಡೆಯ ಮೇಲೆ! ರೆಪ್ಪೆ ಬಡಿಯುವುದರಲ್ಲಿ ಅವಳ ಪಾದಗಳ ಮೇಲೆ! ನಾನಂತೂ ಬೇಗಂ ಜಾನಳ ಹತ್ತಿರ ಕೂತಾಗೆಲ್ಲಾ ಆ ಕೈಗಳು ಎಲ್ಲಿವೆ, ಏನು ಮಾಡುತ್ತಿವೆ ಎಂದು ನೋಡುವುದರಲ್ಲಿಯೇ ಮಗ್ನಳು!

ಬೇಸಿಗೆಯಿರಲಿ, ಚಳಿಗಾಲವಿರಲಿ, ಬೇಗಂ ಜಾನ್ ಸದಾ ಧರಿಸುತ್ತಿದ್ದದ್ದು ನೊರೆಯಷ್ಟು ಬೆಳ್ಳಗಿನ ಹೈದರಾಬಾದೀ ಮಸ್ಲಿನ್ ಕುರ್ತಾ, ಕೆಳಗೆ ಕಡು ಬಣ್ಣದ ಪೈಜಾಮ. ಫ್ಯಾನ್ ಸದಾ ಸುತ್ತುತ್ತಿರಬೇಕು. ತಿಳಿಬಣ್ಣದ ಶಾಲೊಂದನ್ನು ಸದಾ ಹೊದ್ದಿರುತ್ತಿದ್ದಳು. ಚಳಿಗಾಲವೆಂದರೆ ಅವಳಿಗೆ ಇಷ್ಟ. ನನಗೂ ಚಳಿಗಾಲದಲ್ಲಿ ಅವಳೊಂದಿಗೆ ಇರುವುದು ಇಷ್ಟವೇ. ಅವಳು ದೇಹಕ್ಕೆ ಎಂದೂ ತ್ರಾಸ ಕೊಟ್ಟದ್ದಿಲ್ಲ. ಕಾರ್ಪೆಟ್ಟಿನ ಮೇಲೆ ಹಾಯಾಗಿ ಕುಳಿತು ಬೆನ್ನು ತಿಕ್ಕಿಸಿಕೊಳ್ಳುತ್ತಾ ಒಣಗಿಸಿದ ಹಣ್ಣುಗಳನ್ನು ತಿನ್ನುತ್ತಿರುತ್ತಿದ್ದಳು. ಕೆಲಸದ ಇತರ ಹೆಂಗಸರಿಗೆ ರಬ್ಬೊಳನ್ನು ಕಂಡರೆ ಹೊಟ್ಟೆಕಿಚ್ಚು, ಮಾಟಗಾತಿ!

ರಬ್ಬೊ ಬೇಗಂ ಜಾನಳ ಎಡಬಿಡದ ಸಂಗಾತಿ. ಊಟ ನಿದ್ದೆ ಎಲ್ಲವೂ ಅವಳ ಜೊತೆಯಲ್ಲಿಯೇ! ನಾಲ್ಕು ಜ... ಸೇರಿದ ಕಡೆ ರಬ್ಬೊ ಮತ್ತು ಬೇಗಂ ಜಾನಳ ವಿಷಯವೊಂದ... ಕುಚೋದ್ಯ ಹೆಸರು ಬಂದದ್ದೇ ತಡ, ಜೋಳ್ಳನೆ ನಗುವವರಿ... ಕಡಿಮೆಯಿರಲಿಲ್ಲ. ಪಾಪದ ಹೆಂಗುಸಿನ ಬಗ್ಗೆ ಎಷ್ಟೆಷ್ಟೊ ಕಥೆಗಳು. ಅವಳಂತೂ ಮನೆ ಬಿಟ್ಟು ಹೊರಗೆ ಹೋದದ್ದ... ಇಲ್ಲ, ಯಾರನ್ನೂ ಭೇಟಿಯಾದದ್ದೂ ಇಲ್ಲ. ಅವಳಾಯಿತ... ಅವಳ ಕೊನೆಯಿಲ್ಲದ ನವೆಯಾಯಿತು. ಉಳಿದದ್ದೆಲ್ಲಾ ಹಾಳು ಬೀಳಲಿ. ನಾನಾಗಲೇ ಹೇಳಿದೆನಲ್ಲಾ, ಚಿಕ್ಕಂದಿನ ದಿನಗಳ ಮಾತು. ನನಗೆ ಅವಳೆಂದರೆ ಒಂಥರಾ ಮೋಹ... ಅವಳಿಗೂ ಅಷ್ಟೇ. ಅದಕ್ಕೇ ಏನೋ, ನನ್ನ ಪಾಡಿ... ನನ್ನನ್ನು ಬಿಟ್ಟು ಆಗ್ರಾಗೆ ಹೋದರೆ ಮನೆಯ ಹುಡುಗ... ಜೊತೆ ಕಚ್ಚಾಡಿ ರಂಪ ರಾದ್ಧಾಂತ ಮಾಡುತ್ತಾಳೆ ಎಂದು... ಕೊಂಡು ಅಮ್ಮ ಬೇಗಂ ಜಾನಳ ಹತ್ತಿರ ಬಿಡುವ ಯೋಚನೆ... ಮಾಡಿದ್ದು. ಎಷ್ಟೇ ಆಗಲಿ, ನನ್ನ ಅಮ್ಮ ಅವಳಿಗೆ ಅಕ್ಕ... ಇದ್ದಂತೆ ಎಂದು ಬೇಗಂ ಜಾನಳೇ ಹೇಳಿದ್ದಳಲ್ಲ!

ಮಲಗುವುದು ಎಲ್ಲಿ? ಬೇಗಂ ಜಾನಳ ರೂಮಿನಲ್ಲೇ ತಾನೇ? ಅವಳ ಮಂಚದ ಹತ್ತಿರ ಇನ್ನೊಂದು ಪುಟ... ಮಂಚವನ್ನು ಹಾಕಲಾಯಿತು. ಮೊದಲನೆಯ ರಾತ್ರಿ ನಾನೂ ಬೇಗಂ ಇಬ್ಬರೂ ಹನ್ನೊಂದರ ತನಕ ಹರಟೆ ಹೊಡೆದು, 'ಚಾನ್ಸ್' ಆಟ ಆಡಿ ಮಲಗಲು ಹೋದೆವು... ನನಗೆ ನಿದ್ದೆ ಬಂದಾಗ ರಬ್ಬೊ ಎಂದಿನಂತೆ ಬೆನ್ನು ತಿಕ್ಕುತ್ತಾ ಬೇಗಮ್ಮಳ ಹತ್ತಿರವೇ ಕೂತಿದ್ದಳು. ನೀಚ ಹೆಂಗುಸು!

ಯಾವುದೋ ಒಂದು ಹೊತ್ತಿನಲ್ಲಿ ವಿಚಿತ್ರ ಭಯ ಆವರಿಸಿ ಥಟ್ಟನೆ ಎದ್ದು ಕೂತೆ. ಕೋಣೆಯ ತುಂಬ ಕತ್ತಲು. ಕತ್ತಲೆಯಲ್ಲಿ ಬೇಗಂ ಜಾನಳ ಕೌದಿಯೊಳಗೆ ಆನೆಯೊಂದು ಸೇರಿಕೊಂಡಂತೆ ಉರುಳಾಡುತ್ತಿತ್ತು.

'ಬೇಗಂ ಜಾನ್...' ನಡುಗುವ ಧ್ವನಿಯಲ್ಲಿ ಕರೆದೆ...

ಆನೆಯ ಉರುಳಾಟ ತಕ್ಷಣ ನಿಂತಿತು. ಮೇಲೆದ್ದಿದ್ದ ಕೌದಿ ಕೆಳಗಿಳಿಯಿತು.

'ಏನೂ...? ಮಲಕ್ಕೋಬಾರದೇ...?' ಬೇಗಂ ಜಾನಳ ಧ್ವನಿ ಎಲ್ಲಿಂದಲೋ ಬಂದಂತಿತ್ತು.

'ನಂಗ್ ಭಯಾ....' ಇಲಿಮರಿಯಂತೆ ಕೀಗುಟ್ಟಿದೆ...

'ಮಲ್ಕೋ...ಭಯಾ ಏನಕ್ಕೆ? ಆಯತ್-ಅಲ್-ಕುರ್ಸಿ... ಹೇಳಿದ್ರಾಯ್ತು'

ಆಯತ್-ಅಲ್-ಕುರ್ಸಿಯನ್ನು ಬೇಗಬೇಗ ಹೇಳಿಕೊಳ್ಳ... ಲಾರಂಭಿಸಿದೆ. ಬಾಯಿಪಾಠವಾಗಿದ್ದರೂ ಯಾಕೋ... ಗಂಟಲಲ್ಲಿ ಸಿಕ್ಕಿಹಾಕಿಕೊಂಡಂತೆನ್ನಿಸಿತು.

'ನಾನಲ್ಲಿಗೆ ಬರಲಾ ಬೇಗಂ ಜಾನ್?'

'ಇಲ್ಲ ಬೇಟೀ...ಮಲಕ್ಕೋ' ಸ್ವರ ಸ್ವಲ್ಪ ಗಡುಸಾಗಿತ್ತು. ಯಾರೋ ಇಬ್ಬರು ಪಿಸುಗುಡುತ್ತಿದ್ದ ಶಬ್ದ ಕೇಳಿಸಿತು. ಅಯ್ಯಮ್ಮ! ಈ ಇನ್ನೊಬ್ಬರು ಯಾರು? ಇನ್ನಷ್ಟು ಭಯವಾಯ್ತು.

'ಬೇಗಂ ಜಾನ್...ಕಳ್ಳ ಗಿಳ್ಳ ಏನಾದ್ರೂ ಬಂದು ಸೇರ್ಕೊಂಡಿರಬಹುದೇ?'

'ಸುಮ್ನೆ ಮಲ್ಕೋ ಹುಡ್ಗೀ...ಇಲ್ಲೀಗ್ ಯಾವ ಕಳ್ಳ ಬರ್ತಾನೆ?' ಇದು ರಬ್ಬೊಳ ಧ್ವನಿ. ಥಟ್ಟನೆ ಕೌದಿಯೊಳಗೆ ತಲೆ ಎಳೆದುಕೊಂಡು ನಿದ್ರಿಸಲು ಯತ್ನಿಸಿದೆ.

ಬೆಳಕು ಹರಿಯುವುದರಲ್ಲಿ ನನ್ನ ತಲೆಯಿಂದ ಹಿಂದಿನ ರಾತ್ರಿಯ ಘಟನೆ ಮಾಯವಾಗಿತ್ತು. ನನ್ನದು ಯಾವಾಗಲೂ ಪುಕ್ಕಲು ಸ್ವಭಾವವೇ. ಚಿಕ್ಕವಳಿದ್ದಾಗ ಕೆಟ್ಟ ಕನಸುಗಳು ಬೀಳುತ್ತಿದ್ದವು. ನಿದ್ದೆಯಲ್ಲಿ ಬಡಬಡಿಸುವುದು, ಥಟ್ಟನೆ ಎದ್ದು ಕೂರುವುದು, ಧಡ್ ಅಂತ ಹಾಸಿಗೆಯಿಂದ ಉರುಳುವುದು ಸಾಮಾನ್ಯವಾಗಿತ್ತು. ನನಗೆ ದೆವ್ವ ಹಿಡಿದಿರಬಹುದು ಎಂದೂ ಮಾತಾಡಿಕೊಳ್ಳುತ್ತಿದ್ದರು. ಹಾಗಾಗಿ ಹಿಂದಿನ ರಾತ್ರಿ ನಡೆದದ್ದು ತಲೆಯಲ್ಲೇ ಉಳಿಯಲಿಲ್ಲ. ಬೆಳಗ್ಗೆ ಕೌದಿ ಎಂದಿನಂತೆ ಮುಗ್ಧವಾಗಿ ಮಲಗಿತ್ತು.

ಮಾರನೆಯ ರಾತ್ರಿ ಎಚ್ಚರವಾದಾಗ ರಬ್ಬೊ ಮತ್ತು ಬೇಗಂ ಜಾನಳ ನಡುವಿದ್ದ ಜಗಳವೊಂದನ್ನು ಹಾಸಿಗೆಯ ಮೇಲೆ ಸದ್ದಿಲ್ಲದೆ ಬಗೆಹರಿಸಿಕೊಳ್ಳುತ್ತಿದ್ದಾರೇನೋ ಅಂತನ್ನಿಸಿತ್ತು. ಏನಾಗುತ್ತಿತ್ತೋ ಗೊತ್ತಾಗಲಿಲ್ಲ. ಹೇಗೆ ಬಗೆಹರಿಯಿತು ಅಂತಲೂ ಗೊತ್ತಾಗಲಿಲ್ಲ. ರಬ್ಬೊವಿನ ಗದ್ಗದ ದನಿಯ ಬಿಕ್ಕಳಿಕೆ, ನಂತರ ಬೆಕ್ಕೊಂದು ತಟ್ಟೆಯೊಂದನ್ನು ಲಪ್ ಲಪ್ ಎಂದು ನೆಕ್ಕುತ್ತಿರುವ ಶಬ್ದ... ಭಯದಲ್ಲಿ ಸದ್ದಿಲ್ಲದೆ ನಿದ್ದೆಗೆ ಜಾರಿದೆ.

ಒಂದು ದಿನ ರಬ್ಬೊ ಮಗನನ್ನು ನೋಡಲು ಹೋಗಬೇಕಾಯ್ತು. ಕೆಟ್ಟ ಮಗ. ಬೇಗಂ ಜಾನ್ ಸಾಕಷ್ಟು ತುಂಬ ಸಹಾಯ ಮಾಡಿದ್ದಳಂತೆ. ಹಳ್ಳಿಯಲ್ಲಿ ಅಂಗಡಿಯೊಂದನ್ನು ಹಾಕಿಕೊಟ್ಟು ಏನೇನೋ ಮಾಡಿದರೂ ಹಾದಿಗೆ ಬರಲೊಲ್ಲದ ಮಗ. ಒಂದು ಕಾಲದಲ್ಲಿ ಅವನು ನವಾಬನ ಸೇವೆಯಲ್ಲಿದ್ದು ಬಟ್ಟೆ ಬರೆಗಳ ಉಡುಗೊರೆಯನ್ನು ಪಡೆದಿದ್ದ. ಏನಾಯಿತೋ ಏನೋ, ಇದ್ದಕ್ಕಿದ್ದಂತೆ ಓಡಿ ಹೋದ ಅವನು ತನ್ನ ಅಮ್ಮನನ್ನೂ ನೋಡಲು ಬಂದಿರಲಿಲ್ಲ. ರಬ್ಬೊ ನೆಂಟರೊಬ್ಬರ ಮನೆಯಲ್ಲಿ ಅವನನ್ನು ನೋಡಲು ಹೋಗುವವಳಿದ್ದಳು. ಇದು ಬೇಗಂ ಜಾನ್‌ಳಿಗೆ ಸ್ವಲ್ಪವೂ ಇಷ್ಟವಿದ್ದಂತಿರಲಿಲ್ಲ. ಆದರೂ ಅನಿವಾರ್ಯ.

ಒಬ್ಬ ಬುದ್ಧಿವಂತರೊಡನೆ ಮಾಡುವ ಸಂಭಾಷಣೆಯು ಹತ್ತು ವರ್ಷಗಳ ಕಾಲ ಮಾಡಿದ ಪುಸ್ತಕ ವ್ಯಾಸಂಗಕ್ಕಿಂತಲೂ ಉತ್ತಮವಾದುದು-ಲಾಂಗ್ ಫೆಲೋ

ಇದೀ ದಿನ ಬೇಗಮ್ ಜಾನ್ ಖಿನ್ನಳಾಗಿದ್ದಳು. ಪ್ರತಿಯೊಂದು ಮೂಳೆಕಟ್ಟಿನಲ್ಲೂ ನೋವು. ಯಾರನ್ನೂ ಮುಟ್ಟಗೊಡಲಿಲ್ಲ, ಏನೂ ತಿನ್ನದೆ, ಉಣ್ಣದೆ ವಿಷಣ್ಣಳಾಗಿದ್ದಳು.

'ನಾನು ಬೆನ್ನು ತಿಕ್ಕಲಾ, ಬೇಗಂ ಜಾನ್?' ಆಟದ ಎಲೆಗಳನ್ನು ಕಲೆಸುತ್ತಾ ಉತ್ಸಾಹದಿಂದ ಕೇಳಿದೆ. ಬೇಗಂ ಜಾನ್ ನನ್ನನ್ನೇ ದಿಟ್ಟಿಸಿ ನೋಡಿದಳು.

'ತಿಕ್ಕಲಾ...? ನಿಜವಾಗ್ಲೂ...?' ಎಲೆಗಳನ್ನು ಪಕ್ಕಕ್ಕಿಟ್ಟೆ.

ಸ್ವಲ್ಪ ಹೊತ್ತು ತಿಕ್ಕಿದೆ. ಏನೂ ಹೇಳದೆ ಬೇಗಂ ಜಾನ್ ಸುಮ್ಮನಿದ್ದಳು. ಮಾರನೆಯ ದಿನ ರಬ್ಬೊ ಬರಬೇಕಿತ್ತು, ಬರಲಿಲ್ಲ. ಬೇಗಂ ಜಾನ್ ಅಸಹನೆಯಿಂದ ಸಿಡಿಸಿಡಿ ಎನ್ನುತ್ತಾ ಒಂದರ ಮೇಲೊಂದು ಚಾ ಕುಡಿದು ತಲೆನೋವು ಬರಿಸಿಕೊಂಡಳು.

ಮತ್ತೊಮ್ಮೆ ಅವಳ ಬೆನ್ನು ತಿಕ್ಕುತ್ತಾ ಕೂತೆ. ಟೇಬಲ್ ಟಾಪಿನಷ್ಟು ನುಣುಪು. ತಿಕ್ಕುತ್ತಲೇ ಇದ್ದೆ. ಅವಳಿಗೋಸ್ಕರ ಏನಾದರೂ ಮಾಡುವುದೆಂದರೆ ಎಂಥ ಖುಷಿ!

'ಇನ್ನೂ ಸ್ವಲ್ಪ ಜೋರಾಗಿ....ಗುಂಡಿಗಳನ್ನು ಬಿಚ್ಚು...ಸ್ವಲ್ಪ ಕೆಳಗೆ...ಆಹ್! ಭುಜದಿಂದ ಸ್ವಲ್ಪ ಕೆಳಗೆ.....ಆಹ್! ಅಲ್ಲೇ...!' ಸುಖದಿಂದ ನರಳಿದಳು.

'ಇನ್ನೂ ಸ್ವಲ್ಪ ಈ ಕಡೆ....' ಅವಳ ಕೈಗೇ ಎಟಕುತ್ತಿತ್ತು, ಆದರೂ ನನ್ನ ಕೈಲಿ ತಿಕ್ಕಿಸುತ್ತಿದ್ದಳು. ಕೋಪ ಬರಲಿಲ್ಲ, ಇನ್ನೂ ಖುಷಿಯಾಯ್ತು.

'ಇಲ್ಲಿ...ಓಯ್...ಕಚಗುಳಿ ಕೊಡ್ತಾ ಇದೀಯಾ...?, ನೀನಿದೀಯಲ್ಲ...!' ಬೆನ್ನು ತಿಕ್ಕುತ್ತಲೇ ಅವಳೊಂದಿಗೆ ಮಾತಾಡುತ್ತಿದ್ದೆ.

'ನಾಳೆ ನಿನ್ನ ಬಜಾರಿಗೆ ಕಳಿಸುತ್ತೇನೆ. ಏನು ಕೊಂಡ್ಕೋತೀಯಾ? ಫಟಕ್ ಫಟಕ್ ಎಂದು ಕಣ್ಮುಚ್ಚಿ ತೆಗೆಯುವ ಗೊಂಬೆ?'

'ನಂಗೆ ಗೊಂಬೆ ಬೇಡಾ ಬೇಗಂ ಜಾನ್. ನಾನೀಗ ಮಗು ಅಲ್ಲ'

'ಮತ್ತೇನು? ಮುದುಕೀನಾ?' ನಕ್ಕು ಹೇಳಿದಳು. 'ಸರಿ ಹಾಗಾದ್ರೆ, ಬಬುವಾ ಕೊಂಡ್ಕೋ. ಅದಕ್ಕೆ ಬಟ್ಟೆ ನೀನೇ ಹೊಂದಿಸುವಂತೆ. ಬೇಕಾದಷ್ಟು ಬಟ್ಟೆ ಕೊಡ್ತೀನಿ.' —ಹೇಳುತ್ತಾ ತಿರುಗಿದಳು. 'ಸರಿ' ಅಂದೆ.

'ಇಲ್ಲಿ...ನೋಡು...' ನವೆಯುತ್ತಿದ್ದ ಕಡೆಗೆಲ್ಲಾ ನನ್ನ ಕೈ ತೆಗೆದುಕೊಂಡು ಆಡಿಸಲಾರಂಭಿಸಿದಳು. ಬಬುವಾ ಬಗ್ಗೆ ಯೋಚಿಸುತ್ತ ತಿಕ್ಕುತ್ತಲೇ ಇದ್ದೆ. ಅವಳು ಮಾತಾಡುತ್ತಲೇ ಇದ್ದಳು.

'ನೋಡಿಲ್ಲಿ ನಿನ್ನ ಹತ್ತಿರ ಬೇಕಾದಷ್ಟು ಫ್ರಾಕುಗಳು ಇದ್ದಂಗಿಲ್ಲ, ನಾಳೆ ಟೈಲರನ್ನ ಕರೆದು ಫ್ರಾಕ್ ಹೊಲೆಯೋಕ್ಕೆ ಹೇಳ್ತೀನಿ. ನಿನ್ನಮ್ಮ ಸ್ವಲ್ಪ ಬಟ್ಟೆ ಕೊಟ್ಟು ಹೋಗಿದಾರೆ.'

'ನಂಗೆ ಆ ಕೆಂಪು ಬಣ್ಣದ ಬಟ್ಟೆಯಲ್ಲಿ ಬೇಡಾ. ತುಂಬ ಕೆಟ್ಟದಾಗಿ ಕಾಣಿಸುತ್ತೆ...' ಹರಟುತ್ತಲೇ ಇದ್ದ ನನಗೆ ಕೈಗಳು ಎಲ್ಲಿ ಹೋಗಿದ್ದವೆಂಬ ಪರಿವೆ ಇರಲಿಲ್ಲ, ಬೇಗಂ ಜಾನ್ ಅಂಗತ್ತ ಮಲಗಿದ್ದೂ ಗೊತ್ತಾಗಿರಲಿಲ್ಲ. 'ಅಯ್ಯೋ.... ದೇವರೇ!' ನನ್ನ ಕೈಯನ್ನು ಹಠಾತ್ತಾಗಿ ಹಿಂದಕ್ಕೆಳೆದುಕೊಂಡೆ.

'ಮೆಲ್ಲಗೆ ಬೇಟಿ... ಎಲ್ಲಿ ತಿಕ್ಕುತ್ತಿದೀಯಾ ಅಂತ ನೆನಪಿರಲಿ. ನನ್ನ ಪಕ್ಕೆಲಬುಗಳೆಲ್ಲ ನೋಯ್ತಾ ಇವೆ' ತುಂಟತನದ ನಗುವಿನೊಂದಿಗೆ ನಾಚಿದವಳಂತೆ ಹೇಳಿದಳು ಬೇಗಂ ಜಾನ್. ನನ್ನ ಕೆನ್ನೆ ಕೆಂಪೇರಿತ್ತು.

'ಬಾ ಇಲ್ಲಿ, ನನ್ನ ಪಕ್ಕ ಮಲಕ್ಕೋ...' ಅವಳ ತೋಳ ಮೇಲೆ ತಲೆಯಿರಿಸಿ ಮಲಗಿಸಿದಳು.

'ಅಯ್ಯಯ್ಯೋ...! ನೋಡಿಲ್ಲಿ, ಎಷ್ಟು ತೆಳ್ಳಗಿದೀಯ! ನಿನ್ನ ಪಕ್ಕೆಲಬೆಲ್ಲಾ ಕಾಣ್ತಾ ಇವೆ' ನನ್ನ ಪಕ್ಕೆಲಬುಗಳನ್ನು ಎಣಿಸುತ್ತ ಹೇಳಿದಳು.

'ಓ.....' ನಾನು ಮಣಗುಟ್ಟಿದೆ.


'ಉಯ್?...ನಾನೇನೂ ನಿನ್ನ ಗುಂಗಿಬ ದೋಲ್ನ, ಅಬ್ಬ ಎಂಥ ಬಿಗಿಯಾದ ಸ್ವೆಟರ್! ಒಳಗೆ ಬೆಚ್ಚಗಿನ ಅಂಗಿಯನ್ನೂ ಹಾಕಿಲ್ಲ ನೀನು!'

ನಾನು ಚಡಪಡಿಸ ಹತ್ತಿದೆ.

'ಸಾಮಾನ್ಯವಾಗಿ ಎಷ್ಟು ಪಕ್ಕೆಲಬುಗಳಿರುತ್ತವೆ?' ಧಾಟಿ ಬದಲಾಯಿಸಿದಳು.

'ಈ ಕಡೆ ಒಂಭತ್ತು, ಆ ಕಡೆ ಹತ್ತು' ಶಾಲೆಯಲ್ಲಿ ಆರೋಗ್ಯದ ಕ್ಲಾಸಿನಲ್ಲಿ ಕಲಿತಿದ್ದನ್ನು ನೆನಪಿಸಿಕೊಳ್ಳುತ್ತ ಅಡ್ಡಾದಿಡ್ಡಿಯಾಗಿ ಹೇಳಿದೆ.

'ಎಲ್ಲಿ ಕೈ ತೆಗಿ ನೋಡೋಣ... ಒಂದು... ಎರಡು... ಮೂರು...' ತಪ್ಪಿಸಿಕೊಂಡು ಓಡ ಬೇಕೆನ್ನಿಸಿತ್ತು, ನನ್ನನ್ನು ಗಟ್ಟಿಯಾಗಿ ಅವುಚಿ ಹಿಡಿದಿದ್ದಳು.


ಇಸ್ಮತ್ ಚುಗ್ತಾಯಿ

ಕೌದಿ

'ಓಹ್...!' ಅವಳಿಂದ ತಪ್ಪಿಸಿಕೊಳ್ಳಲು ಹೆಣಗುತ್ತಿದ್ದಂತೆ ಖೊಳ್ಳನೆ ನಕ್ಕಳು. ಇವತ್ತಿಗೂ ಅವಳ ಮುಖವನ್ನು ನೆನಸಿಕೊಂಡರೆ ಝಿಲ್ಲೆನ್ನಿಸುತ್ತದೆ. ಅವಳ ಕಣ್ಣೆವೆಗಳು ಎಂದಿಗಿಂತ ಭಾರವಾಗಿದ್ದವು. ಕೆಳಗೆ ಬಾಗಿದ್ದ ಮೇಲ್ತುಟಿಯ ಸುತ್ತ ನೆರಳೊಂದಿತ್ತು. ತಣ್ಣಗಿನ ಹವೆಯಲ್ಲೂ ಅವಳ ತುಟಿಯ ಮೇಲೆ ಮತ್ತು ಮೂಗಿನ ಮೇಲೆ ಬೆವರಿನ ಸಣ್ಣ ಹನಿಗಳು ಹೊಳೆಯುತ್ತಿದ್ದವು. ಅವಳ ಕೈಗಳು ಹಿಮದಂತೆ ತಣ್ಣಗೆ ಕೊರೆಯುತ್ತಿದ್ದರೂ ಮೇಲಿನ ಚರ್ಮದ ಬಿರುಸೂ ಇಲ್ಲದಷ್ಟು ಮೃದುವಾಗಿತ್ತು. ಶಾಲನ್ನು ತೆಗೆದಿದ್ದಳು. ತೆಳ್ಳಗಿನ ಕುರ್ತಾದ ಮೂಲಕ ಅವಳ ದೇಹ ಹಿಟ್ಟಿನ ಉಂಡೆಯಂತೆ ಹೊಳೆಯುತ್ತಿತ್ತು. ತೆರೆಯಲ್ಪಟ್ಟ ಕಾಲರಿನ ಒಂದು ಕಡೆಯಿಂದ ಚಿನ್ನದ ಗುಂಡಿಗಳು ಇಣುಕುತ್ತಿದ್ದವು.

ಮುಸ್ಸಂಜೆಯಾಗಿ ಕೋಣೆ ಕತ್ತಲಲ್ಲಿ ಮುಳುಗಿತ್ತು. ಅವ್ಯಕ್ತ ಭಯವೊಂದು ನನ್ನನ್ನು ಆವರಿಸಿಕೊಳ್ಳಲಾರಂಭಿಸಿತು. ದಿಗ್ಭ್ರಮೆಗೆ ಒಳಗಾದವಳಂತೆ ಮರಗಟ್ಟಿದೆ. ಬೇಗಂ ಜಾನಳ ಕಣ್ಣುಗಳ ಆಳ ಇನ್ನೂ ಹೆಚ್ಚಿತ್ತು. ಒಳಗೇ ಅಳು ಉಕ್ಕಿ ಬಂತು. ನಾನೊಂದು ಬೊಂಬೆಯೇನೋ ಎಂಬಂತೆ ಅವುಚಿ ಹಿಸುಕಿದಳು. ಅವಳ ಬಿಸಿ ಸ್ಪರ್ಶ ನನ್ನನ್ನು ಭಯಂಕರ ತುಮುಲಕ್ಕೆ ದೂಡಿತ್ತು. ಅವಳಿಗೆ ಯಾವುದರ ಪರಿವೆಯೂ ಇದ್ದಂತಿರಲಿಲ್ಲ, ಮೈಯ್ಯಲ್ಲಿ ದೆವ್ವ ಹೊಕ್ಕಂತಿದ್ದಳು. ಅಳಲಾಗದೆ, ಕಿರಿಚಲೂ ಆಗದೆ ತತ್ತರಿಸಿದೆ.

ಕ್ಷಣಗಳ ಬಳಿಕ ಸುಸ್ತಾದವಳಂತೆ ಸೊಪ್ಪಾಗಿ ಹಿಂದಕ್ಕೆ ಒರಗಿದಳು. ಅವಳ ಮುಖ ಪೇಲವವಾಗಿತ್ತು, ದೀರ್ಘವಾಗಿ ಉಸಿರೆಳೆದುಕೊಳ್ಳಲಾರಂಭಿಸಿದಳು. ಅವಳು ಸಾಯುತ್ತಿರಬಹುದು ಎಂದುಕೊಂಡೆ. ಥಟ್ಟನೆ ಎದ್ದು ಓಟ ಕಿತ್ತೆ.

ರಬ್ಬೊ ಸಧ್ಯ ಸಾಯಂಕಾಲದ ಹೊತ್ತಿಗೆ ಬಂದಿಳಿದಳು. ಮಲಗಲು ಹೋದಾಗ ನನ್ನೆದೆ ಹೊಡೆದುಕೊಳ್ಳುತ್ತಿತ್ತು. ತಕ್ಷಣ ಮುಸುಕೆಳೆದು ಮಲಗಲು ಯತ್ನಿಸಿದೆ. ನಿದ್ದೆಯೆಲ್ಲಿ? ಗಂಟೆಗಟ್ಟಲೆ ಎಚ್ಚರವಾಗಿಯೇ ಇದ್ದೆ.

ಈ ಅಮ್ಮ ಒಬ್ಬಳು! ಇಷ್ಟು ದಿನ ಆದರೂ ಬರಬಾರದೆ? ಬೇಗಂ ಜಾನಳಿಗೆ ಹೆದರಿಕೊಂಡು ಈಗ ಕೆಲಸದವರ ಮಧ್ಯೆ ಇಡೀ ದಿನ ಕಳೆಯುತ್ತಿದ್ದೆ, ಅವಳ ಕೋಣೆಗೆ ಕಾಲಿಡುವುದೆಂದರೆ ಹೃದಯ ಬಾಯಿಗೆ ಬಂದಂತಾಗುತ್ತಿತ್ತು. ಯಾರ ಹತ್ತಿರ ಹೇಳಿಕೊಳ್ಳಲಿ? ಏನಂತ ಹೇಳಿಕೊಳ್ಳಲಿ? ನನ್ನನ್ನು ಅಷ್ಟೊಂದು ಇಷ್ಟಪಡುವ ಬೇಗಂ ಜಾನಳನ್ನು ಕಂಡರೆ ನನಗೆ ಭಯ ಎಂದೆ?

ನನ್ನ ದುರಾದೃಷ್ಟಕ್ಕೆ, ರಬ್ಬೊ ಮತ್ತು ಬೇಗಂ ಜಾನಳ ನಡುವೆ ವಿರಸ ತಲೆದೋರಿತ್ತು, ಕುತ್ತಿಗೆಗೆ ಬಂತು ಅಂತ ಅಂದುಕೊಂಡೆ. ನಾನು ಹೊರಗೆ ತುಂಬ ಸಮಯವನ್ನು ಕಳೆಯುತ್ತಿದ್ದರಿಂದ ನನಗೆ ನ್ಯುಮೋನಿಯಾ ತಗಲಿ ಸತ್ತು ಹೋಗುವೆನೆಂಬ ಭಯ ಬೇಗಂ ಜಾನಳಿಗೆ ಅಚಾನಕ್ಕಾಗಿ ಬಂದಿತ್ತು.

'ನಿನಗೇನಾದರೂ ಆದರೆ ನನ್ನ ತಲೆ ಮೇಲೆ ಗೂಬೆ ಕೂರಿಸುತ್ತಾರಲ್ಲ ಹುಡುಗಿ? ನನ್ನ ತಲೆ ಬೋಳಿಸುವುದನ್ನು ನೋಡಲು ನಿನಗೆ ಇಷ್ಟವೇನು?' ನನ್ನನ್ನು ಹತ್ತಿರ ಕೂರಿಸಿಕೊಂಡು ಕೇಳಿದಳು. ಅವಳ ಮುಂದಿದ್ದ ಬೇಸಿನ್ ಒಂದರಲ್ಲಿ ಮುಖ ತೊಳೆಯುತ್ತಿದ್ದಳು. ಪುಟ್ಟ ಟೇಬಲ್ ಒಂದರ ಮೇಲೆ ಬಿಸಿಯಾದ ಚಾ ಕಾಯುತ್ತಿತ್ತು.

'ನಿನಗೊಂದು ಕಪ್ ಬಗ್ಗಿಸಿಕೊಂಡು ನನಗೂ ಒಂದು ಕಪ್ ಕೊಡು. ಬಟ್ಟೆ ಬದಲಾಯಿಸಿ ಬರುತ್ತೇನೆ' ಟವೆಲ್ಲಿನಿಂದ ಮುಖವನ್ನು ಒರೆಸುತ್ತಾ ಹೇಳಿದಳು.

ಟೀ ಕುಡಿಯುತ್ತಾ ಕೂತೆ. ಅವಳ ಬೆನ್ನು ತಿಕ್ಕಲ್ಪಡುತ್ತಿರುವಾಗ ನನಗೆ ಕರೆ ಬಂದಾಗೆಲ್ಲಾ ಹೋಗುತ್ತಿದ್ದದ್ದೇನೋ ಸರಿ. ಎಲ್ಲೋ ನೋಡುತ್ತಾ ಅವಕಾಶ ಸಿಕ್ಕಿದ ತಕ್ಷಣ ಥಟ್ ಅಂತ ಹೊರಗೋಡಿ ಬಿಡುತ್ತಿದ್ದೆ. ಈಗ ನನ್ನೆದುರಿಗೇ ಬಟ್ಟೆ ಬದಲಾಯಿಸುತ್ತಿದ್ದಾಗ ಹೊಟ್ಟೆ ತೊಳೆಸು ಮತ್ತೆ ಶುರುವಾಯಿತು. ಎಲ್ಲೋ ನೋಡುತ್ತಾ ಚಾ ಹೀರಲಾರಂಭಿಸಿದೆ.

'ಅಯ್ಯೋ ಅಮ್ಮಾ! ಹುಡುಗರ ಹತ್ತಿರ ಜಗಳವಾಡುವುದು ಅಂಥಾ ಪಾಪವೇ? ಇಂಥಾ ಶಿಕ್ಷೆ ಕೊಡುವಂತೆ...?' ಮನಸ್ಸಿನ ಮೂಲೆಯಲ್ಲೊಂದು ಧ್ವನಿ ಹತಾಶೆಯಿಂದ ಕೇಳುತ್ತಿತ್ತು. ಅಮ್ಮನಿಗೆ ನಾನು ಹುಡುಗರೊಟ್ಟಿಗೆ ಆಡುವುದೆಂದರೆ ಆಗುವುದಿಲ್ಲ. ಅವರೇನು ಅವಳ ಮುದ್ದಿನ ಮಗಳನ್ನು ತಿಂದುಬಿಡುವ ಮೃಗಗಳೆ? ಅದೂ ಯಾವ ಹುಡುಗರು? ನನ್ನ ಸ್ವಂತ ಅಣ್ಣ ತಮ್ಮಂದಿರು ಮತ್ತವರ ಗೂಬೆ ಗೆಳೆಯರು. ಉಹೂಂ. ಅಮ್ಮನ ಪ್ರಕಾರ ಹೆಣ್ಣುಮಕ್ಕಳೆಂದರೆ ಸುಭದ್ರ ರಕ್ಷಣೆಯಲ್ಲಿರಬೇಕಾದವರು. ಪ್ರಪಂಚದ ಎಲ್ಲ ಲುಚ್ಚಾಗಳಿಗಿಂತ ಬೇಗಂ ಜಾನಳನ್ನು ಕಂಡರೆ ನನಗೆ ಜಾಸ್ತಿ ಭಯ ಅಂತ ಅವಳಿಗೇನು ಗೊತ್ತು? ಬಿಟ್ಟರೆ ಈ ಗಳಿಗೆಯೇ ಓಡಿಬಿಡುತ್ತಿದ್ದೆ. ಏನು ಮಾಡುವುದು? ವಿಧಿಯಿಲ್ಲವಲ್ಲ!

ಬಟ್ಟೆ ಬದಲಾಯಿಸಿ ಬೇಗಂ ಜಾನ್ ಹಾಯಾಗಿ ಅಲಂಕಾರಕ್ಕೆ ಶುರು ಹಚ್ಚಿದಳು. ಮುಗಿದಾಗ ಅವಳು ಹಚ್ಚಿದ್ದ ಬೆಚ್ಚಗಿನ ಎಣ್ಣೆಯ ಸುಗಂಧದಲ್ಲಿ ಹತ್ತಿ ಬೆಳಗುತ್ತಿದ್ದ ಅಂಗಾರದಂತೆ ಕಂಡಳಲ್ಲ! ಈಗ ನನ್ನ ಮೇಲೆ ಅವಳ ಪ್ರೀತಿಯ ಧಾರೆ ಹರಿಯುವುದಕ್ಕೆ ಸಿದ್ಧವಾಗಿತ್ತು.

'ನಾನು ಮನೆಗೆ ಹೋಗಬೇಕು.' ಅವಳು ಹೇಳಿದ್ದಕ್ಕೆಲ್ಲಾ ನನ್ನದು ಒಂದೇ ರಾಗ. ಅಳಲಾರಂಭಿಸಿದೆ.

'ಬಾ ಮರಿ ಇಲ್ಲಿ...ನನ್ನ ಹತ್ತಿರ ಕೂರು. ನಿನ್ನ ಬಜಾರಿಗೆ ಕರ್ಕೊಂಡು ಹೋಗ್ತೀನಿ, ಇಲ್ಲಿ ಕೇಳು...'

ಉಹೂಂ, ನನಗೇನೂ ಬೇಡವಿತ್ತು ಅವಳು ತೋರಿಸಿದ ಮಿಠಾಯಿಗಳ, ಬೊಂಬೆಗಳ ಆಸೆಗಳಿಗೆ ನನ್ನದು ಒಂದೇ ಪ್ರತಿಕ್ರಿಯೆ.

'ಮನೆಯಲ್ಲಿ ನಿನ್ನ ತಮ್ಮ ಹೊಡೆಯುತ್ತಾನಲ್ಲಾ ಹಟಮಾರಿ ಹುಡುಗೀ...' ಪ್ರೀತಿಯಿಂದ ಕೆನ್ನೆ ಚಿವುಟಿ ಹೇಳಿದಳು.

'ಪರವಾಗಿಲ್ಲ, ಅವನಿಗೆ ಮನಸ್ಸಿಗೆ ಬಂದಷ್ಟು ಹೊಡೆಯಲಿ...' ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತಾ ಸುಮ್ಮನೆ ಕೂತೆ.

'ಕಸಕಟ್ಟಿ ಮಾವಿನ ಕಾಯಿಗಳು ತುಂಬಾ ಹುಳಿ ಬೇಗಂ ಜಾನ್...' ಕಟುವಾಗಿ ಹೇಳಿದಳು ರಬ್ಬೊ. ಥಟ್ಟನೆ ಬೇಗಂ ಜಾನಳಿಗೆ ಆವೇಶ ಬಂತು. ಕ್ಷಣದ ಹಿಂದೆ ನನ್ನ ಕತ್ತಿಗೆ ಹಾಕಬೇಕೆಂದುಕೊಂಡಿದ್ದ ಚಿನ್ನದ ಸರ ಚೂರುಚೂರಾಗಿ ಹಾರಿತು. ಅವಳ ಚೆಂದದ ಲೇಸಿನ ದುಪಟ್ಟಾ ಚಿಂದಿಯಾಯಿತು. ಆಚೀಚೆ ಅಲುಗಾಡದ ಕೂದಲು ಹೇಗೆಹೇಗೋ ಹರಡಿಕೊಂಡಿತು. 'ಓ..ಓ..ಓ..' ಕೋಣೆಯ ತುಂಬ ಅವಳ ಅರಚಾಟ. ಅವಳ ದೇಹ ಹತೋಟಿ ಮೀರಿ ಕಂಪಿಸುತ್ತಿತ್ತು, ಕೋಣೆಯಿಂದ ಹೊರಗೋಡಿದೆ.

ಬೇಗಂ ಜಾನ್ ತಣಿಯುವುದಕ್ಕೆ ಸಾಕಷ್ಟು ತಡವಾಯ್ತು. ಮೆಲ್ಲಗೆ ಹೆಜ್ಜೆಯಿಟ್ಟು ಕೋಣೆಗೆ ಬಂದಾಗ ರಬ್ಬೊ ಅವಳ ಬೆನ್ನನ್ನು ತಿಕ್ಕುತ್ತಿದ್ದಳು.


'ನಿನ್ನ ಶೂ ತೆಗೆ...' ಬೇಗಂ ಜಾನಳ ಪಕ್ಕೆಲಬನ್ನು ತಿಕ್ಕುತ್ತಿದ್ದ ರಬ್ಬೊ ಅಜ್ಞಾಪಿಸಿದಳು. ಇಲಿಮರಿಯಂತೆ ಹಾಸಿಗೆಗೆ ನುಸುಳಿ ಕೌದಿಯನ್ನು ನನ್ನ ಮೇಲೆಳೆದುಕೊಂಡೆ.

'ಸಿರ್...ಸಿರ್...ಫಟ್...ಕಿಚ್...' ಕತ್ತಲೆಯಲ್ಲಿ ಬೇಗಂ ಜಾನಳ ಕೌದಿ ಆನೆಯಂತೆ ಮತ್ತೆ ತೂನೆಯಲಾರಂಭಿಸಿತ್ತು. 'ಅಯ್ಯೋ...ದೇವರೇ...' ಭಯದಿಂದ ನನ್ನ ಧ್ವನಿ ಹೂತುಹೋಗಿತ್ತು. ಆನೆ ಕೌದಿಯೊಳಗೆ ಜಿಗಿದು ನಿಶ್ಶಬ್ದವಾಯಿತು. ನಾನೂ ಸದ್ದಿಲ್ಲದೇ ಮಲಗಿದ್ದೆ, ಮತ್ತೆ ಆನೆಯ ಪುಂಡಾಟ ಶುರುವಾಯ್ತು. ತಲೆಯಿಂದ ಕಾಲಿನವರೆಗೆ ತತ್ತರಿಸಿದೆ. ಇದ್ದ ಧೈರ್ಯವೆಲ್ಲವನ್ನೂ ಒಟ್ಟುಗೂಡಿಸಿ ತಲೆದೆಸೆಯಲ್ಲಿದ್ದ ಲೈಟಿನ ಸ್ವಿಚ್ಚನ್ನು ಅದುಮಬೇಕು ಎಂದುಕೊಂಡೆ. ಆನೆ ಮತ್ತೆ ಎದ್ದು ಭಯಂಕರವಾಗಿ ಅಲುಗಾಡಲಾರಂಭಿಸಿತು. ಕಾಲ ಮೇಲೆ ಕೂರಲು ಹವಣಿಸುತ್ತಿತ್ತೋ ಏನೋ. ಯಾರೋ ಏನನ್ನೋ ಚಪ್ಪರಿಸಿ ತಿನ್ನುವವರಂತೆ ಲೊಚಲೊಚ ಸದ್ದು. ಅರೆಕ್ಷಣದಲ್ಲಿ ನನಗೆಲ್ಲವೂ ಅರ್ಥವಾಗಿತ್ತು. ಬೇಗಂ ಜಾನ್ ಆವತ್ತು ಏನನ್ನೂ ತಿಂದಿರಲಿಲ್ಲ, ಈ ರಬ್ಬೊ ಬಿಡಿ, ಹೊಟ್ಟೆಬಾಕಿ. ಕೌದಿಯ ಮರೆಯಲ್ಲಿ ಏನೋ ರುಚಿಯಾದ್ದನ್ನು ನುಂಗುತ್ತಿರಬೇಕು. ಅದರ ಪರಿಮಳವೇನಾದರೂ ಗಾಳಿಯಲ್ಲಿದೆಯೇ ಎಂದು ನೋಡಲು ಮೂಗಿಂದ ಉಸಿರೆಳೆದುಕೊಂಡೆ. ಉಹೂಂ. ಬರೀ ಅತ್ತರಿನ, ಶ್ರೀಗಂಧದ, ಹೆನ್ನಾದ ಸುಗಂಧ ತೇಲಿಬಂತು.

ಕೌದಿ ಮತ್ತೆ ಉಬ್ಬರಿಸುತ್ತಿತ್ತು. ಆ ಕಡೆಯೇ ನೋಡದೆ ನನ್ನ ಪಾಡಿಗೆ ಮಲಗಲು ಪ್ರಯತ್ನಿಸಿದೆ. ಆಗಲಿಲ್ಲ, ಕೌದಿ ಪಡೆದುಕೊಳ್ಳುತ್ತಿದ್ದ ಚಿತ್ರವಿಚಿತ್ರ ಆಕಾರಗಳು ಬೆನ್ನು ಹುರಿಯಲ್ಲಿ ಚಳಿ ಹುಟ್ಟಿಸಿದವು. ವಿಕಾರವಾಗಿ ಉಬ್ಬುತ್ತಿದ್ದ ಕಪ್ಪೆಯೊಂದು ನನ್ನ ಮೇಲೆ ಜಿಗಿಯಲು ಸಿದ್ಧವಾಗುತ್ತಿದ್ದಂತೆ ಕಂಡು ಬಂತು. ಶಕ್ತಿಯೆಲ್ಲ ಕೂಡಿಸಿಕೊಂಡು ಗಂಟಲಿಂದ ಗೊರಗೊರ ಶಬ್ದ ಮಾಡಲು ಯತ್ನಿಸಿದೆ. ಯಾರಿಗೂ ಅದರ ಕಡೆ ಗಮನ ಹರಿಯಲಿಲ್ಲ, ಕೌದಿ ಈಗ ನನ್ನ ಮೆದುಳಿನ ಒಳಗೆ ಇಳಿದು ಉಬ್ಬಲಾರಂಭಿಸಿತು. ಹೆದರುತ್ತಲೇ ಕಾಲೆರಡನ್ನೂ ಕೂಡಿಸಿಕೊಂಡು ಸ್ವಿಚ್ಚಿಗೆ ತಡಕಾಡಿ ಬೆರಳನ್ನು ಥಟ್ಟನೆ ಒತ್ತಿಯೇಬಿಟ್ಟೆ. ಕೌದಿಯ ಒಳಗೆ ಆನೆ ಗಬಕ್ಕನೆ ಪಲ್ಟಿ ಹೊಡೆದು ಉರುಳಿತು. ಹೊಡೆದ ಪಲ್ಟಿ ಕೌದಿಯ ಒಂದು ಅಂಚನ್ನು ಒಂದು ಅಡಿಯಷ್ಟು ಮೇಲೆತ್ತಿತ್ತು, 'ಅಲ್ಲಾಹ್....!' ಥಟ್ಟನೆ ಹಾಸಿಗೆಗೆ ಧುಮುಕಿದೆ.

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

(ಮೂಲ: ವಿಮೆನ್ ರೈಟಿಂಗ್ ಇನ್ ಇಂಡಿಯಾ (2), ಸಂ: ಸೂಸಿ ಥಾರು ಮತ್ತು ಲಲಿತಾ ಕೆ.)



ಸುಮ್ಮನೆ ಮಲಗಿದನವ ಕಣ್ಣಲ್ಲಿ
ಕುಂಚ ಹಿಡಿದು ಬಣ್ಣ ಸವರುತ್ತಾನೆ ಅವನು.
ಅಲ್ಲೂ ಒಂದು ಪ್ರಪಂಚವೇ ಸೃಷ್ಟಿಸುವ
ಪವಾಡ ಮಾಡ ಹೊರಟ ಹುಂಬನಿಗೆ
ಇಲ್ಲೊಂದು ಪ್ರಪಂಚ ಸೃಷ್ಟಿಸಿದವನ
ಪಡಿಪಾಟಲು ಅರ್ಥವಾಗಲಿಲ್ಲವೇನೊ?
ಹಾಗೆ ಹಾಸಿಗೆಯಿಂದ ಎದ್ದು
ನಿರ್ಲಿಪ್ತ ಮನಸ್ಸಿನಿಂದ, ಆಕಳಿಸುತ್ತ ಕದ ತೆಗೆದರೆ,
ಅಮ್ಮ ಹಾಕಿದ ರಂಗೋಲಿ ಹರುಕು-ಮುರುಕು.
ಚುಕ್ಕಿಯಿಂದ ಚುಕ್ಕಿಗೆ ಇರುವ ಸಂಬಂಧ
ಹರಿದು ಹಳಸಿಹೋಗಿದೆ.
ಆ-ಕೃತಿ ವಿಕೃತಿಯಾಗಿ ನರಳಾಡಿದೆ.
ನಮ್ಮ ಮನಸ್ಸಿನ ಕಪ್ಪು ಕನಸುಗಳಿಗೆ
ಬಣ್ಣ ತುಂಬಿದವನು ನೀನು.
ಕಣ್ಣಾರೆ ನೋಡುತ್ತಿದ್ದೆಯೇನು?
ಈ ವಿಕೃತಿಯಾ
ಒಂಟಿಯಾಗಿ ಅಲೆದಾಡುವ ಹಕ್ಕಿಗೆ
ಜಂಟಿತನವ ಸಮರ್ಪಿಸಿದವ ನೀನು.
ಇರಲಿ........
ನೀ ಚಿತ್ರಿಸಿದ ಸಮುದ್ರದ ಹಡಗು
ದಡ ಸೇರಲೇ ಇಲ್ಲ.
ನಾನಿಲ್ಲಿ ದಡದಲ್ಲಿ ಕಾಯುತ್ತಿದ್ದೇನೆ.
ಜೀವಹೊತ್ತ ನಿನ್ನ ಕಾಯ ಮತ್ತೇ ಬರುವುದೆಂದು,
ಸತ್ತ ಕನಸುಗಳಿಗೆ ಉಪ್ಪು ನೀರೆರೆಯುತ್ತ
ವಿಕಾರವಾಗದಂತೆ ನೋಡಿಕೊಳ್ಳುತ್ತಿದ್ದೇನೆ ಅವನ್ನು
ನೀ ಬಂದು ಬೈಯ್ಯಬಾರದೆಂದು.
ಇನ್ನೊಮ್ಮೆ ನನ್ನ ಕಣ್ಣಲ್ಲಿ ಪ್ರಪಂಚ ಸೃಷ್ಟಿಸುವ
ಗೊಡವೆಗೆ ಹೋಗಬೇಡ.
ನೀನೆ ಚಿತ್ರಿಸಿದ ಹಡಗಿನ ನಾವಿಕನಾಗು ಸಾಕು.
ನೀ ದಡಸೇರುವ ಸಮಯವನ್ನು
ನಾನು ಕಾಯ್ದಿದ್ದೇನೆ, ಕನಸಿದ್ದೇನೆ, ಕನವರಿಸಿದ್ದೇನೆ
ಕಾಯುತ್ತೇನೆ ಕೂಡ.
ಅಬ್ಬರಿಸಿ ಬಂದ ಅಲೆಗಳು ಅದೆಷ್ಟು ಬಡಿದರೂ
'ಜಪ್' ಅಂದಿಲ್ಲ ನಾನು.
ಅವುಗಳೇ ಮರಳಿ ಹೋಗಿವೆ ಹೋಗುತಲಿವೆ
ಬಂದ ದಾರಿಗೆ ಸುಂಕವಿಲ್ಲವೆಂದು.
ಅಬ್ಬಾ! ಶಿವನೆ ಈ ಜೀವನ ಎಂತಹ ಪರೀಕ್ಷೆ
ಆದರೂ ನನಗಿದೆ ಗೆಳೆಯ
ನೀ ದಡ ಸೇರುವ ಖಚಿತ ನಿರೀಕ್ಷೆ.

– ಶಿವಕುಮಾರ ಅಮ್ಮಾಪುರ

ಬುದ್ಧಿಶಕ್ತಿಯ ದುರುಪಯೋಗವು ಅತ್ಯಂತ ಹೇಯವಾದರೂ ಅದರಷ್ಟು ಸರ್ವ ಸಾಮಾನ್ಯವಾದ ಕೆಟ್ಟ ಬಾಳು ಬೇರೊಂದಿಲ್ಲ -ಶೆಲ್ಲಿ

ಲೇಡೀಸ್ ಇಲ್ದೆ ಕಳೆ ಕಟ್ಟಕಿಲ್ಲ ಬುಡಿ

ಅಣಕ

ರಾಯರು ಕಳಕಳಿಯಾಗಿದ್ದರು!

ಮನೆಯವರಿಗೆ ಅದೇ ಆಶ್ಚರ್ಯ. ಈ ಪರಿವರ್ತನೆಗೆ ಕಾರಣ ಏನು ಅಂಬೋದು. ಮೊದಲೆಲ್ಲ ಪತ್ರಿಕೆ ಮನೆ ಬಾಗಿಲಿಗೆ ಬರುತ್ತಿದ್ದ ಹಾಗೆ, ಹಾಗೆ ನೋಡಿ ಹೀಗೆ ಒಗೀತಿದ್ದರು. ಬೇರೆಯವರು ಓದಲು ತೆಗೆದುಕೊಂಡರೆ 'ಅದರಲ್ಲೇನಿದೆ ಹಾಳು ಸುದ್ದಿ' ಎನ್ನುತ್ತಾ ಉತ್ಸಾಹ ಕುಗ್ಗಿಸುತ್ತಿದ್ದರು. ಟಿವಿ ಮುಂದೆ ಕುಳಿತು ನೆಮ್ಮದಿಯಾಗಿ ಸುದ್ದೀನಾದರೂ ನೋಡೋಣ, ಕೇಳೋಣ ಅಂದರೆ 'ಆಫ್ ಮಾಡಿ ಆ ದರಿದ್ರಾನ, ಮನೇಲಿ ಒಂದೇ ಗಲಾಟೆ' ಅಂತ ಒದರೋರು. ಈ ಹಾಳಾದ ಮುದುಕ ಯಾಕಾದ್ರೂ ರಿಟೈರ್ ಆದನೋ, ಇನ್ನೂ ಹರಹರ ಅನ್ನೋದು ಎಷ್ಟು ಶತಕೋಟಿ ದಿನಗಳಾಗುತ್ತೋ ಅನ್ನುವ ಭಾವನೆ ಬರುವಂತೆ ಮನೆ ಮಂದಿಯನ್ನೆಲ್ಲ ಗೋಳು ಹುಯ್ಕೊಳ್ಳೋರು. ಈಗ ನೋಡಿದರೆ ಪತ್ರಿಕೆ ಬಂದ ತಕ್ಷಣ ಭಗವದ್ಗೀತೆ ತರಹ ಪಠಣ ಮಾಡೋಕೆ ಪ್ರಾರಂಭಿಸುತ್ತಾರೆ. ಬಕಪಕ್ಷಿಯಂತೆ ಸುದ್ದಿ ಚಾನೆಲ್‌ಗಳ ನಿರೀಕ್ಷಿಸುತ್ತಾರೆ! ಎಲಲಾ ಈ ಪಾಟ ಬದಲಾವಣೆಗೆ ಕಾರಣ ಏನು ಅಂತ ಸ್ವಲ್ಪ ಪತ್ತೇದಾರಿ ಕೆಲಸ ಮಾಡಿದ ಮೇಲೆ ಮನೆಯವರಿಗೆ ಅರ್ಥ ಆಯಿತಂತೆ... ಸುದ್ದಿ ಮಾಧ್ಯಮಗಳಲ್ಲಿ ಇತ್ತೀಚೆಗೆ ಸ್ವಾರಸ್ಯಕರ ವಿಷಯಗಳು ಬರುತ್ತಿವೆ!

ಸ್ವಾರಸ್ಯಕರ ಎಂದರೇನು ಎಂಬುದು ಪ್ರಶ್ನೆ. ಕ್ಯಾಮಣಿಯೊಬ್ಬಳು ಕ್ಷೇಮಕರವಾಗಿ ಮನೆ ತಲುಪಿದಳು ಅಂದರೆ ಅದರಲ್ಲೇನಿದೆ ಸ್ವಾರಸ್ಯ? ಅದೇ ಹಾಡುಹಗಲೇ ಆಕೆಯ ಮೇಲೆ ಅತ್ಯಾಚಾರ ನಡೆಯಿತು ಅಂದರೆ ಅದು ಕುತೂಹಲದ ಸಂಗತಿ. ಆಕೆ ಯಾರು? ಅತ್ಯಾಚಾರಿಗಳ ವಿಳಾಸ ಯಾವುದು? ಆಕೆ ಅವರಿಗೆ ಮೊದಲೇ ಪರಿಚಿತಳೇ, ಅಲ್ಲವೆ? ಇಂತಹ ಹತ್ತಾರು ಪ್ರಶ್ನೆಗಳು ಮನಸ್ಸನ್ನು ಕೆರಳಿಸುತ್ತವೆ.



ಪೊಲೀಸರು ಲಂಚ ಸ್ವೀಕರಿಸದೆ ಕರ್ತವ್ಯ ನಿರ್ವಹಿಸಿದರು ಎಂದರೆ ಕುತೂಹಲ ಇರುವುದಿಲ್ಲ, ಇಂತಹ ಸುದ್ದಿ ಪ್ರಕಟಿಸುವ ಪತ್ರಿಕೆಗಳನ್ನ, ಟಿವಿ ಚಾನೆಲ್‌ಗಳನ್ನ ಮೂಸೂ ನೋಡುವುದಿಲ್ಲ, ಅದೇ ಅವರು ಲಂಚ ಸ್ವೀಕರಿಸುತ್ತಿರುವುದನ್ನು ಟಿವಿ ಕ್ಯಾಮೆರಾಗಳು ಸೆರೆ ಹಿಡಿದು ಚಿತ್ರಿಸಿದರೆ ಕೆಲವರಿಗೆ ಕುತೂಹಲ ಕೆರಳಬಹುದು. ಇದೇನು ಮಾಮೂಲಿ ಸುದ್ದಿ ಅಂತ ಹಲವರು ಚಾನೆಲ್ ಬದಲಾಯಿಸಬಹುದು. ಅದೇ ಲಂಚದ ಹಣ ಹಂಚಿಕೊಳ್ಳುವಾಗ ಚೆನ್ನೈನ ಪೊಲೀಸ್ ಪೇದೆಗಳು ಮಾರಾಮಾರಿ ಮಾಡಿಕೊಂಡರಲ್ಲ... ಅದು ಸ್ವಾರಸ್ಯ ಅಂದರೆ!

ಹೆದ್ದಾರಿಯಲ್ಲಿ ಅಪಘಾತ ಆಗೋದು ಸಾಮಾನ್ಯ ಸಂಗತಿ. ಕಾರೋ, ಬಸ್ಸೋ, ಲಾರಿಯೋ ಎಂತಹದ್ದೋ ಒಂದು ವಾಹನ ಅಪಘಾತದಲ್ಲಿ ನುಜ್ಜುಗುಜ್ಜಾಯಿತು ಅನ್ನುವ ಸುದ್ದಿ ಬಂದರೆ ಎಷ್ಟು ಜನ ಶಿವನ ಪಾದ ಸೇರಿದರು ಅನ್ನುವ ಕುತೂಹಲ ಕಾಡುತ್ತೆ. ಹೆಚ್ಚು ಜನ ಸತ್ತಿದ್ದಷ್ಟೂ ಮನಸ್ಸಿಗೆ ಏನೋ ಒಂದು ರೀತಿಯ ಸಮಾಧಾನ. ಅವರ ಹಿನ್ನೆಲೆ ತಿಳಿಯುವ ಕುತೂಹಲ. ಯಾರೂ ಸಾಯಲಿಲ್ಲ ಅಂದರೆ ಎಂತಹದ್ದೋ ನಿರಾಸೆ!

ಇಂತಹವೇನು ಇವತ್ತು ನಡೆಯುತ್ತಿವೆಯಾ, ಕಾಲದಿಂದಲೂ ನಡೀತಾನೆ ಇವೆ. ಈ ಮುದಿ ರಾಯನಿಗೆ ಆಗಿಲ್ಲದ್ದು ಈಗ ಏನು ಕುತೂಹಲ ಅಂದರೆ... ಅವರಿಗೆ ಇಂತಹವೆಲ್ಲ ಜುಜುಬಿ ಸಂಗತಿಗಳಂತೆ. ನಮ್ಮ ರಾಜಕೀಯ ನಾಯಕರು ಮಾಡುತ್ತಿರುವ ಆರೋಪ ಪ್ರತ್ಯಾರೋಪಗಳು ಮನಸ್ಸನ್ನು ಸೂರೆಗೊಳ್ಳುವ ಪತ್ತೇದಾರಿ ಕಾದಂಬರಿಯಂತೆ ರೋಚಕವಾಗಿದ್ದು ಮುಂದೇನು ಆಗುವುದು ಎಂಬ ಕುತೂಹಲವನ್ನು ಎಬ್ಬಿಸುತ್ತಿವೆಯಂತೆ!

ಅದೂ ನಿಜವೆ. ನಾಯಕ ಯಾರು? ಖಳನಾಯಕ ಯಾರು? ಅಥವಾ ಪಾತ್ರಧಾರಿಗಳೆಲ್ಲರೂ ಖಳನಾಯಕರೆ? ಸೋಲು ಯಾರಿಗೆ? ಗೆಲುವು ಯಾರಿಗೆ? ಅಥವಾ ತಿಪ್ಪೆ ಸಾರಿಸುವ ಕೆಲಸ ಸಾಂಗವಾಗಿ ನೆರವೇರಿ ಪ್ರೇಮ ಮತ್ತು ಯುದ್ಧದಲ್ಲಿ ಎಲ್ಲವೂ ಸರಿ ಎಂಬುದನ್ನು ಸಾಬೀತುಪಡಿಸುವರೆ? ಇಂತಹ ಕುತೂಹಲಕಾರಿ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಯುವುದು ಸ್ವಾರಸ್ಯವೇ ಸರಿ.

* * * * * *

ಸಂಜೆ ಅನುಭವ ಮಂಟಪ ಅರ್ಥಾತ್ ನಿವೃತ್ತ ನೌಕರರ ಸಭೆ ಸೇರುವಷ್ಟರಲ್ಲಿ ರಾಯರು ಉತ್ಸಾಹದ ಕುಲುಮೆ ಆಗಿದ್ದರು. 'ರಾಜಕೀಯ ಅಂದರೆ ಹೀಗಿರಬೇಕು' ಅಂತ ತಾರೀಪು ಮಾಡಿದರು.

'ಹ್ಯಾಂಗಿರಬೇಕ್ರಿ ಸರ' ಎಂದ ಒಬ್ಬ.

'ಅದನ್ನ ಏಕಪಾತ್ರಾಭಿನಯದ ಮೂಲಕ ತೋರುಸ್ತೀನಿ' ಅಂದರು ರಾಯರು.

ಅನುಭವ ಮಂಟಪಕ್ಕೆ ಕಳೆಕಟ್ಟಿತು.

'ಇಲ್ಲಿ ನಿಂತು ಮಾತನಾಡಿದರೆ ನಾನು ಇವನು, ಅಲ್ಲಿ ನಿಂತು ಮಾತನಾಡಿದರೆ ಅವನು...' ಹೀಗೆ ಎಲ್ಲಿ ನಿಂತರೆ ಯಾರು ಎಂಬುದನ್ನು ಮನದಟ್ಟು ಮಾಡಿದರು ರಾಯರು.

'ಲೇಡೀಸ್ ಇಲ್ದೆ ಎಂತ ನಾಟ್ಕ ಸಾ, ಕಳೆಕಟ್ಟಕಿಲ್ಲ ಬುಡಿ' ಇನ್ನೊಬ್ಬನ ತಕರಾರು.

ಅದೂ ಸರಿ ಅನ್ನಿಸಿತು ಮಂಟಪಾಧೀಶರುಗಳಿಗೆ. ಮಹಿಳೆಯರಿಗೆ ಮೀಸಲಾತಿ ನೀಡಿದರೂ ಪುರುಷರದ್ದೇ ಆಡಳಿತ ಎಂಬ ಆರೋಪ ಇದೆ. ಪುರುಷರ ಆಡಳಿತ ಇದ್ದರೂ ಮಹಿಳೆಯರದ್ದೇ ಆಡಳಿತ ಯಾಕಿರಬಾರದು? ಅದನ್ನು ತೋರಿಸಿದರೇ ರಾಜಕೀಯ ನಾಟಕಕ್ಕೆ ವಿಶೇಷ ಮೆರುಗು.

'ಪಸಿ ತಾಳೋ ಮಾರಾಯ ಅದೂ ಬತ್ತದೆ. ಮೊದ್ಲೇ ನಿನಗೆ ಲೇಡೀಸ್ ತೋರಿಸ್‌ಬುಡಬೇಕಾ' ರಾಯರ ರೇಗು. ಲೇಡೀಸು ತೆಪ್ಪಗಾಯಿತು. ರಾಯರು ಏಕಪಾತ್ರಾಭಿನಯ ಪ್ರಾರಂಭಿಸಿದರು.

'ಎಲವೋ ದುಷ್ಟ ಜಂತುವೆ, ಒಂದು ನೂರ ಐವತ್ತು ಕೋಟಿ ರೂಪಾಯಿ ಮಣ್ಣು ಮುಕ್ಕಿದ್ದಕ್ಕೆ ಇಲ್ಲಿದೆ ದಾಖಲೆ.'

'ಪಟ ಪಟ ಎಂದೇಕೆ ಬೊಗಳುವೆಯೋ ದುರುಳ, ನಿನ್ನ ಜಾತಕವೇ ನನ್ನ ಕೈಲಿದೆ.'

'ನಾನರಿಯನೇ ನಿನ್ನ, ಕಾಫಿ ಟೀ ತಂದು ಕೊಡುತ್ತಿದ್ದವನ್ನ, ಅರಿಯನೇಂ ನಾನು ಇಂಜಿನಿಯರಿಂಗ್ ಮೆಡಿಕಲ್ ಕಾಲೇಜು ಒಡೆಯನಾದ ಬಗೆಯಂ.'

'ಬುಡ್‌ಬೇಡ ಬಂಡಿಯ. ನೋಡಿಲ್ಲಿ ಎಂಬತ್ತೈದು ಕೋಟಿ ಬಂಗಲೆ ಗುಳುಂ ಅನ್ನಿಸಿದಕ್ಕೆ ಸಾಕ್ಷಿಯ.'

'ಅದು ಲಂಚವಲ್ತು ನಮ್ಮ ಶ್ರಮದ ಫಲ.'

'ಏನು ಶ್ರಮ ಪಟ್ಟರಿ ನೀವು? ಸೊಪ್ಪು ಸದೆ ಬೆಳೆದಿರಾ? ಹಣ ಬಂತು ಎಲ್ಲಿಂದ?'

'ಮೋಸ ಮಾಡಿಲ್ಲ, ಕದ್ದಿಲ್ಲ, ವ್ಯವಹಾರ ಮಾಡಿದೆವು.'

'ಎಂಥ ವ್ಯವಹಾರವದು? ವರ್ಗಾವಣೆಯೊ? ಗಣಿಗಾರಿಕೆಯೊ? ಅದೇಂ ಬೊಗಳು!'

'ಅಡಿಗಡಿಗೆ ಹಂಗಿಸಬೇಡೆನ್ನ. ನೀಂ ಗರೀಬರ ಗುಡಿಸಲು ಸುಡಿಸಿ ಕಟ್ಟಡವೆಬ್ಬಿಸಿದ ಪರಿಯ ನಾಕಾಣೆನೆ? ಹೊರ ತರುವೆನಾಂ ನೀಗೈದ ಅಕ್ರಮಂಗಳ.'

'ಎಲವೋ ನನ್ನ ಬಳಿಯೂ ಇರುವುದು ನೀಗೈದ ಪಾಪಂಗಳ ಪಟ್ಟಿ. ಮಾಧ್ಯಮಗಳಿಗೆ ಬಿಡುಗಡೆಯಾಗುವುದು ಗಟ್ಟಿ.'

ಅಭಿನಯವನ್ನು ಪೂರೈಸಿದ ರಾಯರು 'ಇದುವರೆವಿಗೆ ರಾಜಕೀಯದಲ್ಲಿ ಏನೂ ಉತ್ಸಾಹವೇ ಇರ್ತಿರ್ಲಿಲ್ಲ. ಈಗ ನೋಡಿ ಯಾವ ಆರೋಪ ಪ್ರತ್ಯಾರೋಪಗಳು ಬರುತ್ತವ್ರೋ ಅಂತ ತುದಿಗಾಲಿನಲ್ಲಿ ನಿಲ್ಲುವ ಹಾಗೆ ಮಾಡ್ತಿದಾರೆ' ಎಂದರು.

'ಅದೆಲ್ಲ ಸರಿ ಸಾ, ಲೇಡೀಸು ಅದರೆಲ್ಲಿ ಸಾ, ಬರ್ಲೇ ಇಲ್ಲ' ಎಂದು ಅಸಮಾಧಾನ ತೋರಿದ ಲೇಡೀಸ್ ಪ್ರಿಯ.

ಸುಧಾರಿಸಿಕೊಂಡ ರಾಯರು ಮತ್ತೊಮ್ಮೆ ಏಕಪಾತ್ರಾಭಿನಯಕ್ಕೆ ತಯಾರಿ ಮಾಡಿಕೊಂಡರು. ಆ ವಿಷಯ ಕುರಿತ ವಿವರಣೆ ಹೀಗಿದೆ: ವಯೋವೃದ್ಧರಾದ ಸಂಸ್ಥಾನಾಧಿಪತಿಗಳ ಆಸ್ಥಾನದಲ್ಲಿ ಗಂಡು ಮಕ್ಕಳು, ಹೆಣ್ಣು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಎಲ್ಲ ನೆರೆದಿದ್ದಾರೆ. ಮುದಿ ಸಿಂಹಕ್ಕೆ ತನ್ನ ವಂಶಜರ ಮೇಲೆ ಅಸಮಾಧಾನ. ಅಧಿಕಾರಿಯಾಗಿದ್ದ ಮಗನಿಗೆ 'ನಿನಗೆ ಇದೆಲ್ಲ ಸರಿ ಬರಲ್ಲ ಕೆಲಸ ಬಿಡು' ಎಂದು ಬುದ್ಧಿವಾದ ಹೇಳಿ 'ವರ್ಗಾವಣೆ ಖಾತೆ' ವಹಿಸಿಕೊಟ್ಟಿದ್ದರು. ಆತ ಅದು ಒಂದನ್ನೇ ಮಾಡಿದ್ದರೆ ಛೇಪಿತ್ತು. ಇತರೆ ಖಾತೆಗಳಿಗೂ ಕೈ ಹಾಕಿದ. ವೈದ್ಯನಾಗಿದ್ದ ಮಗನಿಗೆ 'ಇದು ನಿನಗೆ ಊರ್ಜಿತ ಆಗಲ್ಲ' ಅಂತ ಮೈನಿಂಗ್ ವೈದ್ಯನಾಗು ಅಂತ ಹರಸಿದರೆ ಅವನು ಹಡಗನ್ನೇ ನುಂಗಕ್ಕೆ ಹೊರಟ!

ಹೆಣ್ಣುಮಕ್ಕಳು ಬುದ್ಧಿವಂತರಾದರೆ ಗಂಡನ ಲಗಾಮನ್ನು ಭದ್ರವಾಗಿ ಹಿಡಿದಿರ್ತವೆ ಅಂತ ಡಾಕ್ಟರು, ಇಂಜಿನಿಯರು ಪದವಿ ಪಡೆದವರನ್ನೇ ಸೊಸೆಯಂದಿರನ್ನಾಗಿ ತಂದರೆ, ಅವ್ರು ಗಂಡಂದಿರ ಮೀರಿ ಕಬಳಿಸಕ್ಕೆ ನಿಂತಿವೆ. ಅಳಿಯಂದಿರೂ ಇದಕ್ಕೆ ಶಾಮೀಲಾಗಿದ್ದಾರೆ. ಐವತ್ತು ವರ್ಷದ ತಮ್ಮ ಸುದೀರ್ಘ ರಾಜಕೀಯದಲ್ಲಿ ಕಂಡೂ ಕಾಣದ ಹಾಗೆ ಮಾಡಿಕೊಂಡಿಟ್ಟ ಆಸ್ತಿಪಾಸ್ತಿ ಹಂಗೆ ಮಾಡಿಕೊಳ್ಳೋ ರೀತಿ ಎಂದರೆ ಊರಿಗೆಲ್ಲ ಟಾಂಟಾಂ ಹೊಡೆಯೋ ರೀತಿ ಮಾಡಿಕೊಂಡಿವೆ. ತಂದೆ ಮಕ್ಕಳ ಪಕ್ಷ ಅಂತ ಜರೀತಿದ್ದವರು ಈಗ 'ಫ್ಯಾಮಿಲಿ ಪ್ರಾಪರ್ಟಿ' ಅಂತ ತಲೆ ಎತ್ತದಂಗೆ ಮಾತಾಡ್ತಾರೆ.

'ಏನಾರ ಆಗ್ಲಿ ಮನೆ ಮಕ್ಕಳು ಮರಿ ಹೆಸರೆಲ್ಲ ಜನರಿಗೆ ತಿಳೀತು ಬುಡಿ.'

'ಹೆಂಗುಸರು ಯಾತ್ಕೂ ಬ್ಯಾಡದವರು ಅಂತಿದ್ದ ಅವರೂ ವ್ಯವಹಾರಸ್ಥರೇಯ!'

'ಇದೆಲ್ಲ ಸರಿನಾ, ಆ ವಂಸದೋರು, ವಂಸಕೆ ಬಂದೋರು ಅಂತಾವ ಹೆಂಗ್ಸಾ ಗುರ್ತು ಹಿಡಿಯೋದು' ಎಂಬ ಸಂಶಯ ವ್ಯಕ್ತಪಡಿಸಿದ ಲೇಡೀಸು ಪ್ರಿಯ.

'ಹೆಂಗೇ ಅಂತೀಯಾ?' ಎಂದು ಹೇಳಿ ಮುಖಕ್ಕೆ ಅದೇನೋ ಮಾಡಿಕೊಂಡು 'ಇಲ್ನೋಡು ಇದೆಂಗಿದ್ದತ್ತು' ಕೇಳಿದರು.

'ಹೆಂಗಿದ್ದಾತ್ತು ಮೊಕ ಇದ್ದಂಗೆ ಅದೆ.'

'ಅದು ಸರಿ ಕನೊ, ಕೆಂಪಗದೋ ಕಪ್ಪಗದೋ?'

'ಕೆಂಪಗದೆ.'

'ಹಂಗಿದ್ರೆ ವಂಸಕ್ಕೆ ಬಂದಿರೋರು ಅಂತಾವ. ಈಗ ನೋಡು ಈ ಕಡೆ.'

'ಗೊತ್ತಾಯ್ತು ಬುಡಿ ಸಾ, ಮಸಿ ಬಳ್ಕಂಡಂಗದೆ. ಹಂಗಿದ್ರೆ ವಂಸದೋರು ಅಂತಾವ!'

-ಎಚ್.ಎಲ್. ಕೇಶವಮೂರ್ತಿ


'ಲಂಕೇಶ್' ನಿಜವಾದ ವಿರೋಧ ಪಕ್ಷ

ಹೊಗಳಿಕೆ ತೆಗಳಿಕೆ

ಭ್ರಷ್ಟಾಚಾರಗಳ ಹಗರಣವನ್ನು ಪ್ರಥಮವಾಗಿ ಬಯಲಿಗೆಳೆದ ಗೌರಿ ಲಂಕೇಶ್‌ರ ತಂಡಕ್ಕೆ ಅಭಿನಂದನೆಗಳು. ಕರ್ನಾಟಕದ ಯಾವುದೇ ವಿರೋಧ ಪಕ್ಷದ ನಾಯಕರು ಗಳು ಈಗಿನ ಸರ್ಕಾರ ಪ್ರತಿನಿತ್ಯ ನಡೆಸುತ್ತಿರುವ ಭ್ರಷ್ಟಾಚಾರದ ಹಗರಣವನ್ನು ಬಯಲಿಗೆಳೆಯುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಅದನ್ನು ಬಯಲಿಗೆಳೆದ 'ಲಂಕೇಶ್' ಇವತ್ತು ರಾಜ್ಯದಲ್ಲಿ ನಿಜವಾದ ವಿರೋಧ ಪಕ್ಷದ ಕಾರ್ಯ ನಿರ್ವಹಿಸುತ್ತಿದೆ.

-ಎನ್.ವಿ. ಹಾಲಪ್ಪ, ಶಿವಮೊಗ್ಗ

'ಗೋಲ್‌ಮಾಲ್ ಗೌಡ- ಪುತ್ರಿಯರ ಅರಿಶಿಣ ಕುಂಕುಮಕ್ಕೆ 30 ಕೋಟಿ' ಲೇಖನ ಬರೆದು ಗೌಡರ ಮನೆತನದ ನೀರು ಇಳಿಸಿದ್ದಕ್ಕೆ ಥ್ಯಾಂಕ್ಸ್. ಯಾಕಂದ್ರೆ ಪಾಪ ದೇವೇಗೌಡ್ರು ಬೇರೆ ಯಾರಾದ್ರು ಒಂದಿಷ್ಟು ತಪ್ಪು ಮಾಡಿದ್ರೆ love letter (ತಿಳುವಳಿಕೆ ಪತ್ರ) ಬರೀತಾ ಇದ್ರು. ಈಗ ಅವರ ಕುಟುಂಬವೇ ಲಂಚ ಎಂಬ ಕೊಚ್ಚೆಯಲ್ಲಿ ಬಿದ್ದು ಒದ್ದಾಡ್ತಾ ಇದೆ. ದೇವೇಗೌಡ್ರೆ ಜನ ಹಿಂದಿನಷ್ಟು ಹಿಂದೆ ಬಿದ್ದಿಲ್ಲ, ನಿಮ್ಮಂತಹ ರಾಜಕಾರಣಿಗಳಿಂದಲೇ ಇವತ್ತಿನ ದಿವಸ ರಾಜಕೀಯಕ್ಕೆ ಒಂದಿಷ್ಟೂ ಬೆಲೆ ಇಲ್ಲ, ಇವತ್ತು ಪ್ರತಿಭಟಿಸೋದಿಕ್ಕೆ ಜನ ಇಲ್ಲದೆ ಇರಬಹುದು. ನಿಮ್ಮ ಮಾನ ಮರ್ಯಾದೆ ಹರಾಜು ಹಾಕೋಕೆ 'ಲಂಕೇಶ್' ವಾರಪತ್ರಿಕೆ ಇದೆ.



-ಮುತ್ತಣ್ಣ ಪೂಜಾರ್, ಕದಲಬಾಳು

ಕರ್ನಾಟಕ ಕಂಡ ಅತ್ಯಂತ ಜಾತಿವಾದಿ, ಕುಟುಂಬವಾದಿ, ಭ್ರಷ್ಟ ರಾಜಕಾರಣಿ ದೇವೇಗೌಡರ ಜಾತಕ ಜಾಲಾಡಿಸಿ ಬಿಸಾಕಿದ್ದೀರಿ. ಅಂದು ದೇವೇಗೌಡ ಮುಖ್ಯಮಂತ್ರಿಯಾಗಿದ್ದಾಗ ಅವರ ಮಕ್ಕಳ ಹಗರಣಗಳನ್ನು ಪಿ. ಲಂಕೇಶ್ ಪ್ರಕಟಿಸಿದಾಗ ಪತ್ರಿಕೆ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದವು. ಆದರೆ ಲಂಕೇಶ್ ಅದ್ಯಾವುದಕ್ಕೂ ಸೊಪ್ಪು ಹಾಕುತ್ತಿರಲಿಲ್ಲ, ತಂದೆಗೆ ತಕ್ಕ ಮಕ್ಕಳು ಹುಟ್ಟಿರುವುದು ಗೌಡರ ದುರಂತವಲ್ಲ, ನಮ್ಮ ರಾಜ್ಯದ ದುರಂತ.




-ಸಿ.ಶಿವಕುಮಾರ್, ಚಿನವಾರನಹಳ್ಳಿ

'ಕಂಡಹಾಗೆ' ಅಂಕಣದಲ್ಲಿ ಸಂಪಾದಕರು ಸಿದ್ಧರಾಮಯ್ಯಗೆ ಕೆಲ ಉಪಯುಕ್ತ ಸಲಹೆಗಳನ್ನು ಹೇಳಿರುವುದು ಸಮಯೋಚಿತವಾಗಿದೆ. ಉಪಮುಖ್ಯಮಂತ್ರಿ, ಹಣಕಾಸು, ಅಬ್ಕಾರಿಗಳಂತಹ ಪ್ರಮುಖ ಖಾತೆಗಳನ್ನು ನಿಭಾಯಿಸಿ ಸಾಕಷ್ಟು ಆಡಳಿತಾನುಭವ ಪಡೆದಿರುವ ಸಿದ್ಧರಾಮಯ್ಯ ಈಗ ಜವಾಬ್ದಾರಿಯುತ ನಾಯಕನಂತೆ ನಡೆದುಕೊಳ್ಳಬೇಕಿದೆ. ಅವರ್ರೀಗ ಭ್ರಷ್ಟಾಚಾರಿಗಳ ಮಹಾಕೂಟದಂತಿರುವ ಕಾಂಗ್ರೆಸ್ ಪಕ್ಷದಲ್ಲಿದ್ದರೂ ಕರ್ನಾಟಕದ ಒಳ್ಳೆಯ ಭವಿಷ್ಯಕ್ಕಾಗಿ ಚಿಂತನೆ ಮಾಡುತ್ತಾ ಸಮಾನ ಮನಸ್ಕರ ಪಡೆಯೊಂದನ್ನು ಕಟ್ಟಬೇಕಿದೆ. ದಾರಿ ತಪ್ಪಿಸುವ ಭಟ್ಟಂಗಿಗಳ ಅಸಂಬದ್ಧ ಸಲಹೆ-ಹೊಗಳಿಕೆಗಳಿಗೆ ಸಿಲುಕದೆ, ಸ್ವಪ್ರತಿಷ್ಠೆ ಬಿಟ್ಟು ಆತುರವಾದಿಯಾಗದೆ ಮತ್ತು ಕೇವಲ ಕುರುಬ ಜನಾಂಗದ ಲೀಡರ್ ಎಂದು ಬಿಂಬಿಸಿಕೊಳ್ಳದೆ ಎಲ್ಲಾ ಶೋಷಿತ ಬಡಜನರ ಪರವಾದ ಧ್ವನಿಯಾಗಿ ನಿಂತಿರುವ ನಾಯಕನೆಂದು ನಿರೂಪಿಸುವ ಕಾಲ ಬಂದಿದೆ. ಕಾಲದ ಆಶಯಕ್ಕೆ ಪ್ರಾಮಾಣಿಕವಾಗಿ ಸ್ಪಂದಿಸಿ ಹಾಗೂ ಆ ದೆಸೆಯಲ್ಲಿ ಕಾರ್ಯೋನ್ಮುಖವಾಗಲೇಬೇಕಿದೆ.

-ಇಂದಿರಾ ಶ್ರೀಧರ್, ದಾವಣಗೆರೆ

ಆಗಸ್ಟ್ 9ರ ಲಂಕೇಶ್ ಸಂಚಿಕೆಯಲ್ಲಿ ಬಿ.ಚಂದ್ರೇಗೌಡರು ಬರೆದ "ಸೂರಿಲ್ಲದ ಕೊರಗಿನಲ್ಲಿ ಕಣ್ಮರೆಯಾದ ಕರೀಂಖಾನ್" ಲೇಖನ ಓದಿದಾಗ ಕಣ್ಣಾಲಿಗಳು ತೇವಗೊಂಡವು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾ ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದರೂ ಸಹ ಅವರು ಜನಪದ ತುಣುಕುಗಳನ್ನು ಬೊಚ್ಚು ಬಾಯಿಯ ಮೂಲಕ ತೊದಲು ನುಡಿಯುತ್ತಿದ್ದರು. ಹುಟ್ಟಿನಿಂದ ಸಾಯುವವರೆಗೂ ನಿರಂತರವಾಗಿ ಕರೀಂಖಾನ್ ಕನ್ನಡಕ್ಕಾಗಿ ದುಡಿದರು. ಅವರ ಸೇವೆಯನ್ನಾದರೂ ಪರಿಗಣಿಸಿ ಅವರು ಬದುಕಿದ್ದಾಗ ಸೂರನ್ನು ನೀಡಿದ್ದರೆ ಕೊನೆಗಾಲದಲ್ಲಿ ನೆಮ್ಮದಿ ಪಡುತ್ತಿದ್ದರು.



-ಕಾಳೀಹುಂಡಿ ಶಿವಕುಮಾರ್, ಮೈಸೂರು

ಆಗಸ್ಟ್ 2ರ ಸಂಚಿಕೆಯಲ್ಲಿ 'ಎಲ್ಲಿಗೆ ಪಯಣ?' ಎಂಬ ಶೀರ್ಷಿಕೆಯಡಿ ಬಳಿದಾಳೆ ಈಶರವರು ನಕ್ಸಲ್ ರಮೇಶ್‌ರವರೊಂದಿಗೆ ಮಾಡಿದ ಸಂದರ್ಶನವನ್ನು ಓದಿದೆ. ನಕ್ಸಲೀಯ ಹೋರಾಟ ಅನಿವಾರ್ಯವೇಕೆ ಎಂಬುದಕ್ಕೆ ಅಂದು ಸಾಕೇತ ರಾಜನ್ ನೀಡಿದ್ದ ಪತ್ರಿಕಾ ಹೇಳಿಕೆ ಹಾಗೂ ಇಂದು ರಮೇಶ್ ಸಂದರ್ಶನದ ಮಾತುಗಳೇ ಸಾಕ್ಷಿ.

ಅರೆಊಳಿಗಮಾನ್ಯ, ಅರೆ ಮಹಾಹತುಶಾಹಿ, ಭ್ರಷ್ಟ ವ್ಯವಸ್ಥೆಯನ್ನು ಕೊನೆಗಾಣಿಸಲು ನಕ್ಸಲೀಯ ಹೋರಾಟ ಅನಿವಾರ್ಯ. ಇಂಥ ಹೋರಾಟದಲ್ಲಿ ತೊಡಗಿದ ರಮೇಶ್ ಮೇಲೆ ಸುಳ್ಳು ಕೇಸು ಜಡಿದು, ಬಂಧಿಸಿ ಕೊನೆಗೆ ಅನಿವಾರ್ಯವಾಗಿ ಸರ್ಕಾರ ಬಿಡುಗಡೆಗೊಳಿಸಿದೆ.

-ರವಿ, ತುರ್ವಿಹಾಳ್.

ತನನಂ ತನನಂ



ತೇಲಿ ಬಂದ ದಾರಿ • ಕವಿತಾ ಲಂಕೇಶ್

ಸುದೀಪ್, ದರ್ಶನ್, ಪುನೀತ್ ಪಾಟ ತಮಿಳಿನಲ್ಲಿ busy ಇದ್ದ ಶ್ಯಾಮ್‌ನನ್ನು ತಲುಪಿತೇಕೆ ಈ 'ತನನಂ ತನನಂ' ರಾಗ? ಕುತೂಹಲವೆ?

ನಾನು ಕನ್ನಡದ ಜನಪ್ರಿಯ ನಟರು ಈ ಪಾತ್ರಕ್ಕೆ ಹೊಂದುತ್ತಾರೆಯೋ ಎಂದು ನೋಡಿದೆ. ನಾಯಕನ ಪಾತ್ರಕ್ಕೆ ಮೊಟ್ಟಮೊದಲ ಬಾರಿಗೆ ನಾನು approach ಮಾಡಿದ್ದು ಯಾರನ್ನು ಗೊತ್ತೆ? ಅಭಿಮಾನಿಗಳ ಪಾಲಿಗೆ 'ಕಿಚ್ಚ'ನಾಗಿರುವ ಸುದೀಪ್‌ನನ್ನು! ಕತೆ, ಸ್ಕ್ರಿಪ್ಟ್‌ನ್ನು ಮನಸಾರೆ ಮೆಚ್ಚಿದ ಸುದೀಪ್‌ಗೆ ಡೇಟ್ಸ್ ಪ್ರಾಬ್ಲಂ ಇತ್ತು. ಇರಲಿ, ನಂತರ ವಿಜಯ್ ರಾಘವೇಂದ್ರನ ಕೈಗೆ ಸಾಗಿತು ನನ್ನ ಈ ಸ್ಕ್ರಿಪ್ಟ್. ಮೇಲುನೋಟಕ್ಕೇ ಕತೆ ಮೆಚ್ಚಿದ ಈ ಹುಡುಗ ಮನೆಗೊಯ್ದು ಪೂರ್ತಿ ಸ್ಕ್ರಿಪ್ಟ್ ಓದಿ ಥ್ರಿಲ್ ಆದ. ಆದರೆ ಮತ್ತದೇ ಡೇಟ್ಸ್ ಪ್ರಾಬ್ಲಂ ಎಂದ. 'ಕಲ್ಲರಳಿ ಹೂವಾಗಿ' ಮುಗಿದ ನಂತರ ಜೂನ್‌ನಲ್ಲಿ ಆಗಬಹುದೇ? ಎಂದು ಕೇಳಿದ.

ಇಲ್ಲೊಂದು ತಮಾಷೆ ನಡೆಯಿತು. ವಿಜಯ್‌ಗೆ ಡೇಟ್ಸ್ ಪ್ರಾಬ್ಲಂ ಇದ್ದಿದ್ದರಿಂದ ಮುರಳಿ ಆಗಬಹುದಾ? ಎಂದು ಕೇಳಿಬಿಟ್ಟರು ವಿಜಯ ರಾಘವೇಂದ್ರನ ತಂದೆ ಚಿನ್ನೇಗೌಡ್ರು. ಒಂದೇ ತರಹ ಇರುವ ಈ ಸಹೋದರರು ಪರಸ್ಪರ PRO ಕೆಲಸ ಮಾಡುತ್ತಿದ್ದಾರೇನೊ ಎಂದು ನಗೆ ಉಕ್ಕಿ ಬಂತು. ಮುರಳಿಗೂ ಡೇಟ್ಸ್ ಇರಲಿಲ್ಲ.

ನಾನು ಇನ್ನು ತಡ ಮಾಡುವಂತಿರಲಿಲ್ಲ, ಏಕೆಂದರೆ ಕನ್ನಡದ ಇಬ್ಬರು ಟಾಪ್ ನಟಿಯರಾದ ರಮ್ಯ, ರಕ್ಷಿತಾರ ಡೇಟ್ಸ್ ಇಟ್ಟುಕೊಂಡು, ಹೀರೋನ ಡೇಟ್ಸ್‌ಗೆ ಕಾಯುತ್ತಾ ಕೂಡುವುದು ಸಾಧ್ಯವಿರಲಿಲ್ಲ, ರಮ್ಯ, ರಕ್ಷಿತಾರೋ "ತನನಂ ತನನಂ" ಮಾಡಲು ತುದಿಗಾಲ ಮೇಲೆ ಕಾಯ್ತಾ ಇದ್ದರು ಬೇರೆ.

ಹಲವು ತಮಿಳು, ತೆಲುಗು ಚಿತ್ರಗಳಲ್ಲಿ ಮಿಂಚಿದ್ದ, ಚಿತ್ರವೊಂದರಲ್ಲಿ ಪ್ರಕಾಶ್ ರೈ ಮಗನಾಗಿ ಮಿಂಚಿದ್ದ ನವದೀಪ್ ಎಂಬ ಸ್ಫುರದ್ರೂಪಿ ಹುಡುಗನನ್ನು ಈ ಪಾತ್ರಕ್ಕೆ ಕೇಳಿ ನೋಡಿದೆ. ಇದಕ್ಕೆ ಕಾರಣ ಪಾತ್ರಕ್ಕೆ ಮೋಹಕ ಕಣ್ಣುಗಳೇ ಮುಖ್ಯವಾಗಿರುವುದರಿಂದ (ಇದು ಒಂದು ಸಸ್ಪೆನ್ಸ್! ಚಿತ್ರ ನೋಡಿದ್ರೆ ಮಾತ್ರ ತಿಳಿಯುತ್ತೆ!) ಸುಂದರ ಕಂಗಳ ನವದೀಪ್ perfect match ಅನಿಸಿತ್ತು, ಆ ಹುಡುಗ ಥಟ್ಟನೇ ಏನು ಹೇಳಿದ ಗೊತ್ತೆ? "ಸೆಕೆಂಡರಿ ಮಾರ್ಕೆಟ್ ಎನಿಸಿರುವ ಕನ್ನಡ ಚಿತ್ರರಂಗದಲ್ಲಿ ನಟಿಸುವುದೆಂದರೆ ಅದು degrade ಆದಂತೆ"....


ತಮಿಳು, ತೆಲುಗಿನ ಹೊಸಬರಿಗೂ ಕನ್ನಡ ಚಿತ್ರರಂಗದ ಬಗ್ಗೆ ಇಂತಹ ಅಭಿಪ್ರಾಯ ರೂಪುಗೊಂಡು ಬಿಟ್ಟಿದೆ. ಅದಕ್ಕೆ, ನಮ್ಮ ಈ ಚಿತ್ರರಂಗದ ಗೊಡ್ಡುತನ, ಸೋಮಾರಿತನಗಳೇ ಕಾರಣವಿರಬಹುದೇ?

ಫೈನಲಿ, ನಾನು ಶ್ಯಾಮ್‌ನತ್ತ ತಿರುಗುವಂತೆ ಮಾಡಿದ್ದು ಪತ್ರಕರ್ತ ಮಿತ್ರ ಸಂದೀಪ ಮಲಾನಿ.... ಇಂಟರ್‌ನೆಟ್‌ನಲ್ಲಿ ಶ್ಯಾಮ್‌ನ ವಿವಿಧ ಭಂಗಿಗಳಿರುವ ಫೋಟೋಗಳನ್ನು ನೋಡಿ ಆತನನ್ನು ಬೆಂಗಳೂರಿಗೆ ಕರೆಸಿ, ಆತನ ನಟನಾ ಸಾಮರ್ಥ್ಯವನ್ನು ಪರೀಕ್ಷಿಸಿ, ಪಾತ್ರಕ್ಕೆ ಬೇಕಿದ್ದ ಮೇಕಪ್ ಮಾಡಿಸಿ ನೋಡಿದ ನಂತರ ಈ ಪಾತ್ರಕ್ಕೆ ಈತನೇ ಫೈನಲ್ ಆಯ್ಕೆ ಎಂದು ನಿರ್ಧರಿಸಿದೆ. ಇದಕ್ಕೂ ಮೊದಲು ಈತ ಕನ್ನಡದಲ್ಲಿ ಸಿಕ್ಕ ಹಲವಾರು ಅವಕಾಶಗಳನ್ನು ರಿಜೆಕ್ಟ್ ಮಾಡಿದ್ದ. ತಮಿಳಲ್ಲಿ busy ಇರುವ ಈ ಹುಡುಗ ನಿಗೆ ಸ್ಕ್ರಿಪ್ಟ್ ಇಷ್ಟವಾದದ್ದೇ ತಡ ತನ್ನ ಡೇಟ್ಸ್‌ನಲ್ಲಿ ಬದಲಾವಣೆ ಮಾಡಿಕೊಂಡು "ನಿಮ್ಮ ಚಿತ್ರದಲ್ಲಿ ನಟಿಸುವ ಆಸೆ" ಅಂತ ಹೇಳಿ ಡೇಟ್ಸ್ ನೀಡಿಯೇಬಿಟ್ಟ. ಬೆಂಗಳೂರಿನ ಫ್ರೆಜರ್ ಟೌನ್‌ನಲ್ಲೇ ಹುಟ್ಟಿ, ಬೆಳೆದು ಇಲ್ಲೇ ಎಜ್ಯುಕೇಷನ್ ಮುಗಿಸಿರುವ ಶ್ಯಾಮ್ ಇಲ್ಲೇ ಮಾಡೆಲಿಂಗ್ ಕ್ಷೇತ್ರದಲ್ಲೊಂದಿಷ್ಟು ಕೆಲಸ ಮಾಡಿ ಅನಿವಾರ್ಯ ಕಾರಣಗಳಿಂದ ತಮಿಳಿಗೆ ಹೋಗಬೇಕಾಯ್ತು. ಈ ಮೊದಲು ರಜನಿ ಕಾಂತ್, ಪ್ರಕಾಶ್ ರೈ ಮುಂತಾದವರು ಸಹ ಕನ್ನಡದಲ್ಲಿ ಕೇವಲ ಸಣ್ಣ ಪುಟ್ಟ ಪಾತ್ರ ಪಡೆದು ಬೇಜಾರಾಗಿ ತಮಿಳಿನಲ್ಲಿ ಸೂಪರ್ ಸ್ಟಾರ್‌ಗಳಾಗಿದ್ದು ನೆನಪಿದೆಯಲ್ಲವೇ

ಶ್ಯಾಮ್‌ನದು ಎಂತಹಾ ಲಕ್ ನೋಡಿ. ಆತನ ತಮಿಳಿನ ಮೊದಲ ಚಿತ್ರದಲ್ಲಿ ಆತನ ಎದುರು ಇಬ್ಬರು ಟಾಪ್ ನಟಿಯರಾದ ಸಿಮ್ರಾನ್, ಜ್ಯೋತಿಕಾಗಳು ನಟಿಸಿದ್ದರು! ಇಲ್ಲಿ ಕನ್ನಡದಲ್ಲೂ ಆತನ ಪ್ರಥಮ ಚಿತ್ರ 'ತನನಂ ತನನಂ'ನಲ್ಲಿ ಟಾಪ್ ನಟಿಯರಾದ ರಮ್ಯ, ರಕ್ಷಿತಾರ ಜೊತೆ ನಟಿಸುವ ಅವಕಾಶ ಈ ಲಕ್ಕಿ ಶ್ಯಾಮ್‌ಗೆ!

ಈ ಚಿತ್ರದ ಪ್ರಥಮ ಪತ್ರಿಕಾಗೋಷ್ಠಿ ನಡೆಯುವುದಕ್ಕೂ ಮುಂಚಿನವರೆಗೆ ನಮ್ಮ ಪ್ರೊಡ್ಯುಸರ್ ಎನ್.ಎಮ್. ಸುರೇಶ್‌ಗೆ ಈ ಹೊಸ ಮುಖ ಶ್ಯಾಮ್ ಬಗ್ಗೆ ಭಯ. ಇಲ್ಲಿಯ ಹೀರೋ ಆದ್ರೆ ಪಟ್ ಅಂತಾ ಮಾರ್ಕೆಟ್ ಸಿಕ್ಕುಬಿಡುತ್ತೆ ಅನ್ನೋ ಸವೆದು ಹೋದ ಲೆಕ್ಕಾಚಾರದ ಬಗ್ಗೆ ಸುರೇಶ್‌ಗೆ ತುಂಬಾ ನಂಬಿಕೆಯಿತ್ತು. ಇಲ್ಲಿ ಅಭಿಮಾನಿಗಳಿಗೆ ತಕ್ಕಂತೆ ಬ್ರ್ಯಾಂಡ್ ಆಗಿರುವ ನಮ್ಮ ಹೀರೋಗಳ ಇಮೇಜ್‌ನಿಂದ ಆಗಬಹುದಾದ ತೊಂದರೆಗಳನ್ನು ಸುರೇಶ್‌ಗೆ ವಿವರಿಸಿ ವಿವರಿಸಿ ಸುಸ್ತಾದೆ. ಕತೆ, ಚಿತ್ರಕತೆ ಮತ್ತು ನಟನೋರ್ವನ ಇಮೇಜ್ ಮೀರಿದ ನಟನಾ ಸಾಮರ್ಥ್ಯ ಬಹುಮುಖ್ಯ ಎನ್ನುವುದು ನನ್ನ ಅಭಿಪ್ರಾಯ. ನನ್ನ ಈ ಚಿತ್ರದಲ್ಲಿ ಒಂದೇ ಒಂದು ನ್ಯಾಚುರಲ್ ಫೈಟ್ ಸೀನ್ ಇದೆಯಷ್ಟೇ. ಈ ಹೊಡಿ-ಬಡಿ ಹೀರೋಗಳಿಗೆ ಅನಗತ್ಯವಾದ ಭಯಂಕರ ಫೈಟ್ಸ್, ಅದಕ್ಕೂ ಭಯಂಕರವಾದ ಹೀರೋ ಗುಣಗಾನದ ಡೈಲಾಗ್, ಸೀನ್‌ಗಳನ್ನು ತುರುಕುವುದು ನನ್ನಿಂದಾಗದ ಕೆಲಸ. ಅದು ನನ್ನ ಸಿನಿಮಾ ಮೇಕಿಂಗ್ ಸ್ಟೈಲ್ ಅಲ್ವೇ ಅಲ್ಲ.

ಹೊಳೆಯುವ ಕಂಗಳ ಸುಂದರ ಶ್ಯಾಮ್..



ಈಗ ಎಡಿಟಿಂಗ್ ಆದ ಮೇಲೆ ಸಿನಿಮಾವನ್ನು ನೋಡಿದ ನಂತರ ಎನ್.ಎಮ್. ಸುರೇಶ್‌ಗೆ ಶ್ಯಾಮ್ ಬಗ್ಗೆ ವಿಪರೀತ ಅಭಿಮಾನ ಹುಟ್ಟಿಬಿಟ್ಟಿದೆ. ಅಷ್ಟು ಸಖತ್ತಾಗಿ ಮಾಡಿದ್ದಾನೆ ಶ್ಯಾಮ್.

ಇಲ್ಲಿ ಇನ್ನೊಂದು important ವಿಷಯ ಹೇಳ್ಬೇಕು. ಶ್ಯಾಮ್ ಮುಸ್ಲಿಮ್ ಪಂಗಡಕ್ಕೆ ಸೇರಿರುವ ಹುಡುಗ ಎಂಬುದು ಈ ಗಾಂಧಿನಗರದ ಗೊಡ್ಡು ಪಂಡಿತರ ಪ್ರಕಾರ ನೆಗೆಟಿವ್ ಅಂಶವಂತೆ. ಅಲ್ಲಿ ಬಾಲಿವುಡ್‌ನಲ್ಲಿ ಅಮೀರ್, ಶಾರುಖ್, ಸಲ್ಮಾನ್‌ಗಳು ಎವರ್‌ಗ್ರೀನ್ ಹೀರೋಗಳಂತೆ ಮಿಂಚುತ್ತಿಲ್ಲವೆ? ಆದರೆ ಇಲ್ಲಿ ಯಾಕೆ ಸಮೀರ್ ಎಂಬ ಮುಸ್ಲಿಮ್ ಹುಡುಗ ಶ್ಯಾಮ್ ಎಂದು ತನ್ನ ಹೆಸರು ಬದಲಿಸಿಕೊಳ್ಳಬೇಕಾಗುತ್ತದೆ? ಯಾಕೆ ಮುಸ್ಲಿಮರು ಭಾರತೀಯರಲ್ಲವೆ? ಗಾಂಧಿನಗರ ಇಂತಹ ಅತಿರೇಕದ, ಭಾವುಕ ನಿರ್ಧಾರಗಳಿಂದಲೇ ದಿಕ್ಕು ತಪ್ಪುತ್ತಿದೆಯಾ?

ಶ್ಯಾಮ್‌ಗೆ ಆರಂಭದಲ್ಲಿ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಪಡೆಯಲು ಇಂತಹ ಹಲವಾರು ಅಂಶಗಳು ಅಡ್ಡಿಗಳಾಗಿದ್ದರಿಂದಲೇ ಆತ ತಮಿಳಿಗೆ ಹೋದ.

ಈಗ ನನ್ನ ಈ ಚಿತ್ರದಲ್ಲಿ ಸಂಪ್ರದಾಯಸ್ಥ ಹಿಂದೂ ಯುವಕನ ಪಾತ್ರದಲ್ಲಿ ಅತ್ಯದ್ಭುತ ಅಭಿನಯ ನೀಡಿದ್ದಾನೆ ಈ ಮುಸ್ಲಿಮ್ ಪ್ರತಿಭೆ ಶ್ಯಾಮ್! ಕಲೆಗೆ ಜಾತಿ, ಧರ್ಮಗಳ ಹಂಗಿಲ್ಲ ಅಲ್ಲವೆ?

ಪಾತ್ರಗಳ ಆಯ್ಕೆಯೇನೋ ಆಯ್ತು. ಸಂಗೀತ ಪ್ರಧಾನ ಚಿತ್ರವಾದ್ದರಿಂದ ಶಾಸ್ತ್ರೀಯ (ಕ್ಲಾಸಿಕ್) ಮತ್ತು ಕಮರ್ಷಿಯಲ್ ಸಂಗೀತಗಳ ಮಿಶ್ರಭಾವವನ್ನು ಉಂಟು ಮಾಡಿ ಎಲ್ಲ ವರ್ಗದವರನ್ನೂ ಮೆಚ್ಚಿಸುವ ಜವಾಬ್ದಾರಿ ನನ್ನ ಮೇಲಿತ್ತು. ಆಗ ನಾನು ಸಂಗೀತ, ಸಾಹಿತ್ಯಗಳ ಶ್ರೇಷ್ಠತೆಗಾಗಿ ಹುಡುಕಾಟ ನಡೆಸಿದ್ದನ್ನು ಮುಂದಿನವಾರ ಹೇಳ್ತೀನಿ. ಸದ್ಯಕ್ಕೆ ಬೈಬೈ.

ನಿರೂಪಣೆ : ಪಿ.ಕೆ. ಮಲ್ಲನಗೌಡರ್

ಎಲ್ಲಿ ಹೋದವಾ ಅರಗಿಣಿಗಳು?

ಅದು 'ತ್ರಿದೇವ್' ಚಿತ್ರದ ಕ್ಲೈಮ್ಯಾಕ್ಸ್....
ಓಯೆ ಓಯೆ ಓಯೆ
ಓಯೆ ಊ ಊ ಆ....
ಗಜರ್ ನೆ ಕಿಯಾ ಹೈ ಇಶಾರಾ....



ಈ ಹಾಡಿಗೆ ಮಾದಕವಾಗಿ ಕುಣಿದು ಮಾದಕತೆ ಹರಡಿ ಪಡ್ಡೆಗಳನ್ನು ರೋಮಾಂಚನಗೊಳಿಸಿದ್ದ ಆ ಮೂರು ಅರಗಿಣಿಗಳೆಲ್ಲಾ ಎಲ್ಲಿ ಹಾರಿ ಹೋದವು?

ಮಾಧುರಿ ದೀಕ್ಷಿತ್, ಸಂಗೀತಾ ಬಿಜಲಾನಿ, ಸೋನಮ್ ಎಂಬಾ ಆ ಚೆಲುವೆಯರನ್ನು ಮರೆಯಲಾದೀತೆ?

ವಿದೇಶದಲ್ಲಿರುವ ಡಾಕ್ಟರ್‌ರೊಬ್ಬರನ್ನು ಮದುವೆಯಾಗಿ ಮಾಧುರಿ ಮಗು ಹೆತ್ತ ಮೇಲೆ ಗಾಯಬ್! ಅಜರ್ ಜೊತೆ ಇನ್ನಿಂಗ್ಸ್ ಆರಂಭಿಸಿದ 'ಬೌಲಿಂಗ್' ಚೆಲುವೆ ಸಂಗೀತಾ ಅಂದಿನಿಂದ ಸುದ್ದಿಯಲ್ಲಿಲ್ಲ. ಇನ್ನು ಈ ಸೋನಮ್ ಎಂಬ ಬೆಡಗಿ ಅದೆಲ್ಲಿ ಹೋಯಿತೊ?

ಯುವರಾಜ್‌ಸಿಂಗ್‌ಗಾಗಿ ಕಿಮ್ V/s ಶಮಿತಾ!



ಬಾಲಿವುಡ್‌ನ ಎರಡು ಬಣ್ಣದ ಚಿಟ್ಟೆಗಳೀಗ ಒಂದೇ ಹುಡುಗನ ಮೇಲೆ ಕಣ್ಣು ಹಾಕಿವೆ.

ಕ್ರಿಕೆಟರ್ ಯುವರಾಜ್‌ಸಿಂಗ್‌ಗಾಗಿ ಕಿಮ್ ಶರ್ಮಾ ಮತ್ತು ಶಮಿತಾ ಶೆಟ್ಟಿ (ಶಿಲ್ಪಿಯ ಸಿಸ್ಟರ್) ನಡುವೆ ನಿತ್ಯ ಕಾದಾಟ. ಮೊದಲಿಗೆ ಕಠೋರ ಶಬ್ದಗಳಲ್ಲಿ ನಡೆದ ತಿಕ್ಕಾಟವೀಗ ರೆಸ್ಲಿಂಗ್ ಮ್ಯಾಚ್ ತಲುಪುವ ಸ್ಥಿತಿಗೆ ಬಂದಿದೆ.

ಮುಂಬೈ ನೈಟ್‌ಕ್ಲಬ್‌ನಲ್ಲಿ ಕಿಮ್ ಶರ್ಮಾ ಮತ್ತು ಶಮೀತಾ ಶೆಟ್ಟಿ ಮಧ್ಯೆ ಕೈಕೈ ಕಿತ್ತಾಟ ನಡೆಯಲಿತ್ತು, ಫ್ರೆಂಡ್ಸ್‌ಗಳ ಮಧ್ಯಸ್ಥಿಕೆಯಿಂದ ಅದು ನಿಂತಿದೆ. ಮತ್ಯಾವಾಗ ಸ್ಫೋಟಗೊಳ್ಳುವುದೋ?

ರೋಷದಿಂದ ಕುದಿಯುತ್ತಿವೆ 'ಪುಟಿಯುವ' ಯೌವ್ವನದ ಈ ಚಿಟ್ಟೆಗಳು!


ಯುವರಾಜ್ ಯಾರಿಗೆ LBW (love before wedding) ಆಗುತ್ತಾನೋ?

ಶಾಟ್ ಕಟ್

ಶಿವಣ್ಣ ಅಭಿಮಾನಿಗಳಿಗೆ

15 ವಾರ ನಿರಂತರವಾಗಿ ಪ್ರಕಟಗೊಂಡಿರುವ ಶಿವರಾಜ್ ಕುಮಾರ್‌ವರ ಆತ್ಮಚರಿತ್ರೆಗೆ ಈ ವಾರ ಒಂದು ಚಿಕ್ಕ ಬ್ರೇಕ್ ನೀಡುತ್ತಿದ್ದೇವೆ. ಮುಂದಿನ ವಾರ ಮತ್ತೆ ಈ ಆತ್ಮಚರಿತ್ರೆ ಎಂದಿನಂತೆ ಮುಂದುವರೆಯುತ್ತದೆ.

ರಾಜ್‌ಕುಮಾರ್ ಅವರ ನೂರು ದಿನದ ಶ್ರದ್ಧಾಂಜಲಿಯ ಕಾರ್ಯಕ್ರಮ, ಶಿವಣ್ಣ ನಾಯಕನಾಗಿ ನಟಿಸಿದ 'ಸಂತ' ಚಿತ್ರದ ಮುಹೂರ್ತ ಮತ್ತು ಐತಿಹಾಸಿಕ 'ಗಂಡುಗಲಿ ಕುಮಾರರಾಮ' ಸಿನಿಮಾದ ಬಿಡುಗಡೆ ಈ ಎಲ್ಲ ಕಾರ್ಯಕ್ರಮಗಳಲ್ಲಿ ಶಿವರಾಜ್ ಕುಮಾರ್ ಭಾಗವಹಿಸಲೇಬೇಕಾಗಿತ್ತು, ಸಮಯದ ಅಭಾವದಿಂದ ಅವರೊಂದಿಗೆ ನಮ್ಮ ಭೇಟಿ ಸಾಧ್ಯವಾಗಲೇ ಇಲ್ಲ.



ಹೀಗಾಗಿ ಇದೊಂದು ಚಿಕ್ಕ ಬ್ರೇಕ್. ಬ್ರೇಕ್‌ನ ನಂತರ ಮುಂದಿನ ವಾರ ಶಿವಣ್ಣ ಮತ್ತು ನಿಮ್ಮ ಭೇಟಿ ಎಂದಿನಂತೆ ಇದ್ದೇ ಇದೆ. ಓದುಗರು ದಯವಿಟ್ಟು ಸಹಕರಿಸಿ.

-ಸಂ

ಐಶ್ವರ್ಯಕ್ಕಿಂತಲೂ ಬುದ್ಧಿ 'ಮುಂದೆ' ಹೋಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ -ಪಂಡಿತ ತಾರಾನಾಥ

R.B.P. LANKESH, Kannada Weekly   Price Rs. 10/-   16-8-2006   RNI No. KARKAN2005/14648   Regd.No.KA/BG(S)/2036/2005



18th ಕ್ರಾಸ್‌ನಲ್ಲಿ 18ರ ಹರೆಯ!


'18th ಕ್ರಾಸ್'. ಹೀಗೆಂದು ವಿಭಿನ್ನ ಮತ್ತು ವಿಚಿತ್ರವಾದ ಹೆಸರಿನ ಚಿತ್ರ ನಾಡಿದ್ದು 18ನೇ ತಾರೀಖಿನಂದು ಸೆಟ್ಟೇರಲಿದೆ. ಆ ದಿನ ಚಿತ್ರದ ಮುಹೂರ್ತದಲ್ಲಿ 18 ಜನ ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರಂತೆ. ಅಂದಹಾಗೆ ಇದರ ಚಿತ್ರಕತೆಯನ್ನು 18ರ ಹರೆಯದ ಹುಡುಗ-ಹುಡಿಗಿಯರ ಪ್ರೇಮದ ಸುತ್ತ ಹೆಣೆದಿದ್ದಾರಂತೆ.

ವಿ. ಮನೋಹರ್ ಜೊತೆ ಕೆಲಸ ಮಾಡಿದ ಅನುಭವವಿರುವ ಸಾಯಿ ಶಂಕರ್ ಈ ಚಿತ್ರದ ಮುಖಾಂತರ ಸ್ವತಂತ್ರ ನಿರ್ದೇಶಕರಾಗಲಿದ್ದಾರೆ. 'ಶಿಷ್ಯ' ಚಿತ್ರದ ನಾಯಕ ನಟ ದೀಪಕ್ ಇಲ್ಲೂ ನಾಯಕ. ಇದರ ನಿರ್ಮಾಪಕರು ಚಿಕ್ಕಣ್ಣ. ಇವರೂ ಚಿತ್ರರಂಗಕ್ಕೆ ಹೊಸಬರು.

ಜಂಭವಿಲ್ಲದ 'ಜಂಬದ ಹುಡುಗಿ'

'ಜಂಭದ ಹುಡುಗಿ' ಎಂಬ ಚಿತ್ರ ಮುಂದಿನ ವಾರ ಸೆಟ್ಟೇರಲಿದೆ. ಆದರೆ ಇದರ ನಾಯಕಿ ಅಷ್ಟೊಂದು ಜಂಬವಿಲ್ಲದ ಸಿಂಪಲ್ ಹುಡುಗಿ ಪ್ರಿಯಾ. ಈ ಹಿಂದೆ ರಾಜೇಶ್ ರಾಮನಾಥ್ ಜೊತೆ 'ಬ್ಲಾಕ್ ಅಂಡ್ ವೈಟ್' ಎಂಬ ಫ್ಲಾಪ್ ಚಿತ್ರದಲ್ಲಿ ನಾಯಕಿಯಾಗಿ ಪ್ರಿಯಾ ನಟಿಸಿದ್ದಳು. ಜಂಭವಿಲ್ಲದ ಈ ಹುಡುಗಿಯನ್ನು ಈಗ ಸೀತಾರಾಂ ಕಾರಂತ್ ನಿರ್ದೇಶಿಸಲಿದ್ದಾರೆ.

'ಜಂಭದ ಹುಡುಗಿ' ಟೈಟಲ್‌ಗೆ ವಾಸ್ತವವಾಗಿ ರಮ್ಯ ಅಥವಾ ರಕ್ಷಿತಾ ನೂರಕ್ಕೆ ನೂರು ಹೇಳಿ ಮಾಡಿಸಿದಂತ ನಾಯಕಿಯರು ಎನ್ನುತ್ತಾರೆ ಗಾಂಧಿನಗರಿಗಳು. ಇದು ರಮ್ಯ ಮತ್ತು ರಕ್ಷಿತಾಗೆ ಸಲ್ಲುವ ಅಪಚಾರವಲ್ಲ, ಬದಲಾಗಿ ಗೌರವ ಅಂದರೆ ಅಚ್ಚರಿ ಆಗುತ್ತದಲ್ಲವೆ?!



ರಕ್ಷಿತಾ ಮಿಂಚೋ ಮಿಂಚು!

ಆಗಸ್ಟ್ 4 ವರಮಹಾಲಕ್ಷ್ಮಿ ಹಬ್ಬದ ದಿನ ನಟಿ ರಕ್ಷಿತಾಳ ಪಾಲಿಗೆ ಮರೆಯಲಾಗದ ದಿನವಾಗಿತ್ತು ಎಂದರೆ ತಪ್ಪಾಗಲಾರದು.

ಅಂದು ಒಟ್ಟು ಐದು ಚಿತ್ರಗಳು ಸೆಟ್ಟೇರಿದವು. ಈ ಐದರಲ್ಲಿ ಎರಡು ಚಿತ್ರಗಳಿಗೆ ಈಕೆಯೇ ನಾಯಕಿ. ಅಷ್ಟೇ ಅಲ್ಲ ಆಕೆಯ ಪ್ರಿಯತಮ ನಿರ್ದೇಶಕ ಪ್ರೇಮ್ ನಾಯಕನಾಗಿ ನಟಿಸುತ್ತಿರುವ ಚಿತ್ರದ ಮುಹೂರ್ತ ಕೂಡ ಅಂದೇ ನಡೆಯಿತು. ಅಂದು ಪ್ರಥಮ ಬಾರಿಗೆ ರಕ್ಷಿತಾ ಮತ್ತು ಪ್ರೇಮ್ ಜೊತೆ ಜೊತೆ ನಿಂತು ಛಾಯಾಗ್ರಾಹಕರಿಗೆ ಪೋಸು ನೀಡಿದರು. ಇಬ್ಬರೂ ದಂಪತಿಗಳಂತೆ ಶ್ರೀ ಶಿವಕುಮಾರ ಸ್ವಾಮೀಜಿಗಳ ಪಾದಕ್ಕೆ ನಮಿಸಿದರು. ಈ ಮಧ್ಯೆ ಆಕೆ ಮೈತುಂಬ ಬಟ್ಟೆ ತೊಟ್ಟಿರುವ 'ನೀನೆಲ್ಲೋ ನಾನಲ್ಲೆ' ಚಿತ್ರ ಹಿಟ್ ಆಗಿದೆ. ಅದರಲ್ಲಿ ಆಕೆಯ ನಟನೆಯನ್ನು ಎಲ್ಲರು ಕೊಂಡಾಡಿದ್ದಾರೆ.

ಪ್ರೇಮ್ ಜೊತೆ ನಿಶ್ಚಿತಾರ್ಥವಾದ ನಂತರ ರಕ್ಷಿತಾಳ ಕೆರಿಯರ್ ಗ್ರಾಫ್‌ನಲ್ಲಿ ಏರಿಕೆ ಕಾಣಿಸುತ್ತಿದೆ. ಕವಿತಾ ಲಂಕೇಶ್ ನಿರ್ದೇಶನದ 'ತನನಂ ತನನಂ' ಬಿಡುಗಡೆಯಾದ ನಂತರ ಅದು ಇನ್ನಷ್ಟು ಏರಬಹುದು.

ವಿಚಿತ್ರವೆಂದರೆ ರಕ್ಷಿತಾಳ ಮೈಮೇಲೆ ಬಟ್ಟೆ ಹೆಚ್ಚಾದಂತೆ ಆಕೆಯ ಕೆರಿಯರ್ ಗ್ರಾಫ್ ಕೂಡ ಏರುತ್ತಿದೆ. ಇದರಿಂದಾಗಿ ಇನ್ನು ಮುಂದೆ ಆಕೆ ತುಂಡು ಬಟ್ಟೆಯ ಬದಲು ಉದ್ದುದ್ದ ವಸ್ತ್ರ ಧರಿಸುವಂತಾಗಲಿ ಅಂತ ಪ್ರೇಮ್ ಆಶಿಸುತ್ತಿದ್ದಾರೆ ಎಂಬುದು ಮಾತ್ರ ಅವಳ ಅಭಿಮಾನಿಗಳ ಕುತರ್ಕ ಅಷ್ಟೇ!

ತಾಯಿಯ ಮಡಿಲ ಎದುರು ಭೂಪ



ಎಸ್. ನಾರಾಯಣ್ ನಿರ್ಮಾಣ, ನಿರ್ದೇಶನದ 'ತಾಯಿಯ ಮಡಿಲು' ಮೊನ್ನೆ ಅದ್ದೂರಿಯಾಗಿ ಆರಂಭವಾಯಿತು. ಮುಂದಿನ ವಾರ ನಾರಾಯಣ್‌ಗೆ ಪೈಪೋಟಿಯೆನ್ನುವಂತೆ ಅವರ ಸಹೋದರ ಗೋವಿಂದ್ ನಿರ್ದೇಶನದ 'ಭೂಪತಿ' ಎಂಬ ಚಿತ್ರ ಸೆಟ್ಟೇರಲಿದೆ. ಆ ಚಿತ್ರದ ನಿರ್ಮಾಪಕರು ಕೆ.ಸಿ.ಎನ್. ಚಂದ್ರು, ನಾಯಕ ದರ್ಶನ್.

"ದರ್ಶನ್‌ನನ್ನು ಕಿರುತೆರೆ ಮತ್ತು ಚಿತ್ರರಂಗಕ್ಕೆ ಪರಿಚಯಿಸಿದ್ದು ನಾನೇ. ಆದರೆ ಈಗ ನಾಯಕನಟನಾದ ನಂತರ ಆತ ಹಳೆಯದನ್ನು ಮರೆತಿದ್ದಾನೆ. ನನಗೆ ಕಾಲ್ ಶೀಟ್ ಕೊಡಲು




ಹಿಂಜರಿಯುತ್ತಿದ್ದಾನೆ...." ಎಂಬಿತ್ಯಾದಿಯಾಗಿ ಎಸ್. ನಾರಾಯಣ್ ಕೆಲವು ತಿಂಗಳ ಹಿಂದೆ ದರ್ಶನ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದರು. ಈ ಹಿನ್ನೆಲೆಯಲ್ಲಿ ಈಗ ನಾರಾಯಣ್‌ನಿಂದ ದೂರವಾಗಿರುವ ಗೋವಿಂದುಗೆ ದರ್ಶನ್ ಕಾಲ್‌ಶೀಟ್ ನೀಡಿರುವುದು ಗಾಂಧಿನಗರದಲ್ಲಿ ಮಜಬೂತಾಗಿ ಚರ್ಚೆಯಾಗುತ್ತಿದೆ. "ನೋಡಿ ದರ್ಶನ್ ಹೇಗೆ ಸೈಲೆಂಟಾಗಿ ಸಹೋದರರ ನಡುವಿನ ವೈಮನಸ್ಸನ್ನು ಬಳಸಿಕೊಂಡಿದ್ದಾರೆ?" ಎಂಬುದೇ ಚರ್ಚೆಯ ವಸ್ತುವಾಗಿದೆ.



'ತನನಂ ತನನಂ' ಚಿತ್ರದಲ್ಲಿ ರಮ್ಯಾ

ಪ್ರೀತಿಯ ರಗಳೆ & ಪ್ರೇಮಾಯಣ



ಮೊದಲ ಬಾರಿಗೆ 'ಪ್ರೀತಿ ಏಕೆ ಭೂಮಿಮೇಲಿದೆ?' ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿರುವ ಪ್ರೇಮ್ ಸಂಭಾವನೆ ಎಷ್ಟಿರಬಹುದು ಎಂಬುದೇ ಈಗ ಇಡೀ ಗಾಂಧಿ ನಗರದಲ್ಲಿ ಚರ್ಚೆ ಆಗುತ್ತಿರುವ ವಿಷಯ.

ಒಂದು ಮೂಲದ ಪ್ರಕಾರ ಪ್ರೇಮ್ ಈ ಚಿತ್ರದ ನಟನೆ ಮತ್ತು ನಿರ್ದೇಶನಕ್ಕಾಗಿ ಒಂದೂವರೆ ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿದ್ದಾರಂತೆ. ಆದರೆ ಇನ್ನೊಂದು ಮೂಲದ ಪ್ರಕಾರ ಈ ಚಿತ್ರಕ್ಕೆ ಪ್ರೇಮ್ ಸಂಭಾವನೆಯನ್ನೇ ಪಡೆಯುತ್ತಿಲ್ಲ; ಬದಲಾಗಿ ಚಿತ್ರ ಹಿಟ್ ಆದ ನಂತರ ಬಂದ ಲಾಭದಲ್ಲಿ ಶೇ. 50ರಷ್ಟನ್ನು ಪ್ರೇಮ್‌ಗೆ ನೀಡಲು ನಿರ್ಮಾಪಕ 'ಅಶ್ವಿನಿ' ರಾಂಪ್ರಸಾದ್ ಒಪ್ಪಿಕೊಂಡಿದ್ದಾರಂತೆ.

ಅಂದರೆ ಏನರ್ಥ? ಇಷ್ಟೇ: 'ಪ್ರೀತಿ ಏಕೆ...' ಸಿನಿಮಾ ಕೂಡ 'ಎಕ್ಸ್‌ಕ್ಯೂಸ್ ಮಿ' ಮತ್ತು 'ಜೋಗಿ' ತರಹ ಹಿಟ್ ಆದರೆ ಪ್ರೇಮ್ ಅತಿ ಹೆಚ್ಚು ಸಂಭಾವನೆ ಪಡೆಯುವ ನಾಯಕ ನಟ ಕಂ ನಿರ್ದೇಶಕರಾಗುವುದರಲ್ಲಿ ಸಂಶಯವೇ ಇಲ್ಲ.

* * * * *



ಪ್ರೇಮ್ ಮುಂಬೈನಲ್ಲಿ ಆರು ಜನ ಐಟಂ ಡ್ಯಾನ್ಸರ್‌ಗಳೊಂದಿಗೆ ಮಾತಾಡಿ ಬಂದಿದ್ದಾರೆ. 'ಜೋಗಿ' ಚಿತ್ರದಲ್ಲಿ ಯಾನಾ ಗುಪ್ತ ಡ್ಯಾನ್ಸ್ ಮಾಡಿದಂತೆ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದಲ್ಲೂ ಒಂದು ಐಟಂ ಸಾಂಗ್ ಇದೆಯಂತೆ.

ಪ್ರೇಮ್ ಮಾತನಾಡಿಸಿರುವ ಮಲ್ಲಿಕಾ ಶೆರಾವತ್, ದಿಯಾ ಮಿರ್ಜಾ, ಅಮಿಶಾ ಪಟೇಲ್, ಇಶಾ ಕೊಪ್ಪಿಕರ್ ಇತ್ಯಾದಿಗಳಲ್ಲಿ ಯಾರು ಅವರ ಜೊತೆ ಐದು ದಿನಗಳ ಕಾಲ ಐಟಂ ಸಾಂಗ್ ಚಿತ್ರೀಕರಣದಲ್ಲಿ ಕುಣಿಯಲು ಒಪ್ಪುತ್ತಾರೆ ನೋಡಬೇಕಿದೆ.

* * * * *

ಪ್ರೇಮ್ ಚಿತ್ರಕ್ಕೆ ನಾಯಕಿ ಯಾರು ಎಂಬುದರ ಬಗ್ಗೆ ಕಳೆದ ಹಲವಾರು ತಿಂಗಳುಗಳಿಂದ ಎಲ್ಲಡೆ ಕುತೂಹಲವಿತ್ತು. ಈಗ ಆ ಕುತೂಹಲಕ್ಕೆ ಪ್ರೇಮ್ ಅಂತಿಮ ತೆರೆ ಎಳೆದಿದ್ದಾರೆ.

ಈಗಾಗಲೇ ಒಂದೆರಡು ತಮಿಳು ಚಿತ್ರಗಳಲ್ಲಿ ನಟಿಸಿರುವ ತಮನ್ನಾ ಎಂಬ ಹುಡುಗಿ ಈ ಚಿತ್ರದ ನಾಯಕಿ. ಎರಡನೆ ನಟಿಯಾಗಿ ಮುಂಬೈ ಬೆಡಗಿ ನಿಶಾ ಕೊಠಾರಿ ಕೂಡ ಇದ್ದಾಳಂತೆ. ಹಾಗೆಯೇ ಮೂರನೆಯ ನಾಯಕ ನಟಿ ಕೂಡ ಈ ಚಿತ್ರದಲ್ಲಿದ್ದು ಅದಕ್ಕೆ ಕನ್ನಡದ ಹುಡುಗಿಯನ್ನೇ ಆಯ್ಕೆ ಮಾಡುತ್ತಾರಂತೆ ಪ್ರೇಮ್. ಆದರೆ ಆ ಹುಡುಗಿಯ ಆಯ್ಕೆ ಇನ್ನೂ ಆಗಿಲ್ಲದಿರುವುದರಿಂದ ಅವರು ಹೊಸ ನಟಿಯನ್ನು ಪರಿಚಯಿಸಲು ಹೊರಟಿದ್ದಾರೆ.

'ಉಪೇಂದ್ರ' ಚಿತ್ರದಲ್ಲಿ ಉಪ್ಪಿ ಮೂರು ನಾಯಕಿಯರೊಂದಿಗೆ ಕುಣಿದಾಡಿದ್ದು ಎಲ್ಲರಿಗೂ ನೆನಪಿದೆ. ಈಗ ಎಲ್ಲಾ ವಿಷಯಗಳಲ್ಲೂ ಉಪೇಂದ್ರನನ್ನು ಅನುಕರಿಸುತ್ತಿರುವ ಪ್ರೇಮ್ ಬೇಕಂತಲೇ ತಾವೂ ಮೂರು ನಾಯಕಿಯರೊಂದಿಗೆ ನಟಿಸುತ್ತಿದ್ದಾರೆಯೇ? ಎಂದು ಯಾರೂ ಕೇಳುವಂತಿಲ್ಲ. ಯಾಕೆಂದರೆ ಉಪೇಂದ್ರ ತಮ್ಮ ಎರಡನೇ ಸಿನಿಮಾಕ್ಕೆ ಮೂರು ಜನ ನಾಯಕಿಯರನ್ನು ಆಯ್ಕೆ ಮಾಡಿದ್ದರೆ ಪ್ರೇಮ್ ತಮ್ಮ ಮೊದಲ ಚಿತ್ರದಲ್ಲೇ ಈ 'ಸಾಧನೆ' ಮಾಡಿದ್ದಾರೆ!

* * * * *

ಇನ್ನು ಮುಂದೆ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಗಳು ಸಿನಿಮಾ ಸಮಾರಂಭಗಳಿಗೆ ಬರುವುದಿಲ್ಲವೆಂದು ಶಪಥ ಮಾಡಿದ್ದಾರಂತೆ. 99 ವರ್ಷ ವಯಸ್ಸಿನ 'ನಡೆದಾಡುವ ದೇವರು' ಚಿತ್ರರಂಗದ ಬಗ್ಗೆ ಅಲರ್ಜಿ ಹೊಂದಲು ಕಾರಣ 'ಪ್ರೀತಿ ಏಕೆ ಭೂಮಿ ಮೇಲಿದೆ' ಸಿನಿಮಾದ ಮುಹೂರ್ತ.



ಇದರ ನಾಯಕ ಪ್ರೇಮ್ ಮತ್ತು ನಿರ್ಮಾಪಕ ಅಶ್ವಿನಿ ರಾಂಪ್ರಸಾದ್ ಲೇಟ್ ಲತೀಫ್ ಎಂದು ಕುಖ್ಯಾತಿ ಪಡೆದಿರುವ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗಾಗಿ ಸುಮಾರು ಒಂದೂವರೆ ಗಂಟೆಗಳ ಕಾಲ ಕಾಯ್ದರು ಮಾತ್ರವಲ್ಲ, ಹಿರಿಯ ಸ್ವಾಮೀಜಿಯವರನ್ನೂ ತಮ್ಮ ಜೊತೆ ಕಾಯಿಸಿದರು. ಇದರಿಂದ ಬೇಸತ್ತ ಸ್ವಾಮೀಜಿ ಇನ್ನು ಮುಂದೆ ಸಿನಿಮಾ ಸಮಾರಂಭಗಳಿಗೆ ಹಾಜರಾಗದಿರಲು ನಿರ್ಧರಿಸಿದ್ದಾರೆ.

-ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 2667643
Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44